
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 5, 2008 ರೂ. 12/-

ಕೆಟ್ ಹಿಡಿದ
್ರಿಕೆಟಿಗರು



ಸ್ಸೆಸ್ ಕಚೇರಿಗೆ
ಸ್ಸೆಸ್‌ಗಳಿಂದಲೇ ಬಾಂಬ್

ಸ್ಟಾಲ್ ಕೊಲೆಗೆ
ಗರಾಜಶೆಟ್ಟಿ ಕುಮ್ಮಕ್ಕು

ವಮೊಗ್ಗ: ಚೆಡ್ಡಿಗಳ
ತಿ ಜಗಳ




ಗಣೇಶನಿಗೆ ಜ್ಯೋತಿಷಿಗಳ ಕಾಟ

ಂಗ್ರೆಸ್-ಬಿಎಸ್‌ಪಿ ಮೈತ್ರಿ?
ಾಯಾವತಿ ಉಪಪ್ರಧಾನಿ!



"ಅಭಿವೃದ್ಧಿ" ಹೆಚ್ಚಿದಷ್ಟೂ ಅಸಮಾನತೆ ಹೆಚ್ಚುತ್ತಿರುವುದೇಕೆ?




- ಶಿವಸುಂದರ್-

ಜಾಗತೀಕರಣವು ಎಲ್ಲರಿಗೂ ಒಳ್ಳೆಯದನ್ನೇ ಮಾಡಿದೆ ಮತ್ತು ಮಾಡುತ್ತಿದೆ ಎನ್ನುವುದು ಎಲ್ಲಾ ಆಳುವ ಸರ್ಕಾರಗಳು ಮಾಡುತ್ತಿರುವ ವಾದ. ಜಾಗತೀಕರಣವು ಅಭಿವೃದ್ಧಿಯ ವೇಗವನ್ನು ಜಾಸ್ತಿ ಮಾಡುವುದರಿಂದ ಅದರ ಲಾಭ ನಿಧಾನವಾಗಿ ತೊಟ್ಟಿಕ್ಕುತ್ತಾ ಎಲ್ಲರಿಗೂ ದಕ್ಕುತ್ತದೆ ಎಂಬುದು ವಿಶ್ವಬ್ಯಾಂಕಿನ ವಾದವಾದರೆ ಸಮುದ್ರದಲ್ಲಿ ಒಂದು ದೊಡ್ಡ ಅಲೆ ಎದ್ದರೆ ಹೇಗೆ ದೊಡ್ಡ ಹಡಗುಗಳ ಜೊತೆಗೆ ಸಣ್ಣ ಹಡಗುಗಳೂ ಮೇಲಕ್ಕೆ ಏರುವುವೋ ಹಾಗೆ ಅಭಿವೃದ್ಧಿಯ ಉಬ್ಬರ ಜಾಸ್ತಿ ಆದರೆ ಶ್ರೀಮಂತರ ಜೊತೆಗೆ ಬಡವರ ಅಭಿವೃದ್ಧಿಯೂ ಆಗುತ್ತದೆ ಎಂಬುದು ಐಎಂಎಫ್‌ನ ವಾದ. ಹೀಗಾಗಿ 1991ರಿಂದ ಹರಿಬಿಟ್ಟಿರುವ ಜಾಗತೀಕರಣದ ನೀತಿಗಳು ಜಗತ್ತಿನ ಎಲ್ಲಾ ಬಡವರಿಗೂ ಅಭಿವೃದ್ಧಿಯನ್ನು ತಂದಿದೆ ಎನ್ನುತ್ತಾರೆ ಮತ್ತು ಅದಕ್ಕೆ ಭಾರತದ ಮತ್ತು ಚೀನಾದ ಉದಾಹರಣೆಯನ್ನು ನೀಡುತ್ತಾರೆ.

1991ರಿಂದ ತ್ವರಿತಗತಿಯಲ್ಲಿ ಜಾಗತೀಕರಣ ನೀತಿಗಳನ್ನು ಅನುಷ್ಠಾನಕ್ಕೆ ತರುತ್ತಿರುವ 150 ದೇಶಗಳಲ್ಲಿ ಅವರು ಭಾರತ ಮತ್ತು ಚೀನಾದ ಉದಾಹರಣೆಯನ್ನು ಮಾತ್ರ ನೀಡುತ್ತಾರೆ. ಏಕೆಂದರೆ ಈ ಎರಡು ದೇಶಗಳಲ್ಲಿ ಮಾತ್ರ ಅಭಿವೃದ್ಧಿ ತೀವ್ರಗತಿಯಲ್ಲಿ ಸಾಗುತ್ತಿದೆ. ಭಾರತದ ಪ್ರಧಾನಮಂತ್ರಿಗಳ ಪ್ರಕಾರ ಈ ಸಾಲಿನಲ್ಲಿ ಭಾರತ ಶೇ.10ರ ಅಭಿವೃದ್ಧಿ ದರವನ್ನು ಸಾಧಿಸಲಿದೆ. ಜಾಗತೀಕರಣಕ್ಕೆ ಪೂರ್ವದಲ್ಲಿ ಈ ದೇಶದ ಅಭಿವೃದ್ಧಿ ದರ ಎಂದಿಗೂ ಶೇ.4 ದಾಟಿರಲಿಲ್ಲ. ಆದ್ದರಿಂದ ಅಭಿವೃದ್ಧಿಯ ವೇಗವು ಹೆಚ್ಚಾಗುತ್ತಿರುವಂತೆ ಬಡತನದ ಮತ್ತು ನಿರುದ್ಯೋಗದ ಇಳಿಕೆಯ ವೇಗವೂ ಅದೇ ವೇಗದಲ್ಲಿ ಸಾಗುತ್ತಿದೆ ಎಂದು ಅವರು ನಂಬಿಸಲು ಯತ್ನಿಸುತ್ತಿದ್ದಾರೆ.

ಆದರೆ ವಾಸ್ತವವೆಂದರೆ ಅಭಿವೃದ್ಧಿ ಹೆಚ್ಚಾದಂತೆ ನಿರುದ್ಯೋಗವು ಕಡಿಮೆಯಾಗುವುದಿರಲಿ, ಇದ್ದ ಉದ್ಯೋಗಗಳು ಕಡಿತವಾಗುತ್ತಾ ನಿರುದ್ಯೋಗವೂ ಹೆಚ್ಚಾಗುತ್ತಿದೆ. ಲಂಡನ್ನಿನ ಫೈನಾನ್ಷಿಯಲ್ ಟೈಮ್ಸ್‌ನ ಎಡ್ವರ್ಡ್





ಲ್ಯೂಸ್ ಎಂಬುವರು ಇತ್ತೀಚೆಗೆ ಮಾಡಿರುವ ಅಧ್ಯಯನದಲ್ಲಿ ಈ ಅಂಶವನ್ನು ಸಾಬೀತು ಮಾಡಿದ್ದಾರೆ. ಆ ಅಧ್ಯಯನದ ಪ್ರಕಾರ 1991ರಲ್ಲಿ ಟಾಟಾ ಸಂಸ್ಥೆ ತನ್ನ ಜಮ್‌ಶೆಡ್‌ಪುರ್ ಉಕ್ಕು ಕಾರ್ಖಾನೆಯಲ್ಲಿ ಒಂದು ಮಿಲಿಯನ್ ಟನ್ ಕಬ್ಬಿಣವನ್ನು ಉತ್ಪಾದನೆ ಮಾಡಲು 85,000 ಕಾರ್ಮಿಕರನ್ನು ನೊಂದಾಯಿಸಿಕೊಂಡಿತ್ತು. 2005ರಲ್ಲಿ ಆ ಸ್ಥಾವರದ ಉತ್ಪಾದನಾ ಪ್ರಮಾಣ ಐದು ಮಿಲಿಯನ್ ಟನ್ನಿಗೇರಿತ್ತು. ಆದರೆ ಉದ್ಯೋಗಿಗಳ ಸಂಖ್ಯೆ 44,000ಕ್ಕೆ ಕುಸಿದಿತ್ತು. ಅಂದರೆ ಉತ್ಪಾದನೆಯು ಐದು ಪಟ್ಟು ಹೆಚ್ಚಾದರೂ ಉದ್ಯೋಗಿಗಳ ಸಂಖ್ಯೆ ಅರ್ಧಕ್ಕರ್ಧದಷ್ಟು ಇಳಿದಿದೆ. ಅದೇರೀತಿಯಲ್ಲಿ ಪುಣೆಯಲ್ಲಿರುವ ಟಾಟಾ ಮೋಟಾರ್ಸ್ ಸಂಸ್ಥೆ 1999-2004ರ ನಡುವೆ ತನ್ನ ಕಾರ್ಮಿಕರ ಸಂಖ್ಯೆಯನ್ನು 35 ಸಾವಿರದಿಂದ 25 ಸಾವಿರಕ್ಕೆ ಇಳಿಸಿತು. ಆದರೆ ಅದೇ ಸಮಯದಲ್ಲಿ ತನ್ನ ಉತ್ಪಾದನೆಯನ್ನು ಮಾತ್ರ 1,29,000 ವಾಹನಗಳಿಂದ 3,11,500 ವಾಹನಗಳಿಗೇರಿಸಿಕೊಂಡಿತು.

ವಿದೇಶದ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡಬೇಕೋ ಬೇಡವೋ ಎಂಬ ನಿರ್ಧಾರಕ್ಕೆ ಬರಲು ಪೂರಕ ಮಾಹಿತಿ ಒದಗಿಸುವ ಮೋರ್ಗಾನ್ ಸ್ಟಾನ್ಲೀ ಸಂಸ್ಥೆಯು ಮತ್ತೊಂದು ಅಧ್ಯಯನ ನಡೆಸಿ ಈ ಮಾಹಿತಿಯನ್ನು ಹೊರಹಾಕಿದೆ: ಪುಣೆಯ ಬಜಾಜ್ ಮೋಟಾರ್ ಸೈಕಲ್ ಕಾರ್ಖಾನೆ 90ರ ಮಧ್ಯಭಾಗದಲ್ಲಿ 24,000 ಕಾರ್ಮಿಕರನ್ನು ಹೊಂದಿತ್ತು ಮತ್ತು ಒಂದು ಮಿಲಿಯನ್ ದ್ವಿಚಕ್ರ ವಾಹನಗಳನ್ನು ಉತ್ಪಾದಿಸುತ್ತಿತ್ತು. ಆದರೆ 2004ರ ವೇಳೆಗೆ ಅಲ್ಲಿಯ ಕಾರ್ಮಿಕರ ಸಂಖ್ಯೆ 10,500ಕ್ಕೆ ಇಳಿದಿದ್ದರೂ ಉತ್ಪಾದನೆ ಮಾತ್ರ 2.4 ದಶಲಕ್ಷ ವಾಹನಗಳಿಗೆ ಏರಿತ್ತು.

ಹೆಚ್ಚುಕಡಿಮೆ ಎಲ್ಲಾ ಖಾಸಗಿ ಕ್ಷೇತ್ರಗಳಲ್ಲೂ ಇದೇ ಬಗೆಯ ವಿದ್ಯಮಾನವೂ ಸಂಭವಿಸುತ್ತಿದೆ. ಜಾಗತೀಕರಣದ ವಕ್ತಾರರು ಮಾರುಕಟ್ಟೆ ಮತ್ತು ಖಾಸಗಿ ಕ್ಷೇತ್ರಗಳು ಬರಲಿರುವ ದಿನಗಳಲ್ಲಿ ಅಪಾರ ಉದ್ಯೋಗವನ್ನು ಸೃಷ್ಟಿಸುತ್ತದೆ ಎಂದು ಜಗತ್ತಿಗೆ ಭರವಸೆ ನೀಡಿ ಸರ್ಕಾರಿ ಸಂಸ್ಥೆಗಳನ್ನು ಮತ್ತು ಕಾರ್ಖಾನೆಗಳನ್ನು ಅತಿ ವೇಗದಲ್ಲಿ ಮುಚ್ಚಲು ಕಾರಣರಾಗಿದ್ದರು. ಆದರೆ ಈ ಜಾಗತೀಕರಣದ 15 ವರ್ಷಗಳ ನಂತರ ಖಾಸಗಿ ಕ್ಷೇತ್ರವು, ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸುವಂತೆ, ಹೊಸ ಉದ್ಯೋಗಗಳನ್ನು ಸೃಷ್ಟಿಸುವುದಿರಲಿ ಹಳೆ ಉದ್ಯೋಗದ ಪ್ರಮಾಣವನ್ನೇ ಕಡಿತಗೊಳಿಸಿವೆ. ಇನ್ನೂ ಜಾಗತೀಕರಣದ ಆರ್ಥಿಕತೆ ಸೃಷ್ಟಿಸಿರುವ ಹೊಸ ಉದ್ಯಮ ಕ್ಷೇತ್ರಗಳು ಇದೇ ಅಧ್ಯಯನವು ಸ್ಪಷ್ಟಪಡಿಸುವಂತೆ 40 ಲಕ್ಷಕ್ಕಿಂತ ಹೆಚ್ಚು ಹೊಸ ಉದ್ಯೋಗಗಳನ್ನು ಸೃಷ್ಟಿಸಿಲ್ಲ. ಕಳೆದ ಬಜೆಟಿನಲ್ಲಿ ಸರ್ಕಾರವೇ ಕೊಟ್ಟಿರುವ ಅಂಕಿಅಂಶದ ಪ್ರಕಾರ ಖಾಸಗಿ ಕ್ಷೇತ್ರದಲ್ಲಿ 1991ರಲ್ಲಿ 17 ದಶಲಕ್ಷ ಉದ್ಯೋಗಗಳು ಸೃಷ್ಟಿಯಾಗಿದ್ದರೆ 2006ರಲ್ಲಿ ಅದರ ಪ್ರಮಾಣ 21 ದಶಲಕ್ಷಕ್ಕೇರಿತ್ತಷ್ಟೆ. ಇದರ ಬದಲಿಗೆ ಸರ್ಕಾರಿ ಕಾರ್ಖಾನೆಗಳನ್ನು ಮುಚ್ಚಿರುವುದರಿಂದ ಮತ್ತು ಖಾಸಗೀಕರಿಸಿರುವುದರಿಂದ ಇದರ ಎರಡು ಪಟ್ಟು ಉದ್ಯೋಗಗಳು ಕಡಿತವಾಗಿವೆ.

ಹೀಗಾಗಿ ಸಾರಾಂಶದಲ್ಲಿ ಜಾಗತೀಕರಣದಲ್ಲಿ ಆಗಿರುವುದು ನಿರುದ್ಯೋಗದ ಅಭಿವೃದ್ಧಿಯೇ ವಿನಃ ಉದ್ಯೋಗದ ಅಭಿವೃದ್ಧಿಯಲ್ಲ!

ಹಾಗಿದ್ದಲ್ಲಿ ಉತ್ಪಾದನೆ ಹೇಗೆ ಹೆಚ್ಚಾಗುತ್ತಿದೆ? ಮೇಲಿನ ಅಧ್ಯಯನಗಳು ಸ್ಪಷ್ಟಪಡಿಸುವಂತೆ ಉತ್ಪಾದನೆಗೆ ಪ್ರಧಾನ ಕಾರಣ ಕಾರ್ಮಿಕರ ಉತ್ಪಾದಕತೆ ಹತ್ತು ಹಲವು ಪಟ್ಟು ಹೆಚ್ಚಾಗಿರುವುದು. ಇದರರ್ಥ ಕಾರ್ಮಿಕರ ಕೌಶಲ್ಯ ಇದ್ದಕ್ಕಿದ್ದಂತೆ ಹತ್ತುಪಟ್ಟು ಹೆಚ್ಚಾಗಿದೆ ಎಂದೇನೂ ಅಲ್ಲ.

ಹಲವಾರು ಕಡೆ ತಂತ್ರಜ್ಞಾನದ ಅತಿ ಹೆಚ್ಚಳವೂ ಕಾರ್ಮಿಕರ ಬದಲಿಗೆ ಪ್ರತಿಷ್ಠಾಪನೆಗೊಂಡು ಉತ್ಪಾದಕತೆಯನ್ನು ಮತ್ತು ನಿರುದ್ಯೋಗವನ್ನು ಹೆಚ್ಚಿಸಿದೆ ಅಷ್ಟೆ. ಇಷ್ಟು ಮಾತ್ರವಲ್ಲ ಬಹುಪಾಲು ಕಡೆ ಕೊಡುವ ಸಂಬಳವನ್ನೇ ಓಟಿ ಇತ್ಯಾದಿಗಳ ಹೆಸರಲ್ಲಿ ದುಡಿಮೆಯ ಸಮಯವನ್ನು ಹೆಚ್ಚಿಸಿ ಕೊಡಲಾಗುತ್ತದೆ. ಹೀಗೆ ಕಾರ್ಮಿಕರ ಉತ್ಪಾದಕತೆ ಹೆಚ್ಚಾಗಲು ಪ್ರಧಾನ ಕಾರಣ ಯಾವುದೇ ಹೆಚ್ಚಿನ ಆದಾಯವಿಲ್ಲದೆ ದುಡಿಮೆಯ ಅವಧಿಯನ್ನು ಹೆಚ್ಚಿಸಿರುವುದೇ ಆಗಿದೆ. ಅಂದರೆ ಕಾರ್ಮಿಕರ ಸುಲಿಗೆಯ ತೀವ್ರತೆಯು ಹೆಚ್ಚಿರುವುದರಿಂದಲೇ ಅಭಿವೃದ್ಧಿಯು ತೀವ್ರಗತಿಯನ್ನು ಪಡೆದುಕೊಂಡಿದೆ. ಇದಲ್ಲದೆ ಬಹುಪಾಲು ಉದ್ಯಮಗಳು ತಮ್ಮ ಉತ್ಪಾದನೆಯ ಬಹುಪಾಲು ಘಟಕಗಳನ್ನು ಹೊರಗುತ್ತಿಗೆಗೆ ಸಣ್ಣಪುಟ್ಟ ಸ್ವಯಂ ಉದ್ಯೋಗಿಗಳಿಗೆ ನೀಡಿರುತ್ತಾರೆ. ಇಲ್ಲಿ ಇಂಥ ಸ್ವಯಂ ಉದ್ಯೋಗಿ ಘಟಕಗಳಲ್ಲಿ ಯಾವುದೇ ದುಡಿಮೆಯ ಕಾಲಾವಧಿಯ ಮಿತಿ ಇರುವುದಿಲ್ಲ, ನಗಣ್ಯವಾದ ಹೆಚ್ಚಿನ ಆದಾಯಕ್ಕಾಗಿ ಸಮಯದ ಪರಿವೇ ಇಲ್ಲದೆ ಇಲ್ಲಿ ದುಡಿಮೆಯಾಗುತ್ತದೆ. ಇದೂ ಸಹ ಹೆಚ್ಚಿನ ವೆಚ್ಚವಿಲ್ಲದೆ ಬರುವ ಉತ್ಪಾದನೆಯಾಗಿರುವುದರಿಂದ ಅಭಿವೃದ್ಧಿ ತೀವ್ರವಾಗುವುದರಲ್ಲಿ ಆಶ್ಚರ್ಯವೇನಿದೆ.

ಇದೇ ನಮ್ಮ ದೇಶದ ಅಭಿವೃದ್ಧಿಯ ನಿಜವಾದ ಸ್ವರೂಪ. ಇಲ್ಲಿ ಉತ್ಪಾದನೆ ಹೆಚ್ಚಾಗುತ್ತಿದೆ. ಆದರೆ ಈ ಉತ್ಪಾದನೆ ಕಾರ್ಮಿಕರ ಮತ್ತು ಶ್ರಮದ ತೀವ್ರ ರೀತಿಯ ಶೋಷಣೆ ಮತ್ತು ಸುಲಿಗೆಯನ್ನೇ ಆಧರಿಸಿದೆ. ಆದ್ದರಿಂದಲೇ ಈ ದೇಶದಲ್ಲಿ ಹಣ ಹೂಡಿರುವ ಉದ್ಯಮಿಗಳು ಬೇರೆ ಕಡೆಗಿಂತ ಹೆಚ್ಚಿನ "ಅಭಿವೃದ್ಧಿ"ಯನ್ನು ಸಾಧಿಸಬಹುದು. ಆದರೆ ಅದು ಸಂಪತ್ತಿನ ಹಂಚಿಕೆಯಲ್ಲಿ ಅಭಿವೃದ್ಧಿಗಿಂತ ಅಸಮಾನತೆಯನ್ನೇ ತೀವ್ರಗತಿಯಲ್ಲಿ ಹೆಚ್ಚು ಮಾಡುತ್ತಿದೆ. ಈ ಹೆಚ್ಚಾಗುವ, ಹೆಚ್ಚಾಗುತ್ತಿರುವ ಅಸಮಾನತೆಯನ್ನು ಮರೆಮಾಚಲೆಂದೇ ಜಾಗತೀಕರಣದ ವಕ್ತಾರರು ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ (GDP)ಯ ಅಭಿವೃದ್ಧಿಯನ್ನೇ ದೇಶದ ಅಭಿವೃದ್ಧಿಯೆಂದು ಪ್ರಚಾರ ಮಾಡುತ್ತಾರೆ.

ಆದರೆ ವಾಸ್ತವವೇನೆಂದರೆ ಭಾರತದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿ ಜಾಗತೀಕರಣದ ಕಾಲಘಟ್ಟದಲ್ಲಿ ಅಸಮಾನತೆ ಹಿಂದೆಂದಿಗಿಂತ ಹೆಚ್ಚಾಗಿದೆ. ಸಮಾಜದಲ್ಲಿನ ಅಸಮಾನತೆಯನ್ನು ಅಳೆಯಲು ವಿಶ್ವಸಂಸ್ಥೆಯು "ಗಿನಿ" ಕೋಷ್ಟಕವೊಂದನ್ನು ಸಿದ್ಧಪಡಿಸಿದೆ. ಇದರ ಅಳತೆಯಲ್ಲಿ ಪ್ರತಿ ದೇಶದೊಳಗಿನ ಅಸಮಾನತೆಯನ್ನು 0-1 ರ ಮಾಪನದಲ್ಲಿ ಅಳೆಯಲಾಗುತ್ತದೆ. ಉದಾಹರಣೆಗೆ ಒಂದು ದೇಶದ ಗಿನಿ ಕೊ-ಎಫಿಷಿಯೆಂಟ್ 0 ಆಗಿದ್ದರೆ ಆ ದೇಶದಲ್ಲಿ ಸಂಪೂರ್ಣ ಸಮಾನತೆ ಇದೆ ಎಂದರ್ಥ. 0 ಇಂದ 1ರ ಕಡೆಗೆ ಒಂದು ದೇಶದ ಗಿನಿ ಬೆಳೆಯುತ್ತಿದೆಯೆಂದರೆ ಆ ದೇಶದಲ್ಲಿ ಅಸಮಾನತೆ ಹೆಚ್ಚುತ್ತಿದೆ ಎಂದೇ ಅರ್ಥ. ಜಾಗತೀಕರಣದ ಈ ಕಾಲಘಟ್ಟದಲ್ಲಿ ಯಾವ್ಯಾವ ದೇಶಗಳು ತಥಾಕಥಿತ ಅಭಿವೃದ್ಧಿ ಪಥವನ್ನು ತುಳಿಯುತ್ತಿವೆಯೋ ಆ ಎಲ್ಲಾ ದೇಶಗಳ ಗಿನಿ ಅಂಕವೂ ಏರುತ್ತಿದೆ.


ಉದಾಹರಣೆಗೆ ಚೀನಾ ದೇಶವು ತನ್ನ ಸಮಾಜವಾದಿ ಪಥವನ್ನು ತೊರೆದು ಮುಕ್ತ ಮಾರುಕಟ್ಟೆ ನೀತಿಯ ಬಂಡವಾಳಶಾಹಿ ದಾರಿ ಹಿಡಿದ ಮೇಲೆ ಆ ದೇಶದ ಗಿನಿ ಅಂಕವು 0.3 ರಿಂದ 0.5ಕ್ಕೇರಿದೆ. ಅದೇ ರೀತಿ ಭಾರತದಲ್ಲಿ 1991ರಲ್ಲಿ ಗಿನಿ ಅಂಕ ನಗರದಲ್ಲಿ 0.25 ಇದ್ದದ್ದು ಈಗ 0.27ಕ್ಕೂ ಮತ್ತು ಗ್ರಾಮೀಣ ಪ್ರದೇಶದಲ್ಲಿ 0.31ರಿಂದ 0.35ಕ್ಕೂ ಏರಿದೆ. ಅಂದರೆ ಅಭಿವೃದ್ಧಿ ಹೆಚ್ಚಿದಷ್ಟು ಸಮಾಜದಲ್ಲಿ ಅಸಮಾನತೆಯೂ ಹೆಚ್ಚಾಗುತ್ತಿದೆ ಎಂದೇ ಅರ್ಥ.

ಹೀಗಾಗಿಯೇ 2004-07ರ ನಡುವೆ ಭಾರತದ ಬಿಲಿಯನ್ನರುಗಳ ಸಂಖ್ಯೆ 9ರಿಂದ 40ಕ್ಕೇರಿದೆ. ಅಂದರೆ ಪ್ರತಿ ಒಂದು ಶೇಕಡಾ ಜಿಡಿಪಿ ಅಭಿವೃದ್ಧಿ ದರವು ಕಾರ್ಪೊರೇಟ್ ಲಾಭಗಳಿಕೆಯಲ್ಲಿ ಅಂದಾಜು 2.5ರಷ್ಟು ಹೆಚ್ಚಳವನ್ನು ಉಂಟುಮಾಡಿದೆ. ಆದರೆ ಅದೇ ಸಮಯದಲ್ಲಿ ಭಾರತದಲ್ಲಿ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.50ರಷ್ಟು ಮಕ್ಕಳು ಅಪೌಷ್ಠಿಕತೆಯಿಂದಲೂ, ಶೇ.80ರಷ್ಟು ಮಕ್ಕಳು ರಕ್ತಹೀನತೆಯಿಂದಲೂ ನರಳುತ್ತಿದ್ದಾರೆ. ನಿರುದ್ಯೋಗ, ಅದರಿಂದ ಉಂಟಾಗುವ ಬಡತನ, ಹಸಿವು ಇತ್ಯಾದಿಗಳು ಭಾರತವನ್ನು ಮಾನವ ಸೂಚ್ಯಂಕದಲ್ಲಿ 127ನೇ ಸ್ಥಾನದಲ್ಲಿರಿಸುತ್ತಿದೆ.

80ರ ದಶಕದಲ್ಲಿ ಅಭಿವೃದ್ಧಿ ದರವು ಶೇ.4ರಷ್ಟಿದ್ದಾಗ ಉದ್ಯೋಗ ಸೃಷ್ಟಿಯ ದರವು ಕನಿಷ್ಠ ಶೇ.2ರಷ್ಟಾದರೂ ಇರುತ್ತಿತ್ತು. ಈಗ ಅಭಿವೃದ್ಧಿ ದರವು ಶೇ.9-10ರಷ್ಟೆಂದು ಕೊಚ್ಚಿಕೊಳ್ಳುತ್ತಿರುವಾಗ ಉದ್ಯೋಗ ಸೃಷ್ಟಿಯ ದರವು ಶೇ.1ಕ್ಕಿಂತ ಕಡಿಮೆಯಾಗುತ್ತಿದೆ. ಅದೇರೀತಿ ಈ "ಅಭಿವೃದ್ಧಿ" ದರ ಜಾಸ್ತಿಯಾದಷ್ಟು ಸಮಾಜದಲ್ಲಿ ಅಸಮಾನತೆ ಮತ್ತು ಬಡಜನ ಬದುಕಿನ ದಾರುಣತೆ ಹೆಚ್ಚಾಗುತ್ತಾ ಹೋಗುತ್ತಿದೆ.

ಈ ಅಸಮಾನತೆಯ ಆಧಾರದಲ್ಲೇ ಅಭಿವೃದ್ಧಿಯು ಹೆಚ್ಚುತ್ತದೆ ಮತ್ತು ಹೆಚ್ಚಾದ ಅಭಿವೃದ್ಧಿ ಅಸಮಾನತೆಯನ್ನೂ ಹೆಚ್ಚಿಸುತ್ತದೆ! ಹೀಗಾಗಿ ಈ ಅಭಿವೃದ್ಧಿ ಮಾದರಿಯಲ್ಲಿ ಸಮಾನತೆಯನ್ನಾಗಲಿ, ಬಡಜನರ ಅಭಿವೃದ್ಧಿಯನ್ನಾಗಲೀ ನಿರೀಕ್ಷಿಸುವುದು ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ!

ನೋ ಕಾಮೆಂಟ್ಸ್




"ಐಪಿಎಲ್‌ನ ಯಶಸ್ಸು ಆ ಆಟ ಎಷ್ಟು ರೋಚಕತೆಯನ್ನು ಉಳಿಸಿಕೊಂಡಿರುತ್ತದೆ ಎಂಬುದನ್ನೇ ಆಧರಿಸಿರುತ್ತದೆ."

-ರಾಹುಲ್ ದ್ರಾವಿಡ್

"ಸರ್ಕಾರಗಳು ಕಿವಿಗೊಟ್ಟು ಸ್ಪಂದಿಸಬೇಕೆಂದರೆ ರ್‍ಯಾಲಿ ಮತ್ತು ಪ್ರತಿಭಟನಾ ಮೆರವಣಿಗೆಗಳು ಅತ್ಯಗತ್ಯ."

-ರಾಜ್ಯ ಹೈಕೋರ್ಟು

ನಂಬಿದ್ರೆನಂಬಿ ಬಿಟ್ರೆಬಿಡಿ



"ಐಪಿಎಲ್ ಪಂದ್ಯಾವಳಿ ಕೈಗಾರಿಕೋದ್ಯಮಿಗಳ ಜೂಟಾಟ. ಇದರಿಂದ ಕ್ರಿಕೆಟ್ ಅಂಕಣಕ್ಕೆ ಭ್ರಷ್ಟಾಚಾರದ ಸೋಂಕು ತಟ್ಟಿದೆ."

-ಬಾಳ್ ಠಾಕ್ರೆ

"ಮುಷರಫ್‌ರವರಿಂದಲೇ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆ ಸಾಧ್ಯವಾಯಿತು."

-ಕಾಂಡೊಲೀಸಾ ರೈಸ್

"ಇ-ಮಹಿಳೆ ಯೋಜನೆಯಿಂದ ಹಳ್ಳಿಯ ಹಪ್ಪಳ ಸಂಡಿಗೆ ಮಾಡುವ ಮಹಿಳೆಯರೂ ಸಹ ಇಂಟರ್‌ನೆಟ್ ಸೌಲಭ್ಯ ಬಳಸಿ ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬರಬಹುದು."

-ಶಾಲಿನಿ ರಜನೀಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿ

ಕನ್ನಡಪ್ರಭದ ಕಾಮಾಲೆ ಕಣ್ಣು

"ಮುಸ್ಲಿಮರಿಗಾಗಿ ಚುನಾವಣೆ ಪದ್ಧತಿಯೇ ಬದಲಾಗಬೇಕು-ಸೈಯದ್ ಶಹಾಬುದ್ದೀನ್"


-ಕೆಎಫ್‌ಡಿ ರ್‍ಯಾಲಿಯಲ್ಲಿ ಜನಸಂಖ್ಯೆ ಆಧಾರಿತ ಪ್ರಾತಿನಿಧ್ಯ ಬೇಕು ಎಂಬ ಹೇಳಿಕೆಯನ್ನು ಕನ್ನಡಪ್ರಭ ತಿರುಚಿರುವ ರೀತಿ

ತ್ರಿಶೂಲದ ಮುಂದೆ ಕಿನ್ನರಿ ಬಾರಿಸಬೇಕೆ?

"ಆತಂಕ ಆವರಿಸುತ್ತಿರುವ ಈ ದಿನಗಳಲ್ಲಿ ಕಲೆ ಮತ್ತು ಸಂಸ್ಕೃತಿಯಿಂದ ಮಾತ್ರ ಶಾಂತಿ ಮತ್ತು ನೆಮ್ಮದಿಯನ್ನು ಕಂಡುಕೊಳ್ಳಲು ಸಾಧ್ಯ."

-ಡಾ.ಬಿ.ಎಲ್.ಶಂಕರ್


ಕವಿಯೊಬ್ಬರ ನೈಜ ಕಳಕಳಿ



"ನಿಮ್ಮನ್ನು ಕೈಮುಗಿದು ಬೇಡಿಕೊಳ್ಳುತ್ತೇನೆ, ದಯವಿಟ್ಟು ಮಸೀದಿಯ ಬಾಗಿಲಲ್ಲಿ ನಿಂತು ವಿಜ್ಞಾನವನ್ನು ಟೀಕಿಸುವ ಕೆಲಸವನ್ನು ಮಾಡಬೇಡಿ. ಅನಗತ್ಯ ಪವಾಡಗಳನ್ನು ಹೇಳಬೇಡಿ."

-ಕೆ.ಎಸ್.ನಿಸಾರ್ ಅಹ್ಮದ್


ಜನದ್ರೋಹಿ ಕಾನೂನು ಕನ್ನಡದಲ್ಲಿ ಬಂದರೆ ಪರವಾಗಿಲ್ಲವೇ?



"ರಾಜ್ಯದಲ್ಲಿ ಕನ್ನಡ ಸರ್ಕಾರ ಬಂದರೆ ಮಾತ್ರ ಕನ್ನಡ ಮತ್ತು ಕನ್ನಡಿಗರ ಉದ್ಧಾರವಾಗುತ್ತದೆ."

-ಚಂಪಾ

ಹುಲಿ ಸವಾರಿ ಪ್ರಾರಂಭಿಸಿದ್ದೇ ನೀವಲ್ಲವೇ?



"ಆಸ್ಟ್ರೇಲಿಯಾ ತಂಡ ಪಾಕಿಸ್ತಾನ ಟೂರ್ ಮಾಡುವ ಸಮಯದಲ್ಲೇ ಐಪಿಎಲ್ ಪಂದ್ಯಾವಳಿ ಶುರುವಾಗಲಿದೆ. ಅದರ ಹಣದ ಆಕರ್ಷಣೆ ನಮ್ಮ ಆಟಗಾರರನ್ನು ಐಪಿಎಲ್ ಕಡೆಯೇ ಸೆಳೆಯಬಹುದು. ಈಗಾಗಲೇ ಸೈಮಂಡ್ಸ್ ತಾನೂ ಐಪಿಎಲ್‌ನಲ್ಲಿ ಆಡುತ್ತೇನೆಯೇ ವಿನಃ ಪಾಕಿಸ್ತಾನಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಇದು ಬರಲಿರುವ ದಿನಗಳಲ್ಲಿ ಕ್ರಿಕೆಟ್ ಮೇಲೆ ಕೆಟ್ಟ ಪ್ರಭಾವ ಬೀರಲಿದೆ."

-ರಿಕಿ ಪಾಂಟಿಂಗ್

ಬೇಜವಾಬ್ದಾರಿಯ ಪರಮಾವಧಿ!

"ಪ್ರತಿಭಾ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟಿನ ತೀರ್ಪು ನಮಗೆ ಆತಂಕ ತಂದಿದೆ. ಸಿಬ್ಬಂದಿಯ ರಕ್ಷಣೆಯ ಹೊಣೆಯನ್ನು ವೈಯಕ್ತಿಕವಾಗಿ ಹೊರಿಸಲಾಗದು."

-ಅಮಿತಾಬ್ ಚೌಧರಿ, ಸಿಇಒ, ಇನ್ಫೋಸಿಸ್ ಬಿಪಿಒ

ಹಾಗಾದರೆ, ನಾವು ಯಾರತ್ತ ತಿರುಗಬೇಕು?

ಹೇಳಿದ ಗುರುವಾರ ಸುಪ್ರೀಂಕೋರ್ಟ್ ಒಂದು ...ನೀಡಿತು. ಇತ್ತೀಚೆಗೆ ಉತ್ತರ ಭಾರತದವರ ...ದ್ಧ ಮುಂಬೈಯಲ್ಲಿ ಗಲಭೆಗಳು ಸಂಭವಿಸಿದ ...ಯಲ್ಲಿ ಅವುಗಳಿಗೆ ಪ್ರಚೋದನೆ ನೀಡಿದ ...ಠಾಕ್ರೆ ವಿರುದ್ಧ ಮಹಾರಾಷ್ಟ್ರ ಸರ್ಕಾರ ಕ್ರಮ ...ಕೊಳ್ಳಬೇಕೆಂದು ಕೋರಿ ಎರಡು ...ಜನಿಕ ಹಿತಾಸಕ್ತಿ ಅರ್ಜಿಗಳನ್ನು ...ಂಕೋರ್ಟ್ ಮುಂದೆ ಸಲ್ಲಿಸಲಾಗಿತ್ತು.

ಈ ಅರ್ಜಿಯನ್ನು ಆಲಿಸಿದ ಮುಖ್ಯ ...ಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಮತ್ತು ...ಯಮೂರ್ತಿಗಳಾದ ಆರ್.ವಿ. ರವೀಂದ್ರನ್ ... ಮಾರ್ಕಂಡೇಯ ಕಟ್ಜುರವರು ...ಂಬೈಯಲ್ಲಿ ಹಲವು ಹಿಂಸಾತ್ಮಕ ಘಟನೆಗಳು ...ರುವುದು ನಿಜ. ಆದರೆ ಇದು ಕಾನೂನು ... ಸುವ್ಯವಸ್ಥೆಗೆ ಸಂಬಂಧಿಸಿದ್ದು. ಅದನ್ನು ರಾಜ್ಯ ...ರವೇ ನಿಭಾಯಿಸಬೇಕು. ದೇಶದ ವಿವಿಧ ಕಡೆ ...ನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ...ಗಳಿಗೆಲ್ಲ ನ್ಯಾಯಾಲಯ ಆದೇಶಗಳನ್ನು ...ಾಗುವುದಿಲ್ಲ" ಎಂದು ಹೇಳಿ ಅರ್ಜಿಯನ್ನು ...ಗೊಳಿಸಿದರು.

...ದರೆ ಕೆಲ ವರ್ಷಗಳ ಹಿಂದೆ ಇದೇ ...ಾಲಯ ಮತ್ತೊಂದು ರೀತಿಯ ತೀರ್ಪನ್ನು ...ತ್ತು. ಆಗ ಡಾ. ರಾಜ್‌ಕುಮಾರ್‌ರನ್ನು ...ರಿಸಿದ್ದ ಕಾಡುಕಳ್ಳ ವೀರಪ್ಪನ್, ಮೈಸೂರು ...ದಲ್ಲಿದ್ದ ತನ್ನ ಸಹಚರರನ್ನು ಬಿಡುಗಡೆ ...ಬೇಕೆಂಬುದರ ಜೊತೆಗೆ, ತನ್ನ ಇನ್ನೂ ...ಾರು ಬೇಡಿಕೆಗಳನ್ನು ಈಡೇರಿಸಬೇಕೆಂದೂ ...ಗಳನ್ನು ಹಾಕಿದ್ದ.

...ಗ ರಾಜ್‌ರನ್ನು ಬಿಡುಗಡೆಗೊಳಿಸಿದರೆ ...ದು ಎಸ್.ಎಂ. ಕೃಷ್ಣರ ಸರ್ಕಾರ ವೀರಪ್ಪನ್‌ನ ...ಗಳಿಗೆ ಒಪ್ಪಿಗೆ ನೀಡಲು ಮುಂದಾಗಿತ್ತು. ಆ ...ವನ್ನು ವಿರೋಧಿಸಿ ವೀರಪ್ಪನ್‌ಗೆ ಬಲಿಯಾಗಿದ್ದ ...ಇನ್ಸ್‌ಪೆಕ್ಟರ್ ಶಕೀಲ್‌ರವರ ತಂದೆ ...ಂಕೋರ್ಟಿನ ಮೊರೆ ಹೋಗಿದ್ದರು. ...ಂಕೋರ್ಟ್ ಕೃಷ್ಣರ ಸರ್ಕಾರವನ್ನು ...ದಾಗ ರಾಜ್ಯದ ಅಡ್ವೋಕೇಟ್ ಜನರಲ್ ...ದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ...ಡಬೇಕಿರುವುದರಿಂದ ಇದಕ್ಕೆ ಒಪ್ಪಿಗೆ ನೀಡಲು ...ದ್ದೇವೆ" ಎಂದಿದ್ದರು. ಈ ಉತ್ತರದಿಂದ ...ಮುಂಡಲವಾಗಿದ್ದ ಸುಪ್ರೀಂಕೋರ್ಟ್ ...ದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ...ಡಲಾಗದಿದ್ದರೆ ನೀವು ಅಧಿಕಾರದಲ್ಲಿ ...ದ್ದೀರಿ?" ಎಂದು ಕೃಷ್ಣರ ಸರ್ಕಾರವನ್ನು ...ಗೆ ತೆಗೆದುಕೊಂಡಿತ್ತು.

...ಗ ನೋಡಿದರೆ ಅದೇ ಕಾನೂನು ಮತ್ತು ...ಸ್ಥೆಯನ್ನು ಕಾಪಾಡುವ ವಿಷಯ ಕುರಿತಂತೆ ... ಸುಪ್ರೀಂಕೋರ್ಟ್ ಮತ್ತೊಂದು ರೀತಿಯ ... ನೀಡಿರುವುದು ಅಚ್ಚರಿ ಮೂಡಿಸುತ್ತದೆ.

...ದಕ್ಕಿಂತಲೂ ಹೆಚ್ಚು ಅಚ್ಚರಿ ಮೂಡಿಸುವ ...ಂದು ವಿಷಯ ಯಾವುದೆಂದರೆ ಕಳೆದ ...ರ ಇದೇ ಸುಪ್ರೀಂಕೋರ್ಟ್ ಸಾಮಾಜಿಕ ...ಕರ್ತೆ ಮತ್ತು ಕೋಮು ಸೌಹಾರ್ದ ಹೋರಾಟಗಾರ್ತಿ ತೀಸ್ತ ಸೆಟ್ಲವಾದ್ ಬಗ್ಗೆಯೂ ಕಿಡಿಕಾರಿದೆಯಲ್ಲದೆ ಆಕೆ ಬರೆದಿದ್ದ ಲೇಖನವೊಂದು "ಅವಮಾನಕರ"ವಾಗಿದೆಯೆಂದೂ, ಇನ್ನು ಮುಂದೆ ಆಕೆಯೊಂದಿಗೆ ಸಂಪರ್ಕ ಹೊಂದಿರುವ ಯಾರ ಮನವಿಗಳನ್ನೂ ಸ್ವೀಕರಿಸುವುದಿಲ್ಲ ಎಂದೂ ಹೇಳಿದೆ.

ಆದರೆ ಐದು ವರ್ಷಗಳ ಹಿಂದೆ ಇದೇ ಸುಪ್ರೀಂಕೋರ್ಟ್ ತೀಸ್ತ ಸೆಟ್ಲವಾದ್ ವಿರುದ್ಧ ಗುಜರಾತ್ ಹೈಕೋರ್ಟ್ ತನ್ನ ತೀರ್ಪೊಂದರಲ್ಲಿ ವ್ಯಕ್ತಪಡಿಸಿದ್ದ ವ್ಯತಿರಿಕ್ತ ಅಭಿಪ್ರಾಯಗಳನ್ನು ತೆಗೆದುಹಾಕಿತ್ತಲ್ಲದೆ, **Citizens for Justice and Peace** ವತಿಯಿಂದ ತೀಸ್ತ ಸೆಟ್ಲವಾದ್‌ರವರು ಸಲ್ಲಿಸಿದ್ದ ಮನವಿಗೆ ಸ್ಪಂದಿಸಿ ಬೆಸ್ಟ್ ಬೇಕರಿ ಹತ್ಯಾಕಾಂಡದ ವಿಚಾರಣೆಯನ್ನು ಗುಜರಾತಿನಿಂದ ಮುಂಬೈ ಹೈಕೋರ್ಟಿಗೆ ವರ್ಗಾಯಿಸಿತ್ತು.

ಈಗ ಯಾಕೆ ಅದೇ ತೀಸ್ತ ಸೆಟ್ಲವಾದ್ ವಿರುದ್ಧ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಗುಡುಗಿದ್ದಾರೆ? ಆಕೆ ಬರೆದ ಲೇಖನದಲ್ಲಿ ಮುಖ್ಯ ನ್ಯಾಯಾಧೀಶರಿಗೆ ಕೋಪ ತರಿಸುವಂತಹದ್ದು ಏನಿತ್ತು? ಆ ಲೇಖನದ ಸಾರಾಂಶವನ್ನು ಇಲ್ಲಿ ನೀಡುತ್ತಿದ್ದೇನೆ:



"ಇದೇ ಫೆಬ್ರವರಿ-ಮಾರ್ಚ್ 2008ಕ್ಕೆ ಸ್ವತಂತ್ರ ಭಾರತ ಕಂಡ ಅತಿ ದಾರುಣ ಕೋಮುಗಲಭೆಗಳು ಗುಜರಾತಿನಲ್ಲಿ ಸಂಭವಿಸಿ ಆರು ವರ್ಷಗಳಾಗುತ್ತದೆ. ಆದರೆ ಆ ಹತ್ಯಾಕಾಂಡವನ್ನು ನಿರ್ದೇಶಿಸಿದವರು, ಅದರಲ್ಲಿ ಭಾಗವಹಿಸಿದವರು ಇವತ್ತು ಯಾವ ಅಡೆತಡೆಗಳಿಲ್ಲದೆ ಆರಾಮವಾಗಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಆದರೆ ಅದೇ ಹೊತ್ತಿಗೆ ಗೋಧ್ರಾದಲ್ಲಿ ಸಂಭವಿಸಿದ ರೈಲು ದುರಂತಕ್ಕೆ ಸಂಬಂಧಿಸಿದಂತೆ ಸುಳ್ಳು ಆರೋಪಗಳ ಮೇಲೆ ಬಂಧಿತರಾದ 84 ಜನ (ಅವರಲ್ಲಿ ಒಬ್ಬ ಬಾಲಕ ಶೇ. 100 ರಷ್ಟು ಅಂಧ) ಇವತ್ತಿಗೂ ವಿಚಾರಣೆ ಇರಲಿ, ಅವರ ಜಾಮೀನು ಅರ್ಜಿಯೂ ನ್ಯಾಯಾಲಯ ಮುಂದೆ ಬಾರದೆ ಅವರೆಲ್ಲ ಈಗಲೂ ಜೈಲಿನಲ್ಲಿ ಕೊಳೆಯುತ್ತಿದ್ದಾರೆ.

ಮೊದಲೇ ಹೇಳಿದಂತೆ ಬಂಧನದಲ್ಲಿರುವವರ ಪೈಕಿ ಒಬ್ಬ ಅಂಧ ಬಾಲಕನಿದ್ದರೆ, ಉಳಿದವರು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಅವರನ್ನೇ ಆಧರಿಸಿದ್ದ ಅವರ ಕುಟುಂಬಗಳು ಬಡತನದಿಂದ ಬೀದಿಪಾಲಾಗಿವೆ. ಆದರೆ ಗೋಧ್ರಾ ನಂತರದ ಹತ್ಯಾಕಾಂಡದ ಪ್ರಮುಖ ಆರೋಪಿಗಳು ನಿರ್ಭಯವಾಗಿ ಜೀವಿಸುತ್ತಿದ್ದಾರೆ. ಇದನ್ನು ನೋಡಿ ನಮ್ಮ ದೇಶದಲ್ಲಿ ಪಕ್ಷಪಾತಿ ನ್ಯಾಯ ವ್ಯವಸ್ಥೆ ಇದೆಯೇ ಎಂಬ ಪ್ರಶ್ನೆ ತಲೆದೋರುತ್ತದೆ. ನಮ್ಮ ಸಂವಿಧಾನ ಎಲ್ಲರಿಗೂ ಸಮಾನ ನ್ಯಾಯವನ್ನು ಬೋಧಿಸುವಾಗ ನಮ್ಮ ವ್ಯವಸ್ಥೆಯು ಇಂತಹ ಪಕ್ಷಪಾತಿ ನ್ಯಾಯ ನೀತಿಯನ್ನು ಪಾಲಿಸುತ್ತಿದೆಯೇ? ಇವತ್ತು ಅಂತರರಾಷ್ಟ್ರೀಯ ಬೆಂಬಲಿತ ಬಾಂಬ್ ಭಯೋತ್ಪಾದನೆ ಒಂದು ಸವಾಲಾಗಿರುವಾಗ ಇಂತಹ ಪಕ್ಷಪಾತ ನ್ಯಾಯ ನೀತಿಯಿಂದಾಗಿ ವಾಸ್ತವ ಬದುಕಿನಲ್ಲಿ ಏನಾಗುತ್ತಿದೆ? ಇವತ್ತು ಇಡೀ ವ್ಯವಸ್ಥೆಗೆ ಒಂದು ಸಮುದಾಯ ಗುರಿಯಾಗಿರುವಾಗ ಇಂತಹ ಪರಿಪಾಠದಿಂದಾಗಿ ಆ ಸಮುದಾಯದ ವಿಶ್ವಾಸವನ್ನು ಗೆಲ್ಲಲಾಗುತ್ತದೆಯೇ? ನಮ್ಮ ಕ್ರಿಮಿನಲ್ ನ್ಯಾಯತತ್ವದಡಿ ಜಾಮೀನು ಪಡೆಯುವ ಹಕ್ಕು ಎಲ್ಲರಿಗೂ ಲಭ್ಯವಾಗಬೇಕು. ಭಯೋತ್ಪಾದನೆ ವಿರುದ್ಧದ ಕಾನೂನುಗಳು ಮತ್ತು ಉಗ್ರ ಕಾನೂನುಗಳಡಿಯಲ್ಲೂ ಜಾಮೀನಿನ ಅವಕಾಶವನ್ನೂ ನೀಡದೆ ಹೀಗೆ ಅನಿರ್ದಿಷ್ಟವಾಗಿ ಬಂಧನದಲ್ಲಿಡುವುದು ಅಸಾಧ್ಯ. ಹೀಗಿರುವಾಗ ಹೇಗೆ ಪ್ರಜಾತಾಂತ್ರಿಕ ಭಾರತದಲ್ಲಿ, ಅಭಿವೃದ್ಧಿಶೀಲ ಭಾರತದಲ್ಲಿ, ಪ್ರಕಾಶಿಸುತ್ತಿರುವ ಭಾರತದಲ್ಲಿ ಇಂತಹ ಪೂರ್ವಾಗ್ರಹ ಮತ್ತು ವ್ಯವಸ್ಥೆಯಿಂದಲೇ ಹಿಂಸೆ ನಡೆಯಲು ಸಾಧ್ಯವಾಗುತ್ತಿದೆ?

ಈ ಅವಮಾನಕಾರಿ ಕತೆಯಲ್ಲಿ ಹಲವು ಕುತೂಹಲಕರ ಸಂಗತಿಗಳೂ ಇವೆ. ಸಾಬರ್‌ಮತಿ ಎಕ್ಸ್‌ಪ್ರೆಸ್‌ನ S-6 ಕೋಚ್‌ನಲ್ಲಿ ಮಡಿದ ಜನರ ಸಂಬಂಧಿಕರು ಕೂಡ ಗೋಧ್ರಾ ದುರಂತ ಕುರಿತ ವಿಚಾರಣೆಯನ್ನು ಗುಜರಾತಿನಿಂದ ಬೇರೆಡೆಗೆ ವರ್ಗಾಯಿಸಬೇಕು ಎಂದು ಸುಪ್ರೀಂಕೋರ್ಟ್ ಮುಂದೆ ಅರ್ಜಿ ಸಲ್ಲಿಸಿದ್ದರು.

ಗೋಧ್ರಾ ದುರಂತಕ್ಕೆ ಸಂಬಂಧಿಸಿದಂತೆ ಮೌಲ್ವಿಯೊಬ್ಬರ ವಿರುದ್ಧವೂ ಆರೋಪಗಳನ್ನು ಮಾಡಲಾಗಿದೆ. ಆದರೆ ಆ ದುರಂತ ಸಂಬಂಧಿಸಿದ ದಿನ ಆತ ಗೋಧ್ರಾದಲ್ಲೇ ಇರಲಿಲ್ಲವೆಂದೂ, ಬದಲಾಗಿ ಆತ ಮಹಾರಾಷ್ಟ್ರದಲ್ಲಿದ್ದರೆಂದೂ ಸಾಬೀತಾಗಿದೆ. ಈಗ ಬಂಧನದಲ್ಲಿರುವ ಜನರ ಬಗೆಗೂ ಇಂತಹದ್ದೇ ಹಲವಾರು ಅಸಂಗತ, ಆಧಾರರಹಿತ ಆರೋಪಗಳನ್ನು ಮಾಡಲಾಗಿದೆ ಎಂದು ಸರ್ಕಾರದ ಗಮನಕ್ಕೆ ತರಲಾಗಿದೆಯಾದರೂ ಆದ್ಯಾವುದರ ಬಗ್ಗೆಯೂ ವ್ಯವಸ್ಥೆ ತಲೆ ಕೆಡಿಸಿಕೊಳ್ಳುತ್ತಿಲ್ಲ.

ಇದಷ್ಟೇ ಅಲ್ಲದೆ, ಪೋಟಾ ಕಾಯಿದೆಯ ದುರ್ಬಳಕೆಯನ್ನು ತಡೆಯಲೆಂದೇ ಸ್ಥಾಪಿಸಲಾಗಿರುವ ಕೇಂದ್ರ ಪರಾಮರ್ಶಾ ಸಮಿತಿ ಕೂಡ ಗೋಧ್ರಾ ಪ್ರಕರಣಕ್ಕೆ ಪೋಟಾ ಅನ್ವಯವಾಗುವುದಿಲ್ಲವೆಂದೂ, ಬಂಧಿತರು ಜಾಮೀನು ಕೋರಬಹುದೆಂದು



ಕಂಡಹಾಗೆ

ಹೇಳಿದ್ದರೂ, ಅದರಂತೆ ಬಂಧಿತರ ಜಾಮೀನು ಅರ್ಜಿಗಳು ಆರು ಬಾರಿ ನ್ಯಾಯಾಲಯದ ಮುಂದೆ ಬಂದಿದ್ದರೂ ಇಲ್ಲಿಯವರೆಗೆ ಅವರಿಗೆ ಜಾಮೀನು ಸಿಕ್ಕಿಲ್ಲ. ಯಾಕೆಂದರೆ ಸುಪ್ರೀಂಕೋರ್ಟಿನ ಕಾರ್ಯಕಲಾಪಗಳನ್ನು ನಿರ್ಧರಿಸುವ ರಿಜಿಸ್ಟ್ರಿ ಒಂದೋ ಈ ಅರ್ಜಿಗಳನ್ನು ಸಮಯದ ಅಭಾವವಿರುವ ದಿನಗಳಲ್ಲೇ 'ಲಿಸ್ಟ್' ಮಾಡುತ್ತಿದೆ ಅಥವಾ ನ್ಯಾಯಾಧೀಶ ಪಂಚಾಲ್ ಅವರ ಮುಂದೆ ತರುತ್ತಿದೆ. (ನ್ಯಾಯಾಧೀಶ ಪಂಚಾಲ್‌ರವರು ಗುಜರಾತಿನವರು ಮಾತ್ರವಲ್ಲದೆ ಅವರ ಸಹೋದರ ಗುಜರಾತ್ ಸರ್ಕಾರದ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿರುವುದರಿಂದ ಅವರ ಮುಂದೆ ಈ ವಿಚಾರವನ್ನು ತರಬಾರದೆಂದು ನಿರ್ಧರಿಸಲಾಗಿದೆ ಮತ್ತು ಸ್ವತಃ ನ್ಯಾ. ಪಂಚಾಲರೂ ಅದಕ್ಕೆ ಒಪ್ಪಿಗೆ ನೀಡಿದ್ದಾರೆ.)"

ಇದೆಲ್ಲದರ ಬಗ್ಗೆ ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುವ ತೀಸ್ತ ಸೆಟ್ಲವಾದ್‌ರವರು ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. "ನಮ್ಮ ಸುಪ್ರೀಂಕೋರ್ಟಿನ ಕಾರ್ಯಕಲಾಪಗಳನ್ನು ನಿರ್ಧರಿಸುತ್ತಿರುವ ವ್ಯವಸ್ಥೆಯ ಬಗ್ಗೆ ಪ್ರಶ್ನಿಸಬಾರದೆ? ಯಾವ ವಿಷಯಗಳಿಗೆ ಆದ್ಯತೆ ನೀಡಲಾಗುತ್ತಿದೆ, ಯಾವುದಕ್ಕೆ ನೀಡಲಾಗುತ್ತಿಲ್ಲ ಎಂದು ಕೇಳಬಾರದೆ? ಮೂಲಭೂತ ಮಾನವ ಹಕ್ಕುಗಳಿಗೆ ಯಾಕೆ ಆದ್ಯತೆ ನೀಡುತ್ತಿಲ್ಲ ಎಂದು ಪ್ರಶ್ನೆ ಕೇಳದಿದ್ದರೆ ನಮಗೆ ಉತ್ತರಗಳೂ ಸಿಗುವುದಿಲ್ಲ. ಈಗ ಈ ದೇಶದ ಉಚ್ಚ ನ್ಯಾಯಲಯದಲ್ಲಿನ ವ್ಯವಸ್ಥೆಯ ಹೊಣೆಗಾರಿಕೆ ಬಗ್ಗೆ ಪ್ರಶ್ನಿಸುವ ಕಾಲ ಬಂದಿದೆ. ಸುಪ್ರೀಂಕೋರ್ಟ್ ತನ್ನ ಆತ್ಮವನ್ನೇ ಕಳೆದುಕೊಂಡು ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಬಗ್ಗೆ ಕುರುಡಾಗಿದೆಯೇ? ಹಾಗಿದ್ದರೆ ನಾವು ಯಾರತ್ತ ತಿರುಗಬೇಕು?" ಎಂದು ತೀಸ್ತ ತಮ್ಮ ಆತಂಕವನ್ನು ತೋಡಿಕೊಂಡಿದ್ದಾರೆ.

ಇದೇ ನಮ್ಮ ಸರ್ವೋಚ್ಚ ನ್ಯಾಯಾಲಯದ ಕೆಂಗಣ್ಣಿಗೆ ಕಾರಣವಾಗಿದೆ. ಆಕೆಯ ಲೇಖನವನ್ನು "ಅವಮಾನಕಾರಿ" ಎಂದೂ, ಆಕೆಯ ಸಂಪರ್ಕ ಹೊಂದಿರುವವರ ಮನವಿಗಳನ್ನು ಸ್ವೀಕರಿಸುವುದಿಲ್ಲವೆಂದೂ ಗುಡುಗಿದೆ.

ಆದರೆ ಆಕೆ ಎತ್ತಿದ ಪ್ರಶ್ನೆಗಳಿಗೆ ಉತ್ತರ ನೀಡುವವರು ಯಾರು?

■ ಗೌರಿ ಲಂಕೇಶ್



ಲಂಕೇಶ್ 73

ಮಾರ್ಚ್ 8, 2008

ಬರುವ ಮಾರ್ಚ್ 8 ಪಿ. ಲಂಕೇಶರ 73 ನೇ ಜನ್ಮ ದಿನಾಚರಣೆ. ಅಂದು ಅವರ ನೆನಪಿನಲ್ಲಿ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದೇವೆ. ಆ ಕಾರ್ಯಕ್ರಮದಲ್ಲಿ ಹಲವಾರು ಪುಸ್ತಕಗಳ ಬಿಡುಗಡೆ, 'ಲಂಕೇಶ್ ಚಲನಚಿತ್ರ ಪ್ರಶಸ್ತಿ' ವಿತರಣೆ ಕೂಡ ಇರುತ್ತದೆ.

ಈಗಲೇ ಮಾರ್ಚ್ 8 ದಿನಾಂಕವನ್ನು ನಿಮ್ಮ ಡೈರಿಯಲ್ಲಿ ಮಾರ್ಕ್ ಮಾಡಿಟ್ಟುಕೊಂಡು, ಅವತ್ತು ...ಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿ.

ದಿನಾಂಕ : ಶನಿವಾರ, ಮಾರ್ಚ್ 8, 2008
ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಸಮಯ : ಸಂಜೆ 4.00

ಎಲ್ಲರಿಗೂ ಸ್ವಾಗತ

ಲಂಕೇಶ್ ಪ್ರಕಾಶನದಿಂದ ಸದ್ಯದಲ್ಲೇ ಬರಲಿರುವ ಪುಸ್ತಕಗಳು

1. 'ಟೀಕೆ ಟಿಪ್ಪಣಿ- ಸಂಪುಟ 3'	ಪಿ. ಲಂಕೇಶ್ (ಸಂಗ್ರಹ: ಬಳಿದಾಳೆ ಈಶ)
2. ಸಾಹಿತಿ, ಸಾಹಿತ್ಯ, ವಿಮರ್ಶೆ	ಪಿ. ಲಂಕೇಶ್ (ಸಂಗ್ರಹ: ಡಾ. ವಿ.ಎಸ್.ಶ್ರೀಧರ)
3. ರೂಪಕ ಲೇಖಕರು	ಪಿ. ಲಂಕೇಶ್ ಮತ್ತು ಎಸ್.ಎಫ್. ಯೋಗಪ್ಪನವರ್
4. ರೈತರ ಆತ್ಮ ಹತ್ಯೆ	ಶಿವಸುಂದರ್
5. ಶತಶತಮಾನಗಳಿಂದ ಭಾರತೀಯ ಸಂವಿಧಾನ ಮನುಸ್ಮೃತಿ	ಏಕಲವ್ಯ
6. ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್	ಗೌರಿ ಲಂಕೇಶ್

2008ರ ವಿಶೇಷಾಂಕ!

ಸಮೃದ್ಧ, ಸರ್ವರಿಗೂ ಇಷ್ಟವಾಗುವಂತಹ, ಸಂಪೂರ್ಣ ವಿಶೇಷಾಂಕ ಮಾರ್ಚ್ 8 ರಂದೇ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ತಮ್ಮ ಪ್ರತಿಯನ್ನು ಈಗಲೇ ಕಾದಿರಿಸಿ!


ಆರೆಸ್ಸೆಸ್ ಕಚೇರಿಗೆ ಆರೆಸ್ಸೆಸ್‌ಗಳಿಂದಲೇ ಬಾಂಬ್!

"ಇವತ್ತು ಎಂತಹ ವಾತಾವರಣ ನಿರ್ಮಾಣವಾಗಿದೆ ಎಂದರೆ ಎಲ್ಲೇ ಬಾಂಬ್ ಸ್ಫೋಟವಾಗಲಿ, ಯಾರು ಯಾರನ್ನೇ ಕೊಲ್ಲಲಿ, ಎಲ್ಲೇ ಗಲಭೆಗಳಾಗಲೀ, ಬೆಂಕಿ ಬೀಳಲಿ ಅಥವಾ ಇಂತಹ ಯಾವುದೇ ಅಹಿತಕರ ಘಟನೆಗಳು ಸಂಭವಿಸಿದರೂ ಕೆಲವು ಸಿದ್ಧ ಅಪರಾಧಿಗಳನ್ನು ತೋರಿಸಿ ಅವರೇ ಈ ಎಲ್ಲಾ ದುಷ್ಕೃತ್ಯಗಳಿಗೆ ಕಾರಣ ಎಂದು ಹೇಳುವ ಪರಿಪಾಠ ಬೆಳೆದುನಿಂತಿದೆ. ಆ ಅಪರಾಧಿಗಳು ಮುಸ್ಲಿಮ್ ಭಯೋತ್ಪಾದಕರಾಗಿರಬಹುದು ಅಥವಾ ಮಾವೋವಾದಿಗಳಾಗಿರಬಹುದು ಎಂದೇ ಮಾಧ್ಯಮಗಳು, ಜನಸಾಮಾನ್ಯರು, ಪೊಲೀಸರು ನಂಬಿರುತ್ತಾರೆ ಮತ್ತು ಹಾಗೆಯೇ ಬಿಂಬಿಸುತ್ತಾರೆ ಕೂಡ.

ಇಂತಹ ಸನ್ನಿವೇಶದಲ್ಲಿ ಆರೆಸ್ಸೆಸ್ ಕಚೇರಿಗೆ ಬಾಂಬ್ ಇಟ್ಟವರು ಯಾವ ಮುಸ್ಲಿಮ್ ಭಯೋತ್ಪಾದಕರೂ ಅಲ್ಲ, ಮಾವೋವಾದಿಗಳೂ ಅಲ್ಲ, ಬದಲಾಗಿ ಬಾಂಬ್ ಇಟ್ಟವರು ಆರೆಸ್ಸೆಸ್ ಕಾರ್ಯಕರ್ತರೇ ಎಂಬ ಸತ್ಯ ಕೆಲವರಿಗೆ 'ಕಹಿ'ಯಾಗಿರುತ್ತದೆ. ಆದರೆ ಇಂತಹದೊಂದು ಕಹಿ ಸತ್ಯ ಘಟನೆ ಇತ್ತೀಚೆಗೆ ದಕ್ಷಿಣ ಭಾರತದ ಕಾಶಿ ಎಂದೇ ಪ್ರಸಿದ್ಧವಾಗಿರುವ ತಮಿಳುನಾಡಿನ ತೆಂಕಾಶಿಯಲ್ಲಿ ನಡೆದಿದೆ.

ತಮಿಳುನಾಡಿನ ತಿರುನೇಲ್ವೇಲಿ ಜಿಲ್ಲೆಯಲ್ಲಿರುವ ಈ ತೆಂಕಾಶಿಯ ಆರೆಸ್ಸೆಸ್ ಕಚೇರಿಯಲ್ಲಿ ಜನವರಿ 24ರ ಬೆಳಿಗ್ಗೆ 9 ಗಂಟೆಯ ಸುಮಾರಿಗೆ ಪೈಪ್ ಬಾಂಬ್ ಸ್ಫೋಟಗೊಂಡಿತು. ಆಶ್ಚರ್ಯವೆಂದರೆ ಈ ಘಟನೆ ನಡೆದ ಸಮಯದಲ್ಲಿ ಅಲ್ಲಿ ಯಾರೂ ಇರದಿದ್ದ ಕಾರಣ ಯಾವ ಸಾವುನೋವುಗಳೂ ಸಂಭವಿಸಲಿಲ್ಲ. ಈ ಬಾಂಬ್ ದಾಳಿ ನಡೆಯುವ ಸ್ವಲ್ಪ ಮುನ್ನ ತೆಂಕಾಶಿಯ ಹೊಸ ಬಸ್ ನಿಲ್ದಾಣದಲ್ಲೂ ಕೂಡ ಒಂದು ಪೈಪ್ ಬಾಂಬ್ ಸ್ಫೋಟಗೊಂಡಿತು. ನಿರೀಕ್ಷೆಯಂತೆ ಈ ಘಟನೆಗಳು ಸಂಭವಿಸಿದ ತಕ್ಷಣವೇ ಸಂಘಪರಿವಾರ ಇದೆಲ್ಲಾ ಮುಸ್ಲಿಮ್ ಭಯೋತ್ಪಾದಕರದ್ದೇ ಕೆಲಸ ಎಂದು ದೂರುತ್ತಾ ಇಡೀ ತೆಂಕಾಶಿಯಲ್ಲಿ ದೊಡ್ಡ ದಾಂಧಲೆಯನ್ನೆಬ್ಬಿಸಿಬಿಟ್ಟಿತು. ಇದೊಂದು ಪೂರ್ಣ ಪ್ರಮಾಣದ ಕೋಮು ಗಲಭೆಯಾಗಿ ಪರಿವರ್ತನೆಗೊಳ್ಳಬಹುದೆಂಬ ಭೀತಿಯಿಂದ ಪೊಲೀಸರೂ ಕೂಡ ಬಿಗಿ ಭದ್ರತೆಯನ್ನು ಏರ್ಪಾಡು ಮಾಡಿದರು. ಏಕೆಂದರೆ, ತೆಂಕಾಶಿಯಲ್ಲಿ ಕಳೆದ ವರ್ಷದ ಆಗಸ್ಟ್‌ನಲ್ಲಿ ಕೋಮುಗಲಭೆಯೆದ್ದು ಅಪಾರ ಪ್ರಮಾಣದ ಹಾನಿಯುಂಟಾಗಿತ್ತು, ಹಾಗಾಗಿ ಪೊಲೀಸರು ಈ ಬಾರಿ ಮುನ್ನೆಚ್ಚರಿಕೆ ತೆಗೆದುಕೊಂಡು ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದರು.

ಬಾಂಬ್ ನಿಷ್ಕ್ರಿಯದಳ, ಹೆಚ್ಚುವರಿ ಪೊಲೀಸ್ ಪಡೆಗಳು, ಹಿರಿಯ ಪೊಲೀಸ್ ಅಧಿಕಾರಿಗಳು ತೆಂಕಾಶಿಗೆ ದೌಡಾಯಿಸಿ ತನಿಖೆ ನಡೆಸಲಾರಂಭಿಸಿದರು. ಆರಂಭಿಕ ತನಿಖೆಯಿಂದ ದೃಢಪಟ್ಟಿದ್ದೇನೆಂದರೆ ಆರೆಸ್ಸೆಸ್ ಕಚೇರಿ ಮತ್ತು ಬಸ್ ನಿಲ್ದಾಣಗಳೆರಡರಲ್ಲೂ ಸಂಭವಿಸಿದ ಸ್ಫೋಟಗಳು ಒಂದಕ್ಕೊಂದು ನಿಕಟವಾಗಿ ಹೋಲುತ್ತಿದ್ದವು. ಎರಡರಲ್ಲೂ ಕಡಿಮೆ ತೀವ್ರತೆಯ ಪರಿಕರಗಳನ್ನು ಬಳಸಲಾಗಿತ್ತು.



ಬಾಂಬಿಟ್ಟ ಸಂಘಪರಿವಾರಿಗಳು

ಘಟನೆ ಮರುದಿನ ಪತ್ರಿಕೆಗಳಲ್ಲೂ ಎಂದಿನಂತೆ ನಿರೀಕ್ಷಿಸಬಹುದಾದ ಮಾಮೂಲಿನ ಸುದ್ದಿ: ಇಸ್ಲಾಮಿಕ್ ಭಯೋತ್ಪಾದನೆಯ ಅಪಾಯ, ರಾಜ್ಯದಲ್ಲಿ ಭಯೋತ್ಪಾದಕರ ಅಡಗುತಾಣ, ಪೊಲೀಸರ ವೈಫಲ್ಯ ಇತ್ಯಾದಿ... ಇತ್ಯಾದಿ...

'ತೆಂಕಾಶಿಯಲ್ಲಿ ಬಾಂಬ್‌ಗಳನ್ನು ಸ್ಫೋಟಿಸಿದವರ್‍ಯಾರು' ಎಂಬ ಪ್ರಶ್ನೆಗೆ ಸಂಘಪರಿವಾರದ ಹತ್ತಿರ ಮತ್ತು ಮಾಧ್ಯಮಗಳ ಹತ್ತಿರ ಸಿದ್ಧ ಉತ್ತರವಿತ್ತು, ಹಾಗಾಗಿಯೇ ಅವರು ಇಸ್ಲಾಮಿಕ್ ಭಯೋತ್ಪಾದನೆಯನ್ನು ಗುರಿ ಮಾಡಿ ಕಾರ್ಯಾಚರಣೆಗಿಳಿದಿದ್ದರು. ಆದರೆ ಪೊಲೀಸರ ಹತ್ತಿರ ಅಷ್ಟು ನಿಖರವಾದ ಮಾಹಿತಿ ಇರಲಿಲ್ಲ, ಏಕೆಂದರೆ ಪೊಲೀಸರು ಈ ಮಾಹಿತಿಯನ್ನು ತನಿಖೆ ಮಾಡಿ ಕಂಡುಕೊಳ್ಳಬೇಕಿತ್ತು. ಮಾಧ್ಯಮದವರು ಮತ್ತು ಸಂಘಪರಿವಾರದವರು ಈ ತನಿಖೆಯ ಗೊಡವೆಗೆ ಹೋಗದೇ ಇಸ್ಲಾಮಿಕ್ ಭಯೋತ್ಪಾದಕರೇ ಈ ಕಾರ್ಯ ಮಾಡಿದ್ದು ಎಂದು ತಮ್ಮ ಮೂಗಿನ ನೇರಕ್ಕೆ ಹೇಳಿಯಾಗಿತ್ತು. ಪೊಲೀಸರು ಈ ಗಾಳಿ ಸುದ್ದಿಗಳಿಗೆ ಕಿವಿಗೊಡದೇ ತನಿಖೆ ಪ್ರಾರಂಭಿಸಿದರು. ತಿರುನೇಲ್ವೇಲಿ ವಲಯದ ಡಿಐಜಿ ಪಿ. ಕಣ್ಣಪ್ಪನ್ ನೇತೃತ್ವದಲ್ಲಿ ಒಂದು ತನಿಖಾ ತಂಡವೂ ಸಿದ್ಧವಾಗಿ ಕಾರ್ಯಾಚರಣೆಗಿಳಿಯಿತು.

ತನಿಖೆಯ ಆರಂಭಿಕ ಹಂತದಲ್ಲಿಯೇ ತೆಂಕಾಶಿ ಆರೆಸ್ಸೆಸ್ ಕಚೇರಿಯ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಎಸ್. ರವಿಪಾಂಡ್ಯನ್ ಎಂಬ ಒಬ್ಬ ಟಿ.ವಿ. ಕೇಬಲ್ ಆಪರೇಟರ್, ಎಸ್ ಕುಮಾರ್ ಎಂಬ ಒಬ್ಬ ಆಟೋ ಡ್ರೈವರ್ ಹಾಗೂ ವಿ. ನಾರಾಯಣ ಧರ್ಮ ಎಂಬ ಮೂವರನ್ನು ತನಿಖಾ ತಂಡ ಬಂಧಿಸಿತು. ಆದರೆ, ಆಶ್ಚರ್ಯ ಎಂದರೆ ಈ ಮೂವರೂ ಆರೆಸ್ಸೆಸ್ ಕಾರ್ಯಕರ್ತರು ಯಾವಾಗ ಪೊಲೀಸರು ಇವರನ್ನು ವಿಚಾರಣೆ ನಡೆಸಲು ಪ್ರಾರಂಭಿಸಿದರೋ ಆಗ ಆಘಾತಕಾರಿ ವಿಚಾರಗಳು ಬಯಲಿಗೆ ಬಂದವು. ಆರೆಸ್ಸೆಸ್ ಕಚೇರಿಯಲ್ಲಿ ಮತ್ತು ಬಸ್ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸಿ, ಅದನ್ನು ಮುಸ್ಲಿಮ್ ಭಯೋತ್ಪಾದಕರ ತಲೆಗೆ ಕಟ್ಟಿ ತೆಂಕಾಶಿಯಲ್ಲಿ ಕೋಮುಗಲಭೆ ಎಬ್ಬಿಸುವುದಕ್ಕಾಗಿಯೇ ತಾವು ಈ ಕೃತ್ಯವನ್ನು ಮಾಡಿದ್ದಾಗಿ ಅವರು ಪೊಲೀಸರೆದುರು ಒಪ್ಪಿಕೊಂಡರು! ಈ ಯೋಜನೆಯನ್ನು ಎಷ್ಟು ಚೆನ್ನಾಗಿ ಹೆಣೆಯಲಾಗಿತ್ತೆಂದರೆ ಕೇವಲ ಆರೆಸ್ಸೆಸ್ ಕಚೇರಿಯಲ್ಲಿ ಮಾತ್ರ ಬಾಂಬ್ ಸ್ಫೋಟಿಸಿದರೆ ಅನುಮಾನ ಬರಬಹುದೆಂದು ಪೊಲೀಸ್ ತನಿಖೆಯ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಬಸ್ ನಿಲ್ದಾಣದಲ್ಲಿಯೂ ಬಾಂಬ್ ಸ್ಫೋಟಿಸಿದ್ದಾಗಿಯೂ ಅವರು ಬಾಯಿಬಿಟ್ಟರು. ಆರೆಸ್ಸೆಸ್ ಕಚೇರಿಯಲ್ಲಿ ಬಾಂಬ್ ಸ್ಫೋಟಿಸುವುದಕ್ಕೆ ಕಚೇರಿಯಲ್ಲಿ ಯಾರೂ ಇರದ ಸಮಯವನ್ನೇ ಆಯ್ಕೆಮಾಡಿಕೊಳ್ಳುವ ಮೂಲಕ ತಮ್ಮವರ ಪ್ರಾಣಕ್ಕೆ ಯಾವುದೇ ಹಾನಿಯಾಗದಂತೆ ನೋಡಿಕೊಂಡೆವು ಎಂಬುದನ್ನೂ ಅವರು ಪೊಲೀಸರಿಗೆ ತಿಳಿಸಿದರು.


ಈ ಮೂವರು ತನಿಖಾ ವೇಳೆಯಲ್ಲಿ ಈ ಘನಕಾರ್ಯದಲ್ಲಿ ತಮಗೆ ಯಾರ್‍ಯಾರು 'ಸಹಕರಿಸಿದರೆಂಬುದನ್ನೂ ಬಾಯಿಬಿಟ್ಟಿದ್ದಾರೆ. ಅದರ ಆಧಾರದ ಮೇಲೆ ಪೊಲೀಸರು ಎ. ಬಾಲಮುರುಗನ್, ವೇಲ್ ಮುರುಗನ್, ಎ. ಮುರುಗನ್ ಮತ್ತು ಮಾಸಾನಮ್ ಎಂಬ ಚೆಡ್ಡಿಗಳನ್ನು ಬಂಧಿಸಿದ್ದಾರೆ. ಮುಂದಿನ ತನಿಖೆಯಲ್ಲಿ ಈ ಬಂಧಿತರಿಂದಲೂ ಮತ್ತಷ್ಟು ಪೈಪ್ ಬಾಂಬುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಪ್ರಕರಣದಲ್ಲಿ ಶಿವ ಅಲಿಯಾಸ್ ಶಿವನಂದಮ್ ಎಂಬ ಮತ್ತೊಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಈತ ಮೊದಲು ಬಂಧಿತರಾದ ಮೂವರಂತೆ ಸಂಘಪರಿವಾರದ ಕಾರ್ಯಕರ್ತ ಮಾತ್ರವಲ್ಲ ಆರೆಸ್ಸೆಸ್‌ನ ಸಹಭಾಗಿ ಸಂಘಟನೆಯಾದ 'ಹಿಂದೂ ಮುನ್ನಣಿ'ಯ ಪ್ರಧಾನ ಕಾರ್ಯದರ್ಶಿ. ಈತನೇ ಇಡೀ ಕಾರ್ಯಾಚರಣೆಗೆ ಮಾರ್ಗದರ್ಶನ ನೀಡಿದ್ದಾನೆ. ಈ ಹಿಂದೆ ಈತ ಬಾಂಬ್ ತಯಾರಿಸುವುದಕ್ಕೆ ಬೇಕಾದ ಅಮೋನಿಯಂ ನೈಟ್ರೇಟ್, ಎಲೆಕ್ಟ್ರಿಕ್ ಡಿಟೋನೇಟರ್ಸ್, ಬ್ಯಾಟರಿಗಳು ಮತ್ತು ಟೈಮರ್ ಸಲಕರಣೆಗಳನ್ನು ಆರೆಸ್ಸೆಸ್‌ಗೆ ಸಪ್ಲೆ ಮಾಡುತ್ತಿದ್ದ ಎಂಬುದೂ ಕೂಡ ತನಿಖೆಯಲ್ಲಿ ದೃಢಪಟ್ಟಿದೆ.

ಸಂಘಪರಿವಾರ ಈ ಕೃತ್ಯಕ್ಕಾಗಿ ತೆಂಕಾಶಿಯನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೂ ಇದೆ. ಕಳೆದ ಚುನಾವಣೆಯಲ್ಲಿ ತೆಂಕಾಶಿಯಲ್ಲಿ ಸಂಘಪರಿವಾರದ ಪ್ರತಿನಿಧಿಗಳು

ಶಿವಮೊಗ್ಗ: ಚೆಡ್ಡಿಗಳ ಜಾತಿ ಜಗಳ

"ಬಿಜೆಪಿಯ ಸಿದ್ಧಾಂತದ ಮುಂದೆ ಜಾತಿ ತುಂಬಾ ಗೌಣ. ನಮ್ಮ ಪಾರ್ಟಿಯಲ್ಲಿ ಜಾತಿ ಸಂಘರ್ಷವೇ ಇಲ್ಲ, ನಾವು ಹಿಂದೂಗಳೆಲ್ಲ ಒಂದು" ಎಂದು ಹೇಳಿಕೊಂಡು ತಿರುಗುತ್ತಿದ್ದ ಬಿಜೆಪಿ ಪಾರ್ಟಿಯ ಜಾತಿ ಬಂಡವಾಳ ಶಿವಮೊಗ್ಗೆಯಲ್ಲಿ ಬೀದಿಗೆ ಬಿದ್ದಿದೆ.



ಶಿವಮೊಗ್ಗ ನಗರಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದ ಬಿಜೆಪಿ ಅಧಿಕಾರ ಹಿಡಿಯಲು ಕಾದು ಕುಳಿತಿತ್ತು. ಅದರಂತೆ ಅಧ್ಯಕ್ಷರ ಆಯ್ಕೆಯೂ ಒಳಗೊಳಗೆ ಜಾತಿ ಲೆಕ್ಕಾಚಾರದಲ್ಲೇ ನಡೆದಿತ್ತು, ಬ್ರಾಹ್ಮಣರ ಪೈಕಿ ಎಂ. ಶಂಕರ್ ಅಥವಾ ಲಿಂಗಾಯತರ ಪೈಕಿ ಸುಭಾಷ್, ಇವರಿಬ್ಬರಲ್ಲಿ ಅಂತಿಮವಾಗಿ ಯಾರಾದರೊಬ್ಬರು ಆಯ್ಕೆ ಆಗಬಹುದೆಂದು ಎಲ್ಲರೂ ಲೆಕ್ಕ ಹಾಕಿದ್ದರು.

ಆದರೆ ಜಾತಿ ಕಗ್ಗಂಟನಿಂದಾಗಿ ಈ ಆಯ್ಕೆ ಅಷ್ಟು ಸಲೀಸಾಗಿ ನಡೆಯುವುದಿಲ್ಲ ಎಂಬುದು ಯಡಿಯೂರಪ್ಪನಿಗೆ ಗೊತ್ತಿತ್ತು, ಎಂ. ಶಂಕರ್‌ನನ್ನು ಆರಿಸಿದರೆ ಸ್ವಜಾತಿ ಬಾಂಧವರ ಆಕ್ರೋಶಕ್ಕೆ ತುತ್ತಾಗಬೇಕಾಗುತ್ತದೆ; ಸುಭಾಷ್‌ನನ್ನು ಆರಿಸಿದರೆ ಬ್ರಾಹ್ಮಣರ ಶಾಪ ಮತ್ತು ಸೇಡಿಗೆ ತುತ್ತಾಗಬೇಕಾಗುತ್ತದೆ ಎಂದೇ ಯಡಿಯೂರಪ್ಪ ಇದರ ಸಂಪೂರ್ಣ ಉಸಾಬರಿಯನ್ನು ಬಾವ-ಮೈದುನರಂತೆ ಕಾಣುವ ಶಂಕರಮೂರ್ತಿ ಮತ್ತು ಈಶ್ವರಪ್ಪನ ಕೊರಳಿಗೆ ಬಿಗಿದು ದೂರ ಉಳಿದುಬಿಟ್ಟರು.

ಎಂ. ಶಂಕರ್ ದಿವಂಗತ ಆನಂದರಾಯರ ಮಗ. ತಮ್ಮ ಸರಳತೆ ಮತ್ತು ಸಜ್ಜನಿಕೆಯಿಂದ ಎಲ್ಲ ಜನಾಂಗದ ವಿಶ್ವಾಸ ಗಳಿಸಿದ್ದ ಆನಂದರಾಯರ ನಂತರ ಅವರ ಉತ್ತರಾಧಿಕಾರಿಯಾಗಿ ಶಂಕರ್ ಎಲ್ಲರಿಗೂ ಬೇಕಾದ ವ್ಯಕ್ತಿ ಎನ್ನಿಸಿಕೊಂಡಿದ್ದರು. ಈತನನ್ನು ಬಿಗಿಯಾಗಿ ಹಿಡಿದುಕೊಂಡ ವಿಪ್ರೋತ್ತಮರು, ಈ ಬಾರಿ ನಗರಸಭಾ ಅಧ್ಯಕ್ಷಗಿರಿ ಬ್ರಾಹ್ಮಣ ಪ್ರತಿನಿಧಿಗೇ ಸಿಗಬೇಕೆಂದು ಪಟ್ಟುಹಿಡಿದರು. ಅದಕ್ಕೆ ಸರಿಯಾಗಿ, ಈಗಾಗಲೇ ಮಲೆನಾಡಿನ ಸಾಮಾಜಿಕ ಸಮಸ್ಯೆಯಂತಾಗಿರುವ ರಾಘವೇಶ್ವರ ಸ್ವಾಮಿಯಿಂದ ಈಶ್ವರಪ್ಪನಿಗೆ ಫೋನ್ ಮಾಡಿಸಿ, ವಿಪ್ರ ಸಮಾಜದ ಅಭ್ಯರ್ಥಿಯನ್ನೇ ಆಯ್ಕೆ ಮಾಡಬೇಕೆಂದು ತಾಕೀತು ಮಾಡಿದರು.


ಇತ್ತ ಲಿಂಗಾಯತರೂ ಸುಮ್ಮನೆ ಕೂರಲಿಲ್ಲ. ವೀರಶೈವ ಮುಖಂಡರು "ಎಚ್.ಎಂ. ಚಂದ್ರಶೇಖರಪ್ಪನ ನಂತರ ನಮ್ಮವರು ನಗರಸಭಾ ಅಧ್ಯಕ್ಷ ಪದವಿಯನ್ನೇ ಅನುಭವಿಸಿಲ್ಲ, ಆದ್ದರಿಂದ ಈ ಬಾರಿ ನಗರಸಭೆ ನಮಗೇ ಸೇರಬೇಕು" ಎಂದು ಪಟ್ಟು ಹಿಡಿವರಲ್ಲದೆ ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರುಗಳಿಂದ ಈಶ್ವರಪ್ಪನಿಗೆ ಫೋನ್ ಮಾಡಿಸಿ ವೀರಶೈವ ಸಮಾಜದ ಸುಭಾಷ್‌ನನ್ನು ನಗರಸಭೆ ಅಧ್ಯಕ್ಷನನ್ನಾಗಿ ಮಾಡಲೇಬೇಕೆಂಬ ಎಚ್ಚರಿಕೆಯನ್ನು ಕೊಡಿಸಿದರು.

ಅತ್ತ ದರಿ ಇತ್ತ ಪುಲಿ ಎಂಬಂತಾದ ಈಶ್ವರಪ್ಪ ಹೇಳಿಕೇಳಿ ವಿಪ್ರೋತ್ತಮರು ನೀಡುವ ಚಿಲ್ಲರೆ ತಟ್ಟೆ ಕಾಸಿಗೇ ಮರುಳಾಗುವ ವ್ಯಕ್ತಿ. ಅಷ್ಟೇ ಅಲ್ಲದೆ, ಬ್ರಾಹ್ಮಣ ಎಂ. ಶಂಕರನನ್ನು ಅಧ್ಯಕ್ಷನನ್ನಾಗಿ ಮಾಡಿದರೆ ಬರಲಿರುವ ಚುನಾವಣೆಗಳಲ್ಲಿ ಬ್ರಾಹ್ಮಣರ ಮತ್ತು ಕುರುಬರ ಓಟುಗಳು ಮಿಲಾಕತ್ತಾಗುವುದರಿಂದ ತನ್ನ ಭವಿಷ್ಯಕ್ಕೆ ಒಳ್ಳೆಯದು ಎಂದು ಲೆಕ್ಕ ಹಾಕಿದ ಈಶ್ವರಪ್ಪ.

ಅದು ಹೇಗೋ ಈಶ್ವರಪ್ಪ ಇಂತಹ ಲೆಕ್ಕ ಹಾಕುತ್ತಿದ್ದಾನೆಂಬ ಸುದ್ದಿ ವೀರಶೈವ ಪಡೆಗೆ ತಲುಪಿತು. ಕೂಡಲೇ ಅವರೆಲ್ಲಾ ಪರಸ್ಪರ ಫೋನ್ ಮಾಡಿಕೊಂಡು ಈಶ್ವರಪ್ಪನ ಮನೆಯಲ್ಲಿ ಜಮಾಯಿಸಿದರು. ಅವತ್ತು ಅಲ್ಲಿ ಅವರೆಲ್ಲ ಆಡಿದ ಮಾತುಗಳಲ್ಲಿ 'ನವ್ಯ ಮಾರ್ಗ'ದ ಪದಪುಂಜಗಳು ವಿಜೃಂಭಿಸಿದವಲ್ಲದೆ "ನೀವೀಗ ನಮ್ಮ ಜಾತಿ ಪರ ನಿಲ್ಲುವುದಾದರೆ ಮುಂದೆ ನಾವು ನಿಮ್ಮ ಪರ ನಿಲ್ಲುತ್ತೇವೆ. ನೋಡಿ, ಯೋಚನೆ ಮಾಡಿ" ಎಂಬ ಗಂಭೀರ ಎಚ್ಚರಿಕೆಯನ್ನೂ ಈಶ್ವರಪ್ಪನಿಗೆ ಕೊಟ್ಟರು.

ಶಿವಮೊಗ್ಗೆಯಲ್ಲಿ ಲಿಂಗಾಯತರು ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ಸಹಜವಾಗಿಯೇ ಈಶ್ವರಪ್ಪ ಕಂಗಾಲಾದ. "ಹಾಗಾದರೆ ಸುಭಾಷ್ ನಗರಸಭೆ ಅಧ್ಯಕ್ಷ. ಇದರಲ್ಲಿ ಎರಡು ಮಾತೇ ಇಲ್ಲ" ಎಂಬ ಆಶ್ವಾಸನೆ ಅವರೆಲ್ಲರಿಗೆ ಕೊಟ್ಟು ಕಳುಹಿಸಿದ. ಇದನ್ನು ನಂಬಿದ ಸುಭಾಷ್‌ರ ಲಿಂಗಾಯತ ಪಡೆ ಆತನಿಗೇ ಅಧ್ಯಕ್ಷಗಾದಿ ಎಂದು ಕಡೆಯವರೆಗೂ ಕಾಯುತ್ತ ಕುಳಿತಿತ್ತು.

ಈ ಮಧ್ಯೆ ಬಿಜೆಪಿಯಲ್ಲಿ ಯಡಿಯೂರಪ್ಪನ ಲಿಂಗಾಯತ ಬಣ ಮತ್ತು ಅನಂತಕುಮಾರನ ಬ್ರಾಹ್ಮಣ ಬಣ ಎಂದು ಎರಡು ಗುಂಪುಗಳು ಸೃಷ್ಟಿಯಾದವು. ಈ ಲಿಂಗ, ದಾರದ ಜಗಳ ಹೆಚ್ಚಾದಂತೆ ನಾಯಕರೆಲ್ಲ ತೆರೆಮರೆಯಲ್ಲಿ ಕೂತು ತಮ್ಮ ತಮ್ಮವರ ಹಿತಾಸಕ್ತಿಗನುಗುಣವಾಗಿ ಸಲಹೆ ಸೂಚನೆ ಕೊಡುತ್ತ ಸಾಗಿದರು.



ಇಷ್ಟೆಲ್ಲ ನಡೆಯುತ್ತಿದ್ದರೂ ಈಶ್ವರಪ್ಪನ ಕಡೆಯಿಂದ "ಸುಭಾಷ್‌ನೇ ನಗರಸಭಾಧ್ಯಕ್ಷ" ಎಂಬ ಆಶ್ವಾಸನೆ ಪದೇಪದೇ ಬರುತ್ತಿದ್ದರಿಂದ ಅದನ್ನೇ ಸುಭಾಷ್ ನಂಬಿದ. ಅಷ್ಟೇ ಅಲ್ಲ, ಶಂಕರಮೂರ್ತಿ ಮತ್ತು ಈಶ್ವರಪ್ಪ ಹೇಳಿದಂತೆ ಆತ ಪಕ್ಷದ ಕಚೇರಿಯಲ್ಲೇ ಕೂತಿದ್ದ.

ಆದರೆ ಅತ್ತ ಕಡೆ ಸುಭಾಷನಿಗೆ ಗೊತ್ತಿಲ್ಲದಂತೆ

...ಾಯ ಶೋಲಿಸ್ಸನುಭವಿಸಿದ್ದರು. ಎಲ್ಲಿಯತನಕ ಇಲ್ಲಿ ...ಮು ವಳ್ಳಿರಿ ಹಬ್ಬಾಗುವುದಿಲ್ಲವೋ ಅಲ್ಲಿಯತನಕ ...ಶಿಯನ್ನು ರಾಜಕೀಯವಾಗಿ ಗೆದ್ದುಕೊಳ್ಳಲು ...ವಿಲ್ಲ ಎಂಬುದನ್ನು ಮನಗಂಡು ಈ ಘನಂದಾರಿ ...ಕ್ಕೆ ಕೈಹಾಕಿದ್ದಾರೆ.

ಇಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕು. ...ಶಿಯಲ್ಲಿ ನಡೆದ ಈ ಬಾಂಬ್ ಸ್ಫೋಟಕ್ಕೂ ಹಾಗೂ ...ದರಾಬಾದಿನಲ್ಲಿ ನಡೆದ ಮೆಕ್ಕಾ ಮಸೀದಿಯ ಬಾಂಬ್ ...ಟಕ್ಕೂ ಸಾಕಷ್ಟು ಸಾಮ್ಯತೆಗಳಿವೆ ಎಂಬುದನ್ನು ...ಾ ತಂಡ ಪತ್ತೆ ಹಚ್ಚಿದೆ. ಈ ಹಿನ್ನೆಲೆಯಲ್ಲಿ ಮೆಕ್ಕಾ ...ದಿ ಸ್ಫೋಟ ಕುರಿತಂತೆ ಪುನರ್ ತನಿಖೆ ನಡೆಸ ...ಂಬ ಚರ್ಚೆಯೂ ಎದ್ದಿದೆ.

ಸಂಘಪರಿವಾರದ ಈ ತಂತ್ರ ಹೊಸದೆ?

...ತೆಂಕಾಶಿಯ ಬಾಂಬ್ ಪ್ರಕರಣ ಒಂದು ಅಪವಾದ, ...ನ್ನು ಹೊರತುಪಡಿಸಿದರೆ ಆರೆಸ್ಸೆಸ್ ಮತ್ತು ...ಪರಿವಾರ ಉಳಿದಂತೆ 'ದೇಶಭಕ್ತಿ'ಯನ್ನೇ ಪ್ರದರ್ಶಿ... ಎಂದು ನೀವೇನಾದರೂ ಅಂದುಕೊಂಡಿದ್ದರೆ ಅದು ... ಕಲ್ಪನೆ. ವಾಸ್ತವದಲ್ಲಿ ತೆಂಕಾಶಿಯಲ್ಲಿ ಅದು ...ಸರಿಸಲು ಹೊರಟಿದ್ದ ವ್ಯೂಹತಂತ್ರವನ್ನೆ ಎಲ್ಲೆಡೆ ...ಿದೆ. ಇಡೀ ದೇಶವನ್ನು ತಲ್ಲಣಗೊಳಿಸಿದ 2002ರ ...ರಾತ್ ಹತ್ಯಾಕಾಂಡ ಕೂಡ ಇದಕ್ಕೆ ಹೊರತಲ್ಲ.

2002ರ ಫೆಬ್ರವರಿ ಕೊನೆಯಲ್ಲಿ ಕೋಮುದಳ್ಳುರಿ ...ತ್ತಿ ಉರಿಯಲಾರಂಭಿಸಿದ ಆರು ತಿಂಗಳ ಮೊದಲೇ ...ಕ್ಕಾಗಿ ಸಂಘಪರಿವಾರ ತಯಾರಿ ನಡೆಸಿತ್ತು. ತನ್ನ ...ಬಲವಿರುವ ಪ್ರದೇಶಗಳಲ್ಲಿ ಜನರಿಗೆ ಖಡ್ಗಗಳನ್ನು ...ಸಿತ್ತು, ಬೃಹತ್ ಪ್ರಮಾಣದಲ್ಲಿ ಪೊಲೀಸ್ ಅಧಿ...ಗಳನ್ನು ವರ್ಗಾವಣೆ ಮಾಡಿ ಗಲಭೆ ಎಬ್ಬಿಸಬೇಕಾದ ...ಳಿಗೆ ಮಾರಣ ಹೋಮಕ್ಕೆ ಬೆಂಬಲಿಸುವ ಪೊಲೀಸ್ ...ಕಾರಿಗಳನ್ನು ತಂದು ಕೂರಿಸಿತ್ತು. ಸ್ಫೋಟಕ್ಕಾಗಿ ...ಹತ್ ಪ್ರಮಾಣದಲ್ಲಿ ಎಲ್‌ಪಿಜಿ ಸಿಲೆಂಡರ್‌ಗಳನ್ನು ...ದಿಸಿತ್ತು, ಮುಸ್ಲಿಮ್ ಜನರು ವಾಸಿಸುವ ಪ್ರದೇಶಗಳ, ...ರ ಬಿಸಿನೆಸ್ ಸೆಂಟರ್‌ಗಳ ಸಂಪೂರ್ಣ ಮಾಹಿತಿ ...ನ್ನು ಕಲೆ ಹಾಕಿತ್ತು, ಯಾವ್ಯಾವ ಪ್ರದೇಶದಲ್ಲಿ ಕೊಲೆ ...ಕ ತಂಡಗಳಿಗೆ ಯಾರ್‍ಯಾರು ನೇತೃತ್ವ ವಹಿಸಬೇಕು ... ಕಾರ್ಯವಿಭಜನೆ ಮಾಡಲಾಗಿತ್ತು. ಎಲ್ಲ ಸಿದ್ಧತೆ ...ಗಿದ ಮೇಲೆ ಕೋಮುದಳ್ಳುರಿ ಹಚ್ಚಲು ಹೇಗೆ ...ಸು ನೆಪವನ್ನು ಸೃಷ್ಟಿಸಿಕೊಳ್ಳಬೇಕೆಂದೂ ನಿರ್ಧರಿಸ...ತ್ತು. ಈ ಸಂಪೂರ್ಣ ಯೋಜನೆಯ ಭಾಗವಾಗಿಯೇ ...ದ್ರಾ ಹತ್ಯಾಕಾಂಡ' ಎಂಬ ನೆಪವನ್ನು ತಾನೇ ...ಸಿ ಮುಸ್ಲಿಮರ ಮಾರಣಹೋಮಕ್ಕೆ ಇಳಿಯಿತು. ...ಗೋಧ್ರಾ ಹತ್ಯಾಕಾಂಡವನ್ನು ಯಾರು ನಡೆಸಿದರು ... ಬಗ್ಗೆ ಅನೇಕ ತನಿಖೆಗಳು ನಡೆದವು. ಅವೆಲ್ಲಾ ರೈಲಿಗೆ ಬೆಂಕಿಯನ್ನು ಹೊರಗಿನಿಂದ ಹಾಕಿದ್ದಲ್ಲ, ಅದು ಒಳಗಿನಿಂದಲೇ ಹೊತ್ತಿಕೊಂಡದ್ದು ಎಂದು ಸ್ಪಷ್ಟಪಡಿಸಿದವು. ಆದರೆ ಆ ತನಿಖೆಗಳಿಗೆ ಯಾವುದೇ ಬೆಲೆ ಸಿಗಲಿಲ್ಲ.

2007ರ ಅಕ್ಟೋಬರ್‌ನಲ್ಲಿ ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯಲ್ಲಿಯೂ ಸಂಘಪರಿವಾರ ಇಂತಹುದೇ ಪ್ರಯತ್ನಗಳನ್ನು ಮಾಡಿತು. ಆರೆಸ್ಸೆಸ್ ಮತ್ತದರ ಸಹಭಾಗಿ ಸಂಘಟನೆಗಳು ಹಲವಾರು ಜನರಿಗೆ ಗಿಫ್ಟ್ ಪ್ಯಾಕ್‌ನಲ್ಲಿ ಬಾಂಬ್‌ಗಳನ್ನಿಟ್ಟು ಕಳಿಸಿದ್ದವು. ಪಾರ್ಸಲ್‌ಗಳನ್ನು ಸ್ವೀಕರಿಸಿದ್ದ ಜನರ ಮುನ್ನೆಚ್ಚರಿಕೆಯಿಂದಾಗಿ ಘಟಿಸಬಹುದಾಗಿದ್ದ ದುರಂತ ತಪ್ಪಿಹೋಯಿತು. ಆದರೆ, ಈ ಕೃತ್ಯಗಳನ್ನು ಮಾಡಿದ್ದು ಯಾರು ಎಂದು ಪೊಲೀಸರಿಗೆ ಗೊತ್ತಿದ್ದರೂ ಅಪರಾಧಿಗಳ ಮೇಲೆ ಯಾವುದೇ ಕಠಿಣ ಕ್ರಮ ಕೈಗೊಳ್ಳಲಿಲ್ಲ.

2007ರ ಜುಲೈನಲ್ಲಿ ಮಧ್ಯಪ್ರದೇಶದ ಶಿಹೋರ್ ಜಿಲ್ಲೆಯ ಶಾಂಪೂರ್‌ನಲ್ಲಿ ಕೆಲವು ಆರೆಸ್ಸೆಸ್ ಬೆಂಬಲಿಗರ, ಕಾರ್ಯಕರ್ತರ ಮನೆಗಳಿಂದ ಭಾರಿ ಪ್ರಮಾಣದ ಸ್ಫೋಟಕಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಈ ವಿಚಾರವನ್ನು ಕುರಿತಂತೆ ದಿಗ್ವಿಜಯ ಸಿಂಗ್ ಅವರು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಬಹಿರಂಗ ಪತ್ರ ಬರೆದು ತರಾಟೆಗೆ ತೆಗೆದುಕೊಂಡಿದ್ದನ್ನೂ ಇಲ್ಲಿ ಸ್ಮರಿಸಬಹುದು. ಇದಾದ ಕೆಲವು ದಿನಗಳ ನಂತರ ಅಲ್ಲಿ ಕೋಮುಗಲಭೆಯೆದ್ದು ಅಪಾರ ಹಾನಿಯುಂಟು ಮಾಡಿತು.

ಇದೇ ಚಿಕ್ಕಮಗಳೂರಿನಲ್ಲಿ ಬಾಬಾಬುಡನ್‌ಗಿರಿ ವಿಚಾರದಲ್ಲಿ ಗಲಭೆ ಎಬ್ಬಿಸುವುದಕ್ಕೂ ಅವರು ಇದೇ ತಂತ್ರವನ್ನು ಬಳಸಿದ್ದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಬೆಳಗಾಗುವುದರೊಳಗೆ ಹನುಮಂತದೇವರಿಗೆ ಚಪ್ಪಲಿ ಹಾಕಿ ಅದನ್ನು ಮುಸ್ಲಿಮರೇ ಮಾಡಿದರೆಂದು ಹಬ್ಬಿಸಿಬಿಟ್ಟಿದ್ದರು.


ಇದು ಆರೆಸ್ಸೆಸ್ ಮತ್ತು ಸಂಘಪರಿವಾರದ ಕಾರ್ಯವೈಖರಿಯ ಕೆಲವು ನಿದರ್ಶನಗಳಷ್ಟೆ. ಪ್ರತೀ ಕೋಮುಗಲಭೆಯ ಹಿಂದೆಯೂ ಇಂತಹದ್ದೊಂದು ತಂತ್ರ ಇದ್ದೇ ಇರುತ್ತದೆ. ತಮ್ಮ ಅಜೆಂಡಾವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಗೋಧ್ರಾದಲ್ಲಿ ಮಾಡಿದಂತೆ ಹಿಂದೂಗಳನ್ನೇ ಜೀವಂತವಾಗಿ ಸುಡುವುದಕ್ಕೂ ಹೇಸುವುದಿಲ್ಲ, ಚಿಕ್ಕಮಗಳೂರಿನಲ್ಲಿ ಮಾಡಿದಂತೆ ಹನುಮಂತದೇವರಿಗೆ ಚಪ್ಪಲಿ ಹಾರ ಹಾಕುವುದಕ್ಕೂ ಹೇಸುವುದಿಲ್ಲ ಹಾಗೂ ಈಗ ತೆಂಕಾಶಿಯಲ್ಲಿ ಮಾಡಿದಂತೆ ತಮ್ಮದೇ ಕಚೇರಿಗೆ ಬಾಂಬ್ ಹಾಕುವುದಕ್ಕೂ ಹೇಸುವುದಿಲ್ಲ.

ವಾಸ್ತವದಲ್ಲಿ ಸ್ವತಂತ್ರ ಭಾರತದಲ್ಲಿ ಗಾಂಧಿಯನ್ನು ಕೊಲ್ಲುವ ಮೂಲಕವೇ ಸಂಘಪರಿವಾರ ಭಯೋತ್ಪಾದನೆಯನ್ನು ಪ್ರಾರಂಭಿಸಿತು. ಆ ಪರಂಪರೆಯನ್ನೀಗ ಅದು ಚಾಚೂತಪ್ಪದೇ ಮುಂದುವರೆಸಿಕೊಂಡು ಹೋಗುತ್ತಿದೆಯಷ್ಟೆ.

-ಕುಮಾರ್ ಕಡೇನಂದಿಹಳ್ಳಿ

...ಣ ಶಂಕರನೇ ನಗರಸಭಾಧ್ಯಕ್ಷ ಎಂದು ಆಯ್ಕೆ...ಲಾಯಿತು. ಈ ಕುತಂತ್ರದಿಂದ ಸಿಟ್ಟಿಗೆದ್ದ ಲಿಂಗಾ...ರು ನಗರಸಭೆ ಎದುರು ನಿಂತು ರಣೋತ್ಸಾಹದಲ್ಲಿ ...ರಮೂರ್ತಿ, ಈಶ್ವರಪ್ಪ ಮತ್ತು ಬ್ರಾಹ್ಮಣ ...ಮುಖಂಡರನ್ನು ನಿಂದಿಸುತ್ತ ಆಕ್ರೋಶ ವ್ಯಕ್ತಪಡಿಸಿದರು. ...ಪ್ರತಿಯಾಗಿ ವಿಪ್ರ ಮುಖಂಡರೂ ತಮ್ಮ ಅಭ್ಯರ್ಥಿ ... ಘೋಷಣೆ ಕೂಗಿ ತಮ್ಮ ನಾಲಿಗೆ ಚಟವನ್ನು ...ಕೊಂಡರು.

...ನಗರಸಭೆ ಅಧ್ಯಕ್ಷಗಿರಿಗೆ ಸುಭಾಷ್ ...ಪತ್ರವನ್ನೇ ಸಲ್ಲಿಸದಂತೆ ನೋಡಿ...ದ ಶಂಕರಮೂರ್ತಿ ಬಗ್ಗೆ ...ಮುಂಡಲವಾದ ಲಿಂಗಾಯತರು ...ದೇ ಒಂದು ಚುನಾವಣೆಗೆ ನಿಂತು ... ಶಕ್ತಿಯಿಲ್ಲದ ನೀನೂ ಒಬ್ಬ ...ಕಾರಣಿಸೆ" ಎಂದು ನಿಂದಿಸಿದ "ಈ ಬಾರಿ ಚುನಾವಣೆಗೆ ನಿಂತು ನೋಡೋಣ" ಎಂದು ಈಶ್ವ...ಗೆ ಧಮಕಿ ಹಾಕಿದರು. ಹಲವರು ...ಡೇಗೌಡ, ಯಡಿಯೂರಪ್ಪನಿಗೆ ...ಸ ಮಾಡಿದಂತೆಯೇ ಈಶ್ವರಪ್ಪ ...ಷ್‌ಗೆ ಮೋಸ ಮಾಡಿದ" ...ೂ ಕಿಡಿಕಾರಿದರು.



...ಲ್ಲಿ ತಂತ್ರ ಕುತಂತ್ರಗಳಿಂದ ತನ್ನ ಭವಿಷ್ಯವನ್ನು ...ಗೊಳಿಸಿಕೊಳ್ಳಲು ನೋಡಿದ್ದ ಈಶ್ವರಪ್ಪನಿಗೆ ಈಗ ... ಮಾಡಿದರು ಮುಂದಿನ ಚುನಾವಣೆಯಲ್ಲಿ ಲಿಂಗಾ... ಮತಗಳು ತನಗೆ ಬರುವುದಿಲ್ಲವೆಂದು ಮನವರಿಕೆ...ಾಗಿದೆ.

...ಷ ಮುಖ್ಯ, ಕಾಂಗ್ರೆಸಿಗರು ಈ ಮನರಂಜನೆಯನ್ನು ...ಸಿದವರಾದರೂ ತಾವು ಸುಭಾಷ್‌ನನ್ನು ಬೆಂಬಲಿಸುವ ಮೂಲಕ ಬಿಜೆಪಿಗೆ ಒಂದು ಏಟು ಕೊಡಲಾಗಲಿಲ್ಲವಲ್ಲ ಎಂದು ಪರಿತಪಿಸುತ್ತಿದ್ದರು.

ಅದೆಲ್ಲ ಏನೇ ಇರಲಿ, ಮೊಟ್ಟಮೊದಲ ಬಾರಿಗೆ ಶಿವಮೊಗ್ಗೆಯ ಬಿಜೆಪಿಯಲ್ಲಿ ಜಾತಿ ಜಗಳ ಭುಗಿಲೆದ್ದಿದೆ. ಮುಂದೆ ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪಕ್ಷದ ಮೇಲೆ ಪರಿಣಾಮ ಬೀರಬಹುದು.

ಇದೇ ರೀತಿ, ಚಿಕ್ಕಮಗಳೂರಲ್ಲೂ ಒಕ್ಕಲಿಗರು, ಬ್ರಾಹ್ಮಣರು ಎಂಬ ಮನಸ್ತಾಪಗಳು ಶುರುವಾಗಿವೆ. ಅಧಿಕಾರ ಲಾಲಸೆಯಿಂದ ಹಿಂದೂತ್ವ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಧರ್ಮದ ಆಧಾರದ ಮೇಲೆ ಸಮಾಜವನ್ನೇ ಒಡೆಯಲು ಹೊರಟಿರುವ ಚೆಡ್ಡಿಗಳಿಗೆ ಈಗ ತಮ್ಮ ನಡುವೆಯೇ ಜಾತಿ ಜಗಳದ ಬೇನೆ ಆರಂಭವಾಗಿದೆ.

ಈ ಜಾತಿ ಜಗಳಗಳು ದಳದವರಿಗಂತೂ ಹೇಳಿ ಮಾಡಿಸಿದ ರಾಜಕಾರಣ. ಈಗಾಗಲೇ ಆ ಪಾರ್ಟಿ, ಪ್ರತಿ ಜಾತಿ ಮುಖಂಡರನ್ನ ಕರೆದು "ನಿಮ್ಮ ಜಾತಿ ಸಮಾವೇಶ ಮಾಡಿ. ಕುಮಾರಣ್ಣ ರೇವಣ್ಣನನ್ನು ಕರೆಯಿರಿ. ದುಡ್ಡು ಎಷ್ಟಾದರೂ ಖರ್ಚಾಗಲಿ" ಎಂದು ಬೇರೆ ಬೇರೆ ಜಾತಿ ಜನಗಳ ಬೆನ್ನು ಬಿದ್ದಿದ್ದಾರೆ. ಅಂತ ಸಮಾವೇಶಗಳೂ ಜರುಗುತ್ತಿವೆ.

ಇದೆಲ್ಲಕ್ಕಿಂತ ಶಂಕರ್ ತರಹದ ವ್ಯಕ್ತಿ, ಚೆಡ್ಡಿಗಳ ಬೆಂಬಲದಿಂದ ಶಿವಮೊಗ್ಗೆಯಂತಹ ಪ್ರಗತಿಪರ ನಗರದ ಅಧ್ಯಕ್ಷಗಿರಿ ಪಡೆದದ್ದು ಈ ನಗರದ ದುರಂತವೇ ಸರಿ.

-ವರದಿಗಾರ

ಕಾಂಗ್ರೆಸ್-ಬಿಎಸ್‌ಪಿ ಮೈತ್ರಿ?
ಮಾಯಾವತಿ ಉಪಪ್ರಧಾನಿ!

ದೆಹಲಿಯಲ್ಲಿ ಹರಿದಾಡುತ್ತಿರುವ ಬಿಸಿಬಿಸಿ ಸುದ್ದಿ ಇದು. ಇದರಲ್ಲಿ ಸತ್ಯಾಂಶವೆಷ್ಟು-ಉತ್ಪ್ರೇಕ್ಷೆಯೆಷ್ಟೆಂಬುದು ಗೊತ್ತಾಗಲು ಇನ್ನೂ ಸಮಯ ಬೇಕಾಗಬಹುದು.

ಆದರೂ....

ಇಂಥದ್ದೊಂದು ಸಾಧ್ಯತೆಯನ್ನು ಯಾರೂ ತಳ್ಳಿ ಹಾಕುತ್ತಿಲ್ಲ ಅನ್ನುವುದಂತೂ ವಾಸ್ತವ.

ಇನ್ನು ಆರು ತಿಂಗಳೊಳಗಾಗಿ ಕರ್ನಾಟಕ ಸೇರಿದಂತೆ ಮಧ್ಯಪ್ರದೇಶ, ರಾಜಸ್ತಾನ, ಛತ್ತೀಸ್‌ಗಢ್ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಎಲೆಕ್ಷನ್ ನಡೆಯಬೇಕಿದೆ. ಇವುಗಳ ಜೊತೆಗೇ ಪಾರ್ಲಿಮೆಂಟ್ ಎಲೆಕ್ಷನ್ ಅನ್ನು ಬೆಸೆಯಲು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನಿಸುವುದಂತೂ ಅಷ್ಟೇ ಖಚಿತ. ಆದರೆ ಈಗಿನ ರಾಜಕೀಯ ಪರಿಸ್ಥಿತಿ ಗಮನಿಸುತ್ತಿದ್ದರೆ ಕಾಂಗ್ರೆಸ್, ಬಿಜೆಪಿ ಅಥವಾ ಬಿಎಸ್‌ಪಿಗಳು ಏಕಾಂಗಿಯಾಗಿ ಸ್ಪರ್ಧಿಸಿ ಮೆಜಾರಿಟಿ ಸೀಟ್ ಗೆಲ್ಲುವ ಸ್ಥಿತಿಯಲ್ಲಿಲ್ಲ. ಬಿಜೆಪಿಯ ಎನ್‌ಡಿಎ ಹಾಗೂ ಕಾಂಗ್ರೆಸ್‌ನ ಯುಪಿಎ ಮೈತ್ರಿಕೂಟಗಳಲ್ಲಿ ಡಜನ್‌ಗಟ್ಟಲೆ ಪ್ರಾದೇಶಿಕ ಪಾರ್ಟಿಗಳಿದ್ದರೂ ಬಿಎಸ್‌ಪಿಗಿರುವ ತೂಕ ಅವುಗಳಿಗಿಂತ ಬೇರೆಯಾದ್ದು.




ಹಾಗಾಗಿ ಬಿಜೆಪಿ-ಕಾಂಗ್ರೆಸ್ ಎರಡೂ ಪಾರ್ಟಿಗಳೂ ಮಾಯಾವತಿಯೊಂದಿಗೆ ಚುನಾವಣಾ ಪೂರ್ವ ಮೈತ್ರಿ ಏರ್ಪಡಿಸಿಕೊಳ್ಳುವ ತಹತಹ ತೋರಿಸುತ್ತಿವೆ.

ಅದರಲ್ಲಿ ಕಾಂಗ್ರೆಸ್ ಒಂದೆರಡು ಹೆಜ್ಜೆ ತಾನಾಗೇ ಮುಂದಿಡುತ್ತಿದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಯುಪಿಎ ಕೂಟದ ಪ್ರತಿಭಾ ಪಾಟೀಲ್‌ಗೆ ಬಿಎಸ್‌ಪಿ ಬೆಂಬಲಿಸಿ ಓಟ್ ಹಾಕಿತ್ತು, ಈಗ ಮಾಯಾವತಿ ಉತ್ತರ ಪ್ರದೇಶದ ಅಭಿವೃದ್ಧಿಗೆಂದು ಕೇಂದ್ರ ಸರ್ಕಾರದಿಂದ 80 ಸಾವಿರ ಕೋಟಿ ರೂಪಾಯಿಗಳನ್ನು ಗಿಟ್ಟಿಸಿದ್ದಾರೆ. ಕಡಿಮೆ ಮೊತ್ತವಲ್ಲವಿದು.



ಹೀಗೆ ಕಾಂಗ್ರೆಸ್ ಪಾರ್ಟಿ ಬಿಎಸ್‌ಪಿಗೆ ಖುಷಿ ಮಾಡಲು ಕಾರಣವಿಲ್ಲದೇ ಇಲ್ಲ. ದೇಶದ ಬಹುತೇಕ ದೊಡ್ಡ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಖಾಯಂ ಓಟ್‌ಬ್ಯಾಂಕ್ ಆಗಿದ್ದ ದಲಿತರು, ಹಿಂದುಳಿದ ವರ್ಗಗಳು ಹಾಗೂ ಮುಸ್ಲಿರ ಓಟ್‌ಗಳಿಗೆ ಬಿಎಸ್‌ಪಿ ಕೈಹಾಕಿ ಬಹಳ ಕಾಲವಾಗಿದೆ. ಕಾಂಗ್ರೆಸ್ ಅದರಿಂದ ಹೊಡೆತ ತಿನ್ನುತ್ತಲೇ ಇದೆ. ಅಧಿಕಾರ ಪಡೆಯಲು ಹಿಂದೂ ಫ್ಯಾಸಿಸ್ಟರ ಬಿಜೆಪಿಯನ್ನು ನಿಯಂತ್ರಿಸಲೇಬೇಕಾದ ಕಾಂಗ್ರೆಸ್‌ಗೀಗ ಬಿಎಸ್‌ಪಿ ಜೊತೆ ಮೈತ್ರಿ ಅವಕಾಶವನ್ನು ಹುಡುಕಲೇಬೇಕಾದ ಒತ್ತಡವಿದೆ. ಹಾಗಾಗೇ ಮಾಯಾವತಿಯನ್ನು (ಒಪ್ಪಿದರೆ) ಈಗಿಂದೀಗಲೇ ಉಪಪ್ರಧಾನ ಮಂತ್ರಿಯಾಗಿಸಲು ಸೋನಿಯಾ ಸಮ್ಮತಿಸಿದ್ದಾರೆಂಬ ರೂಮರ್ ತಣ್ಣಗೆ ಹಬ್ಬುತ್ತಿದೆ.



ಆದರೆ ಚುನಾವಣಾ ಪೂರ್ವ ಮೈತ್ರಿಗೆ ಎಂದೂ ಒಪ್ಪದಿರುವ ಮಾಯಾವತಿ ಈ ಬಾರಿಯ ಎಲೆಕ್ಷನ್‌ಗೂ ಮುನ್ನ ಕಾಂಗ್ರೆಸ್ ಜೊತೆ ಕೈಜೋಡಿಸಲು ಒಪ್ಪುತ್ತಾರಾ ಎಂಬ ಡೌಟು ಪ್ರತಿಯೊಬ್ಬರಿಗೂ ಇದೆ. ಏಕೆಂದರೆ ಕಾಂಗ್ರೆಸ್‌ನ ಭವಿಷ್ಯ, ಬಿಜೆಪಿಗಳ ಹಣೆಬರಹದ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳದ ಮಾಯಾವತಿ ರಾಜಕೀಯವಾಗಿ ಸದಾ ಯೋಚಿಸುವುದು ಯಾವುದೇ ಮೈತ್ರಿಯಿಂದ ತನಗೇನು ಲಾಭ, ತನ್ನ ಪಾರ್ಟಿಗೆಷ್ಟು ಅನುಕೂಲ ಎಂಬುದನ್ನು ಮಾತ್ರ. ಹಾಗಾಗಿ ಮಾಯಾವತಿ ಬಿಜೆಪಿಗಳೊಂದಿಗೂ ಅಷ್ಟೇ ನಿರ್ಭಾವುಕತೆಯಿಂದ ರಾಜಕೀಯ ಚೌಕಾಶಿ ನಡೆಸಬಲ್ಲಾಕೆ. ಬಿಜೆಪಿ ಹೈಕಮಾಂಡ್ ಈಗಾಗಲೇ ಮಾಯಾವತಿಗೆ ಹೇಳಿರುವುದು "ಎಲೆಕ್ಷನ್‌ನಲ್ಲಿ ನಾವು ಗೆದ್ದರೆ ಅಡ್ವಾಣಿ ಪ್ರಧಾನಿ, ನೀವೇ ಉಪಪ್ರಧಾನಿ" ಎಂದು. ಇದು ಕೂಡ ಎಲೆಕ್ಷನ್‌ನಲ್ಲಿ ಬಿಜೆಪಿ-ಬಿಎಸ್‌ಪಿ ನಡುವೆ ಮೈತ್ರಿಯಾದಲ್ಲಿ ಮಾತ್ರ.

ಅಂದರೆ ಭವಿಷ್ಯದ ಪ್ರಧಾನಮಂತ್ರಿ ಎಂದು ತಾವೇ ಹೇಳಿಕೊಳ್ಳುತ್ತಿರುವ ಮಾಯಾವತಿಗೆ ಈ ಬಾರಿ ಪ್ರಧಾನಿಯಾಗುವ ಅವಕಾಶ ಸಿಗಲ್ಲ ಎಂದಾಯಿತು. ಇವೆರಡರಲ್ಲಿ ಯಾರೊಂದಿಗೆ ಮೈತ್ರಿಯಾದರೂ ಮಾಯಾವತಿ ಹೆಚ್ಚು ಸೀಟ್ ಗೆದ್ದರೆ, ಮಿತ್ರ ಪಕ್ಷಕ್ಕೆ ಬೆಂಬಲ ನೀಡಿದರೆ ಕೇಂದ್ರದಲ್ಲಿ ಮುಖ್ಯ ಅಧಿಕಾರ ಸ್ಥಾನ ಪಡೆಯಬಹುದೇನೊ. ಸದ್ಯಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿಗಳಿಗೆ ಸಮಾನ ಹತ್ತಿರದಲ್ಲಿರುವ ಮಾಯಾವತಿ ನಾಳೆ ಎತ್ತ ವಾಲಿದರೂ ಆಶ್ಚರ್ಯವಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆಯಾದಾಗ ಪ್ರಚಾರಕ್ಕಾಗಿ ಹೋಗಿದ್ದ ಮಾಯಾವತಿ ರಕ್ಕಸನಾಯಕ ನರೇಂದ್ರ ಮೋದಿ ವಿರುದ್ಧ ಒಂದೇ ಒಂದು ಸೊಲ್ಲೆತ್ತಲಿಲ್ಲ. ಅದು ಏಕೆಂದರೆ 2007ರ ಆಗಸ್ಟ್‌ನಲ್ಲಿ ಉತ್ತರ ಪ್ರದೇಶ ವಿಧಾನಸಭಾ ಎಲೆಕ್ಷನ್ ನಡೆದಾಗ ಮೋದಿ ಅಲ್ಲಿ ಹೋಗಿ ಪ್ರಚಾರ ಮಾಡಿದ್ದನಾದರೂ ಕಾಂಗ್ರೆಸ್‌ಗೆ ಬೈದಿದ್ದನಾಗಲಿ ಮಾಯಾವತಿ ವಿರುದ್ಧ ಮಾತೇ ಆಡಿರಲಿಲ್ಲ. ಇದೇ ತತ್ವರಹಿತ, ಅಧಿಕಾರ ರಾಜಕಾರಣದ ಅಸಲಿ ಮುಖ.

ಮಾಯಾವತಿ ಇಂಥದರಲ್ಲಿ ಚೆನ್ನಾಗಿ ಪಳಗಿರುವಾಕೆ. ಈಕೆಗೆ ತನ್ನ ಪಕ್ಷದ ತಾಕತ್ತೂ, ಇನ್ನಿತರ ಪಕ್ಷಗಳ ದೌರ್ಬಲ್ಯಗಳೇನೆಂಬುದು ಗೊತ್ತಿದೆ.

ಕರ್ನಾಟಕದಲ್ಲಿ ನಿಷ್ಕ್ರಿಯ ಕಾಂಗ್ರೆಸ್

ಸೋನಿಯಾ ಗಾಂಧಿ ಎಂಥದ್ದೇ ಆದೇಶ ನೀಡಲಿ, ಯಾರು ಎಷ್ಟೇ ಬೊಂಬಡಾ ಬಜಾಯಿಸಲಿ ಖರ್ಗೆ ನಾಯಕತ್ವದ ಕಾಂಗ್ರೆಸ್ ಮೈಕೊಡವಿಕೊಂಡು ಅಖಾಡಕ್ಕೆ ಇಳಿಯುವಂತೆ ಕಾಣುತ್ತಿಲ್ಲ. ಜೆಡಿಎಸ್ ಕರಗಿಹೋಗುತ್ತಿರುವ ಈ ಗಳಿಗೆಯಲ್ಲಿ ಕಾಂಗ್ರೆಸ್‌ಗೆ ತನ್ನನ್ನು ತಾನೆ ಬಲಿಷ್ಠಗೊಳಿಸಿಕೊಳ್ಳುವ, ಬಿಜೆಪಿಗೆ ತಾನೊಂದು ಪರ್ಯಾಯ ಆಯ್ಕೆ ಇದ್ದೇನೆಂಬುದನ್ನು ಜನರಲ್ಲಿ ಭರವಸೆ ತುಂಬುವ ಕೆಲಸ ಆಗಬೇಕಿತ್ತು.

ಆದರೆ ಆ ದೂರದೃಷ್ಟಿಯಿರುವ ನಾಯಕರಿರಬೇಕಲ್ಲ. ಈ ಖರ್ಗೆಗೆ ದಿನಬೆಳಗಾದರೆ ಪಾರ್ಟಿ ಮೀಟಿಂಗ್, ರ್‍ಯಾಲಿಗಳಲ್ಲಿ ಸಿದ್ಧರಾಮಯ್ಯನ ಫೋಟೋ ಹಾಕಬೇಡಿ ಅಂತ ಸರ್ಕ್ಯೂಲರ್ ಹೊರಡಿಸುವುದು ಬಿಟ್ಟರೆ ಬೇರೇನೂ ಮುಖ್ಯ ಅನ್ನಿಸುತ್ತಿಲ್ಲ. ಮತ್ತೊಂದೆಡೆ ಬಿಜೆಪಿಯು ಸಿಗುವ ಪ್ರತಿ ಅವಕಾಶವನ್ನು ಮುಂದಿನ ಎಲೆಕ್ಷನ್‌ನ ಓಟ್ ಆಗಿ ಪರಿವರ್ತಿಸುವ ಸರ್ಕಸ್ ನಡೆಸುತ್ತಿದ್ದರೆ ಕಾಂಗ್ರೆಸ್‌ನ ಅವಿವೇಕಿ ರಾಜ್ಯ ನಾಯಕರು ಮುಖ್ಯಮಂತ್ರಿ ಕುರ್ಚಿ ಯಾರಿಗೆಂದು ಕನಸು ಕಾಣುತ್ತಿದ್ದಾರೆ. ಅವರಿಗೆ ಕನಿಷ್ಠ ಬಹುಜನ ಸಮಾಜ ಪಕ್ಷದ ಅಸಲಿ ತಾಕತ್ತೇನೆಂಬುದರ ಅರಿವೂ ಇದ್ದಂತಿಲ್ಲ. ನಾಳೆ ಒಂದು ವೇಳೆ ಸೋನಿಯಾ ಮಾಯಾವತಿ ನಡುವೆ ಚುನಾವಣಾ ಪೂರ್ವ ಮೈತ್ರಿ ಆಗಿಹೋದರೆ ಅದು ಮಾತ್ರ ರಾಜ್ಯ ಕಾಂಗ್ರೆಸ್‌ಗೆ ಜೀವ ತುಂಬಬಹುದೇನೊ.



ಕರ್ನಾಟಕದಲ್ಲಿ ಕಾಂಗ್ರೆಸ್‌ನ ಸ್ಥಿತಿ ಅಷ್ಟು ಶೋಚನೀಯವಾಗಿದೆ.

ಖರ್ಗೆ-ಧರಂಸಿಂಗ್‌ರಂತಹ ಕೆಲಸಕ್ಕೆ ಬಾರದವರಿಂದ ಕಾಂಗ್ರೆಸ್ ಪಾತಾಳ ಮುಟ್ಟಿರುವ ಬಗೆಯಿದು.



ಬಸವರಾಜ್ ಬೊಮ್ಮಾಯಿ ಜೆಡಿಯು ಕಚೇರಿಯನ್ನೇ ದಾನ ಮಾಡಿದ!

ಹುಬ್ಬಳ್ಳಿಯ ಜನತಾ ಪರಿವಾರದ ಪಳಯುಳಿಕೆಯಂತಿದ್ದ ಲ್ಯಾಮಿಂಗ್ಟನ್ ರಸ್ತೆಯಲ್ಲಿನ ಸಂಯುಕ್ತ ಜನತಾದಳದ ಕಚೇರಿಯೀಗ ಜನತಾ ಪರಿವಾರದ ಸೊತ್ತಾಗಿ ಉಳಿದಿಲ್ಲ. ಬಸವರಾಜ ಬೊಮ್ಮಾಯಿ ಬಿಜೆಪಿಗೆ ಸೇರಿದ ತಕ್ಷಣ ಆಫೀಸನ್ನೇಕೆ ಬಿಡಬೇಕು ಎಂದುಕೊಂಡು ತನ್ನ ಮನೆಯ ಆಸ್ತಿಯೆಂಬಂತೆ ಅದನ್ನು ಈಗ ದಾನಮಾಡಿಬಿಟ್ಟಿದ್ದಾನೆ. ಈಗದು ಕೇಸರಿ ಪಡೆಗಳ ಕಾರಸ್ಥಾನವಾಗಿ ಹೋಗಿದೆ.

ವಾಸ್ತವದಲ್ಲಿ ಇದು ಬಸವರಾಜ ಬೊಮ್ಮಾಯಿ ದುಡಿದು ಕಟ್ಟಿಸಿದ ಸ್ವಂತ ಆಸ್ತಿಯೇನಲ್ಲ. ಈ ಹಿಂದೆ ಕಾಂಗ್ರೆಸ್ ಕೂಡ ಇದನ್ನು ಗುಳುಂ ಮಾಡಲು ಹೊಂಚುಹಾಕಿತ್ತು. ಆಗ ಅದೊಂದು ವ್ಯಾಜ್ಯವಾಗಿ ಕೋರ್ಟ್ ಮೆಟ್ಟಿಲೇರಿತು. ಕೋರ್ಟು ಅದನ್ನು ಸಂಯುಕ್ತ ಜನತಾದಳದ ಕಚೇರಿ ಎಂದು ತೀರ್ಪು ಕೊಟ್ಟಿತು.

ಮೂಲತಃ ಈ ಜಾಗೆಯನ್ನು ಸಂಸ್ಥಾ ಕಾಂಗ್ರೆಸ್ ಖರೀದಿಸಿತ್ತು. ತದನಂತರದ ದಿನಗಳಲ್ಲಿ ಅದು ಜನತಾಪರಿವಾರದೊಂದಿಗೆ ವಿಲೀನವಾಗಿ ಹೋಯಿತು.

'ಕೋಟೆ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ' ಎಲ್ಲಾ ಮುಗಿದ ಮೇಲೆ ಮೊನ್ನೆ ಫೆಬ್ರವರಿ 16ರಂದು ಸಂಯುಕ್ತ ಜನತಾದಳದ ರಾಜ್ಯಾಧ್ಯಕ್ಷ ಬಿ.ಸೋಮಶೇಖರ್ ಹುಬ್ಬಳ್ಳಿಗೆ ಬಂದಿದ್ದರು. ತಮ್ಮ ಹಳೇ ಕಚೇರಿ ನೋಡಿ ಅವರು ಕಂಗಾಲಾಗಿ ಹೋಗಿದ್ದಂತೂ ಸತ್ಯ.

ಕಾಂಗ್ರೆಸ್-ಬಿಜೆಪಿ ಮೈತ್ರಿ!

ಇತಿಹಾಸ ಸೃಷ್ಟಿಸಿದ ಅಣ್ಣಿಗೇರಿ ಪುರಸಭೆ!!


ಅಧಿಕಾರ ಅನ್ನೋದು ಎಂತೆಂಥ ಕೆಲಸಕ್ಕೆ ಕೈಹಾಕಿಸುತ್ತೆ ನೋಡಿ. ತಮ್ಮ ಜೀವಮಾನವಿಡೀ ಬಿಜೆಪಿಯನ್ನು ಕೋಮುವಾದಿ ಪಕ್ಷ ಎಂದು ಕಂಡಕಂಡಲ್ಲಿ ಹೀಯಾಳಿಸಿಕೊಂಡು ಬಂದಿದ್ದ ದೇವೇಗೌಡ ಕೊನೆಗೊಂದು ದಿನ ಅಧಿಕಾರಕ್ಕಾಗಿ ಮಗ ಕುಮಾರಸ್ವಾಮಿಯ ಮೂಲಕ ಬಿಜೆಪಿಯೊಂದಿಗೆ ಅನೈತಿಕ ಮೈತ್ರಿಯೇರ್ಪಡಿಸಿಕೊಂಡುಬಿಟ್ಟರು. ಈಗ ಅಧಿಕಾರದ ಲಾಲಸೆಗೆ ಅದೂ ಮುರಿದು ಮೂಲೆಗುಂಪಾಗಿದೆ ಅನ್ನೋದು ಬೇರೆ ಪ್ರಶ್ನೆ.

ಈಗ ಕಾಂಗ್ರೆಸ್ ಸರದಿ. ಕಾಂಗ್ರೆಸ್ ಮತ್ತು ಬಿಜೆಪಿಗಳು ರಾಷ್ಟ್ರ ಮಟ್ಟದಲ್ಲಿ ಪರಸ್ಪರ ಕಡುವೈರಿ ರಾಜಕೀಯ ಪಕ್ಷಗಳು ಅನ್ನೋದು ಎಲ್ಲರಿಗೂ ಗೊತ್ತು. ಬೇರೆ ಯಾವ ಪಕ್ಷಗಳ ಜೊತೆಗಾದ್ರೂ ಮೈತ್ರಿಗೆ ಸಿದ್ಧವಿರುತ್ತವೆಯೇ ವಿನಃ ಅವೆರಡೂ ಎಂದೂ ಮೈತ್ರಿ ಮಾಡಿಕೊಂಡಿದ್ದಿಲ್ಲ. ಆದರೆ ಅಧಿಕಾರದ ಲಾಲಸೆ ಸುಮ್ಮನಿರಲು ಬಿಡಬೇಕಲ್ಲ, ಅಧಿಕಾರ ಇಬ್ಬರಿಗೂ ಇಲ್ಲದಂತಾದರೆ? ಅಧಿಕಾರಕ್ಕಾಗಿ ಅವರೂ ಅನೈತಿಕ ಮೈತ್ರಿಗೆ ಸಿದ್ಧರು ಎಂಬುದನ್ನು ಅಣ್ಣಿಗೆರೆ ಪುರಸಭೆ ತೋರಿಸಿಕೊಟ್ಟಿದೆ.

ಒಟ್ಟು 23 ಸದಸ್ಯ ಬಲದ ಪುರಸಭೆಯಲ್ಲಿ ಬಿಜೆಪಿಗೆ 9, ಕಾಂಗ್ರೆಸ್ 4, ಜೆಡಿಎಸ್ 8 ಸದಸ್ಯರನ್ನು ಹೊಂದಿವೆ. ಆದರೆ, ಯಡ್ಡಿಗೆ ಮುಖ್ಯಮಂತ್ರಿ ಗಾದಿಯನ್ನು ತಪ್ಪಿಸಿದ್ದರ ಪರಿಣಾಮವಾಗಿ ರಾಜ್ಯ ರಾಜಕಾರಣದಲ್ಲಿ ಜೆಡಿಎಸ್ ಮತ್ತು ಬಿಜೆಪಿಗಳ ನಡುವಿನ ಸಂಬಂಧ ಈಗ ಹಳಸಿಹೋಗಿರುವುದರಿಂದ ಅಣ್ಣಿಗೇರಿಯಲ್ಲೂ ಅವು ಮತ್ತೆ ಒಂದುಗೂಡುವ ಸಾಧ್ಯತೆ ಕಡಿಮೆ. ಹಾಗಾಗಿ ಕಾಂಗ್ರೆಸ್ ಮತ್ತು ಬಿಜೆಪಿಗಳು ಪರಸ್ಪರ ಅಪ್ಪಿಕೊಂಡು ಅಧಿಕಾರದ ಅನೈತಿಕ ಮೈತ್ರಿಯನ್ನು ಸೃಷ್ಟಿಸಿವೆ. ಬಿಜೆಪಿಯ ನಾಗರತ್ನ ಈರಪ್ಪ ಈ ಸರಿ ಅಧ್ಯಕ್ಷೆಯಾಗಿದ್ದರೆ, ಕಾಂಗ್ರೆಸ್‌ನ ಚಂದ್ರಶೇಖರ್ ಗಂಜಾಳ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಒಟ್ಟಿನಲ್ಲಿ ಪ್ರಜೆ ಮುಂದೊಂದು ದಿನ ಇಂತಹ ಒಂದು ದುರ್ಘಟನೆಯನ್ನು ರಾಷ್ಟ್ರಮಟ್ಟದಲ್ಲಿ ನೋಡಬೇಕಾಗಿ ಬಂದರೂ ಆಶ್ಚರ್ಯವಿಲ್ಲ ಎಂಬುದನ್ನು ಅಣ್ಣಿಗೇರಿ ಸಾಂಕೇತಿಕವಾಗಿ ಈಗ ತೋರಿಸಿದೆಯಷ್ಟೆ.

■ ಹುಬ್ಬಳ್ಳಿ ಬಿಟ್ಸ್



ಪೊಲೀಸ್ ಕಮೀಷನರ್ ನಾರಾಯಣ ನಡುಮನಿಯೂ ಭಯೋತ್ಪಾದಕನೆ


ಹೌದು. ಹೀಗಂತ ಹೇಳುತ್ತಿರುವುದು ನಾವಲ್ಲ, ಹರಕು ಬಾಯಿಯ ಪ್ರಮೋದ್ ಮುತಾಲಿಕ್. ಕಳೆದ ಒಂದೂವರೆ ತಿಂಗಳುಗಳಿಂದ ಕರ್ನಾಟಕದಲ್ಲಿ ಭಯೋತ್ಪಾದನೆಯ ಗುಲ್ಲೆದ್ದಿದೆ. ಇತ್ತೀಚೆಗೆ ಹೊನ್ನಾಳಿ ಮತ್ತು ಹುಬ್ಬಳ್ಳಿಗಳಲ್ಲಿ ಬಂಧಿತರಾಗಿರುವ ಮೂರ್‍ನಾಲು ಜನ ಮುಸ್ಲಿಮ್ ಯುವಕರನ್ನು ಪೊಲೀಸರು ಮತ್ತು ನ್ಯಾಯಾಲಯಗಳು ವಿಚಾರಣೆ ನಡೆಸುವ ಮೊದಲೇ ಅವರನ್ನು ಅತ್ಯುಗ್ರ ಭಯೋತ್ಪಾದಕರೆಂದು ತೀರ್ಪು ನೀಡಿರುವ ರಾಜ್ಯದ ಮಾಧ್ಯಮಗಳು ಜನರಲ್ಲಿ ಇಲ್ಲದ ಆತಂಕವನ್ನು ಸೃಷ್ಟಿಸಿರುವುದನ್ನು ನಾವೆಲ್ಲಾ ನೋಡಿದ್ದೇವೆ.

ಅತ್ತ ಹುಬ್ಬಳ್ಳಿ-ಧಾರವಾಡಗಳಲ್ಲಿ ಪ್ರಮೋದ್ ಮುತಾಲಿಕ್ ಎಂಬ ಕಪಿಸೈನ್ಯದ ನಾಯಕ ಇದಿಷ್ಟೇ ನೆಪವನ್ನಿಟ್ಟುಕೊಂಡು ದಾಂಧಲೆ ನಡೆಸಲು ಮುಂದಾಗಿದ್ದ. ಅದಕ್ಕಾಗಿಯೇ ಫೆಬ್ರವರಿ 13ರಂದು ಜನರ ನಡುವೆ ಜಾಗರಣೆಯ ಗಂಟೆ ಬಾರಿಸಲೂ ಸಜ್ಜಾಗಿದ್ದ. ಅದಕ್ಕಾಗಿ ಈತ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡ ಮೇಲೆ ಸದ್ಯಕ್ಕೆ ಇವನ ವಿರೋಧಿಯಾಗಿರುವ ಸಂಘಪರಿವಾರ ಮತ್ತು ಬಿಜೆಪಿಗಳು ಈ ಕಾರ್ಯಕ್ರಮವನ್ನು ಹೈಜಾಕ್ ಮಾಡಿ ಮುತಾಲಿಕನಿಗೆ ಮುಖಕ್ಕೆ ಮಣ್ಣೆರಚಿದ್ದವು.

ಅಲ್ಲಿಗೆ ಸುಮ್ಮನಾಗದ ಈತ ಮುಖ ಒರೆಸಿಕೊಂಡು ಮತ್ತೆ ಬೀದಿಗಿಳಿದಿದ್ದಾನೆ. ಮತ್ತೆ ಫೆಬ್ರವರಿ 25ರಂದು ಮತ್ತದೇ ಗಂಟೆ ಬಾರಿಸಲು ತಯಾರಿ ನಡೆಸಿದ್ದಾನೆ. ಕತೆಗಳನ್ನು ಕಟ್ಟಿ ಹ್ಯಾಂಡ್‌ಬಿಲ್ ಪ್ರಿಂಟ್ ಮಾಡಿಸಿ ಊರ ತುಂಬ ಹಂಚುತ್ತಿದ್ದಾನೆ. ಈ ಹ್ಯಾಂಡ್ ಬಿಲ್‌ಗಳಲ್ಲಿ ಪೊಲೀಸ್ ಆಯುಕ್ತ ನಾರಾಯಣ ನಡುಮನಿಯನ್ನೂ ಭಯೋತ್ಪಾದಕ ಅಂತ ಕರೆದಿದ್ದಾನೆ! ಮುತಾಲಿಕ್‌ನ ಮಂಗಾಟಕ್ಕೆ ಬೆನ್ನು ತಟ್ಟದಿದ್ದರೆ ಅವರೆಲ್ಲರೂ ಅವನ ದೃಷ್ಟಿಯಲ್ಲಿ ಭಯೋತ್ಪಾದಕರೆ. ಇದು ಭಯೋತ್ಪಾದನೆಗೆ ಆತ ಕೊಟ್ಟಿರುವ ಹೊಸ ವ್ಯಾಖ್ಯಾನ.

ವಿ.ಕ.ದ ಗರ್ವಭಂಗ

ಕರ್ನಾಟಕ ಪತ್ರಿಕೋದ್ಯಮ ಕಂಡ ಅತ್ಯಂತ ನೀತಿರಹಿತ ಮತ್ತು ಜವಾಬ್ದಾರಿ ರಹಿತ ಪತ್ರಿಕೋದ್ಯಮವೆಂದರೆ ವಿಜಯ ಕರ್ನಾಟಕ ಮತ್ತು ಕರಾವಳಿಯಲ್ಲಿ ಉದಯವಾಣಿ ಮಾಡುತ್ತಿರುವ ಪತ್ರಿಕೋದ್ಯಮ. ಕನ್ನಡ ಪ್ರಭ ಹಲವಾರು ಸಾರಿ ಇವಕ್ಕೆ ಪೈಪೋಟಿ ನೀಡುತ್ತಿದ್ದರೂ ವಿಕ ಯಾವಾಗಲೂ ಪ್ರಥಮ ಸ್ಥಾನದಲ್ಲಿದೆ. ಸುದ್ದಿಗಳ ನಿಷ್ಪಕ್ಷಪಾತ ವರದಿ ಎಂಬುದೇ ಅವರ ಡಿಕ್ಷನರಿಯಲ್ಲಿಲ್ಲ. ಪ್ರತಿಯೊಂದು ವರದಿಯನ್ನು ಸಂಘಪರಿವಾರದ ಮೂಗಿನ ನೇರಕ್ಕೆ ತಿರುಚಿ ಸುದ್ದಿ ಸಂಪಾದನೆಯ ಸಂಹಿತೆಗೇ ಅಪಮಾನ ಮಾಡುವಂತೆ ಅದರ ದಿನನಿತ್ಯ ವರದಿಗಳಿರುತ್ತವೆ. ಅದರಲ್ಲೂ ಮುಸ್ಲಿಂ ವಿರೋಧಿ ಮತ್ತು ಎಲ್ಲಾ ಪ್ರಗತಿಪರ ಚಿಂತನೆಯ ವಿರೋಧಿ ಸುದ್ದಿಗಳ ವರದಿಯಲ್ಲಿ ಮಾತ್ರವಲ್ಲ ಅದರ ಸೃಷ್ಟಿಯಲ್ಲೂ ವಿಕದ ಪತ್ರಕರ್ತರು ಮತ್ತು ಅವರದ್ದೇ ಅಂಕಣಕಾರರದ್ದು ಎತ್ತಿದ ಕೈ. ಗುಜರಾತ್ ಹತ್ಯಾಕಾಂಡವನ್ನು ಎತ್ತಿ ಹಿಡಿಯುವ, ಅನಂತಮೂರ್ತಿಗಳ ವಿರುದ್ಧ ಎಸ್‌ಎಮ್‌ಎಸ್ ಸಂಗ್ರಹಣೆ ಮಾಡಿ ಪ್ರಕಟಿಸುವ, ಕೋಮುದ್ವೇಷ ಬಿತ್ತುವ ಅನುಮಾನಗಳನ್ನು "ಸುದ್ದಿ"ಯೆಂಬ ಕಟ್ಟು ಕಥೆಗಳನ್ನು ಪ್ರಕಟಿಸುವುದರಲ್ಲಿ ಇತ್ತೀಚೆಗೆ ಅವರು ನೈಪುಣ್ಯವನ್ನು ಪಡೆಯುತ್ತಿದ್ದಾರೆ.



ಅವರ ವರದಿಗಾರ ಮತ್ತು ಅಂಕಣಕಾರರಲ್ಲಿ ಒಬ್ಬನಾದ ಪ್ರತಾಪ ಸಿಂಹ ಎಂಬುವನು ಈ ಬಗೆಯಲ್ಲಿ ಎರಡು ಜನಾಂಗಗಳ ನಡುವೆ ದ್ವೇಷವನ್ನು ಬಿತ್ತುವುದರಲ್ಲಿ ಅಪಾರ ಕಲೆಯನ್ನು ಸಂಪಾದಿಸಿಕೊಂಡಿದ್ದಾನೆ. ಅವನ ಎಲ್ಲಾ ಅಂಕಣ ಬರಹಗಳು ಹುಸಿ ಬುದ್ಧಿಜೀವಿಯ ಸೋಗಿನಲ್ಲಿರುವ ಹಿಂದೂತ್ವವೆಂಬ ಪ್ರಜಾತಂತ್ರ ವಿರೋಧಿ ದ್ವೇಷ ಸಾಹಿತ್ಯವೇ ಆಗಿದೆ. ತಳಬುಡವಿಲ್ಲದ ಕಥೆಗಳನ್ನು ಹುಸಿ ತರ್ಕದ ನೆಲೆಯಲ್ಲಿ ಪ್ರತಿವಾರ ಬೆತ್ತಲೆ ಜಗತ್ತು ಎಂಬ ಅಂಕಣದಲ್ಲಿ ಬರೆಯುತ್ತಾನೆ. ಇತ್ತೀಚಿನ ತನ್ನ ಒಂದು ಅಂಕಣದಲ್ಲಿ ಪ್ಯಾಲೆಸ್ತೀನ್ ಹಾಗೂ ಇನ್ನಿತರ ಹಲವು ಅರಬ್ ದೇಶಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಮುಸ್ಲಿಂ ಹೋರಾಟಗಾರರು ಬಲಿದಾನ ಮಾಡುವುದು ಸ್ವರ್ಗದಲ್ಲಿ ಭೋಗಕ್ಕೆ 70 ಅಪ್ಸರೆಯರು ಸಿಗುತ್ತಾರೆ ಎಂಬ ಕಾರಣಕ್ಕಾಗಿಯೇ ಹೊರತು ಯಾವುದೇ ಉನ್ನತ ಆಶಯಗಳಿಂದಲ್ಲ ಎಂದು ಬರೆದಿದ್ದ. ಅದಕ್ಕೆ ಒಬ್ಬ ಅರಬ್ ಲೇಖಕಿಯ ಕೃತಿಯನ್ನು ತಪ್ಪಾಗಿ ವ್ಯಾಖ್ಯಾನಿಸಿ ಸಮರ್ಥಿಸಿಕೊಂಡಿದ್ದ. ಅಷ್ಟು ಮಾತ್ರ ವಲ್ಲದೆ ಮುಸ್ಲಿಮರಲ್ಲಿ ಅಮೆರಿಕನ್ ಸಾಮ್ರಾಜ್ಯವಾದದ ವಿರುದ್ಧ ಮತ್ತು ಹಿಂದೂತ್ವ ಫ್ಯಾಸಿಸಮ್ಮಿನ ವಿರುದ್ಧ ಜಾಗೃತಿ ಉಂಟುಮಾಡುತ್ತಿರುವ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (ಕೆಎಫ್‌ಡಿ) ಎಂಬ ಸಂಘಟನೆಯ ವಿರುದ್ಧ ಯಾವುದೇ ಪುರಾವೆಯಿಲ್ಲದೆ ಸಿಮಿ ಸಂಘಟನೆಯ ಜೊತೆ ಸಂಬಂಧವಿರುವ ಸಂಘಟನೆಯೆಂದೂ, ಕರ್ನಾಟಕದಲ್ಲಿ ಭಯೋತ್ಪಾದನೆ ಉಂಟುಮಾಡಲು ಸಂಚು ಮಾಡುತ್ತಿದೆಯೆಂದೂ ಬರೆದಿದ್ದ.

ವಿಷಾದ

ವಿಜಯ ಕರ್ನಾಟಕ ಶನಿವಾರದ (16 ಫೆಬ್ರವರಿ 2008) ಸಂಚಿಕೆಯಲ್ಲಿ ಪ್ರಕಟವಾದ, 'ಅವರಿಗೆ ಸಿಗಬಹುದು ಕನ್ಯೆಯರು ಎಪ್ಪತ್ತು, ನಮಗೆ ಮಾತ್ರ ಆಪತ್ತು' ಲೇಖನದಲ್ಲಿ ತಮ್ಮ ಸಂಘಟನೆಗಳನ್ನು ತಪ್ಪಾಗಿ ಪ್ರಸ್ತಾಪಿಸಲಾಗಿದೆಯೆಂದು ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಹಾಗೂ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾರ್ಯಕರ್ತರು ಹೇಳಿದ್ದಾರೆ. ಈ ಲೇಖನ ಪ್ರಕಟಿಸಿರುವುದರ ಹಿಂದೆ ಯಾವುದೇ ಸಂಘಟನೆಗಳನ್ನು ನೋಯಿಸುವ ಉದ್ದೇಶ ಪತ್ರಿಕೆಗಿಲ್ಲ. ಆದರೂ ಇದರಿಂದ ಯಾರಿಗಾದರೂ ನೋವಾದರೆ ವಿಷಾದಿಸುತ್ತೇವೆ. ವಿಜಯ ಕರ್ನಾಟಕಕ್ಕೆ ಸಾಮಾಜಿಕ ಸಹಬಾಳ್ವೆ ಹಾಗೂ ಸಾಮರಸ್ಯದಲ್ಲಿ ಯಾವತ್ತೂ ಅಚಲ ನಂಬಿಕೆ. ಈ ಮೌಲ್ಯಗಳನ್ನು ಎತ್ತಿ ಹಿಡಿಯಲು ನಾವು ಸದಾ ಬದ್ಧ.

-ಸಂ

ಆದರೆ ಬರೆದಿದ್ದನ್ನೆಲ್ಲಾ ದಕ್ಕಿಸಿಕೊಳ್ಳಲು ಸಾಧ್ಯವಿಲ್ಲವಲ್ಲ. ಕೆಎಫ್‌ಡಿ ಸಂಘಟನೆಯ ಮುಖಂಡರು ಮರು ದಿವಸವೇ ವಿಕದ ಕಚೇರಿಗೆ ಹೋಗಿ ವಿಶ್ವೇಶ್ವರ ಭಟ್ಟನನ್ನು ತಗುಲಿಕೊಂಡಿದ್ದಾರೆ. ಮುಸ್ಲಿಮರ ಹುತಾತ್ಮತೆಯ ಬಗ್ಗೆ ಮತ್ತು ತಮ್ಮ ಸಂಘಟನೆಯ ಬಗ್ಗೆ ಬರೆದಿದ್ದಕ್ಕೆ ಪುರಾವೆಯನ್ನು ಕೊಡಬೇಕೆಂದೂ, ಇಲ್ಲದಿದ್ದರೆ ಬೇಷರತ್ ಕ್ಷಮಾಪಣೆ ಕೋರಬೇಕೆಂದು ಆಗ್ರಹಿಸಿದ್ದಾರೆ. ಆದರೆ ಕುತಂತ್ರಿ ಭಟ್ಟ ಅವರಿಗೂ ಪ್ರತಾಪಸಿಂಹನಿಗೆ ಕೊಟ್ಟಷ್ಟೇ ಸ್ಪೇಸ್ ಕೊಡುವುದಾಗಿಯೂ, ಬೇಕಿದ್ದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ಬರೆಯಬಹುದೆಂಬ ಜಾಣತನ ತೋರಿಸಿದ್ದಾನೆ. ಆದರೆ ಕೆಎಫ್‌ಡಿಯವರು ಇದರ ಹಿಂದೆ ಇರುವ ಭಟ್ಟನ ಕರಾಮತ್ತನ್ನು ಅರ್ಥ ಮಾಡಿಕೊಂಡು ಸರಳ ತರ್ಕವೊಂದನ್ನು ಮುಂದಿಟ್ಟಿದ್ದಾರೆ. "ಪ್ರತಾಪ ಸಿಂಹ ಕೇವಲ ಅಭಿಪ್ರಾಯ ಬರೆದಿದ್ದರೆ ನಾವೂ ಇನ್ನೊಂದು ಲೇಖನ ಬರೆದು ನಮ್ಮ ಭಿನ್ನಾಭಿಪ್ರಾಯ ದಾಖಲಿಸಬಹುದಾಗಿತ್ತು, ಆದರೆ ಆತ ಮಾಡಿರುವುದು ನಿರಾಧಾರ ಆರೋಪ. ಆರೋಪ ಬೇರೆ, ಅಭಿಪ್ರಾಯ ಬೇರೆ. ತಾವು ಮತ್ತೊಂದು ಲೇಖನ ಬರೆಯಿರೆಂದು ಹೇಳುವ ಮೂಲಕ ಪ್ರತಾಪ ಸಿಂಹ ಮಾಡಿರುವ ಅಪರಾಧವನ್ನು ಅಭಿಪ್ರಾಯದ ಮಟ್ಟಕ್ಕೆ ಇಳಿಸಿ ಅವರನ್ನು ಉಳಿಸುವ ಕೆಲಸವನ್ನು ಮಾಡುತ್ತಿದ್ದೀರಿ. ಆದ್ದರಿಂದ ನೀವು ಮೊದಲು ಬೇಷರತ್ ಕ್ಷಮಾಪಣೆ ಯಾಚಿಸಬೇಕು. ಆನಂತರವೇ ನಾವು ಲೇಖನ ಬರೆಯುತ್ತೇವೆ" ಎಂದಿದ್ದಾರೆ.

ತನ್ನ ಜಾಣತನ ಕೆಲಸ ಮಾಡದ್ದನ್ನು ಕಂಡ ಭಟ್ಟ "ಹಾಗಿದ್ದಲ್ಲಿ ಕಾನೂನು ಪ್ರಕಾರ ಏನು ಮಾಡುತ್ತೀರೋ ಮಾಡಿಕೊಳ್ಳಿ" ಎಂದು ಹುಸಿ ಧೈರ್ಯ ತೋರಿದ್ದಾನೆ. ಆದರೆ ಕೆಎಫ್‌ಡಿ ನಾಯಕರು ದೃಢವಾದ ಮಾತಿನಲ್ಲಿ ತಾವು ಆತನ ವಿರುದ್ಧ ಕನಿಷ್ಠ ಇಪ್ಪತ್ತು ಕಡೆ ಕೇಸುಗಳನ್ನು ಹಾಕುವುದು ಮಾತ್ರವಲ್ಲದೆ ಫೆ.22ರಂದು

ಂಗ್ರೆಸ್‌ನ ಪಹರಣ ಾಜಕಾರಣ!

ಚುನಾವಣೆ ಸಮಯದಲ್ಲಿ ತಮ್ಮ ಾಳಿಗಳನ್ನು ಅಪಹರಿಸಿ ರಾಜಕೀಯ ಸುವ ಕೆಟ್ಟ ಪರಂಪರೆಯನ್ನು ಈ ದೇಶದ ಾರ ನೋಡಿಯಾಗಿದೆ. ಈಗ ಅದರ ಿನ ಭಾಗ. ಇದುವರೆಗೆ, ತಮ್ಮ ಎದುರಾಳಿ ವರನ್ನು ಅಪಹರಿಸುತ್ತಿದ್ದವರು ಈಗ ತಂತಮ್ಮ ವರನ್ನೇ ಅಪಹರಿಸುವ ಪರಿಪಾಠಕ್ಕಿಳಿದಿದ್ದಾರೆ ರೆ ಏನೆನ್ನಬೇಕು?

ೊನ್ನೆ ನಡೆದ ಆಳ್ನಾವರ ಪಟ್ಟಣ ಪಂಚಾಯತಿ ವಣೆಯಲ್ಲಿ ನಡೆದದ್ದು ಇದೇ. ವಣೆಯಲ್ಲಿ ಮತ ಚಲಾಯಿಸಲು ಕಾಂಗ್ರೆಸ್ ುರಾದ ಸರೋಜಾ ಬೆಟಗೇರಿ ಮತ್ತು ಹೂಲಿ ಬೂರ್ಖಾ ಧರಿಸಿಕೊಂಡು ತ್ತಿದ್ದರು. ಬೂರ್ಖಾ ಧರಿಸಿಕೊಂಡು ುಚ್ಚಿ ಬರುವ ಜರೂರತ್ತು ಅವರಿಗೇನಿತ್ತೋ ು. ಇವರ ಚಲನವಲನಗಳನ್ನು ಚೆನ್ನಾಗಿಯೇ ಾಡಿದ್ದ ಅವರದೇ ಪಕ್ಷದ ಮಾಜಿ ಶಾಸಕರ ಗಳಿಗೆ ಇವರಿಬ್ಬರನ್ನು ಗುರುತಿಸುವುದು ಾಗಲಿಲ್ಲ. ಸಜ್ಜಾಗಿ ಬಂದಿದ್ದ ಈ ಚೇಲಾಗಳ ್ ಅವರಿಬ್ಬರು ಮತಗಟ್ಟೆಗೆ ಬರುತ್ತಿದ್ದಂತೆಯೇ ಕೊಂಡು ಹೊರಟೇ ಬಿಟ್ಟಿತು.

ಯಾರೋ ಏಳೆಂಟು ಜನ ಬಂದರು, ೋ ಇಬ್ಬರು ಬೂರ್ಖಾದಾರಿ ಯರನ್ನು ಎತ್ತಾಕಿಕೊಂಡು ಹೋದರು ಗೊಂದಲಕ್ಕೀಡಾದ ಜನ ರಸ್ತೆತಡೆ, ಗದ್ದಲ ಮಾಡಿಬಿಟ್ಟರು. ಪಾಪ ಅವರಿಗೇನು ಗೊತ್ತು ಕಾಂಗ್ರೆಸ್ಸಿಗರ ಅಪಹರಣ ರಾಜಕೀಯ ಅಂತ. ಗೆ ಗದ್ದಲ ಜಾಸ್ತಿಯಾಗಿ ನಿಷೇಧಾಜ್ಞೆಯನ್ನೂ ೊಳಿಸಲಾಯಿತು. ಇದು ವಿಕೋಪಕ್ಕೆ ಗಬಹುದೆಂದು ಪೊಲೀಸರು ರಣಕಾರರನ್ನು, ಅಪಹರಣಕ್ಕೊಳಗಾದವರನ್ನು ಹಚ್ಚಿ ಕರೆದುಕೊಂಡು ಬಂದರು. ಆಗಲೇ ಗೆ ಗೊತ್ತಾಗಿದ್ದು ಕಾಂಗ್ರೆಸ್‌ನ ಅಪಹರಣ ಾರಣ! ಇಲ್ಲಿ ಕಿಡ್ನಾಪ್ ಮಾಡಿದವರು ಮತ್ತು ್ಗೆ ಒಳಗಾದವರು ಇಬ್ಬರೂ ಕಾಂಗ್ರೆಸ್ಸಿಗರೇ ುದು ವಿಶೇಷ.


■ ವರದಿಗಾರ

ೂರಿನಲ್ಲಿ ಸೇರಲಿರುವ ತಮ್ಮ ಸಂಘ 15000 ಸದಸ್ಯರು ರ‍್ಯಾಲಿ ಮುಗಿದ ನಂತರ ಕಚೇರಿಯ ಎದುರು ಜಮಾಯಿಸಿ ುತ ಪ್ರತಿಭಟನೆಯನ್ನು ಮಾಡುತ್ತೇವೆ ಎಂದು ು ಮಾತಿನಲ್ಲಿ ಎಚ್ಚರಿಸಿ ಹೊರ ಬಂದಿದ್ದಾರೆ. ೀತಿ ಕೇಸುಗಳನ್ನು ನೊಂದಾಯಿಸುವ ುನ್ನು ಮಾಡಿಕೊಳ್ಳಲು ಪ್ರಾರಂಭಿಸಿದ್ದಾರೆ.

ದರೆ ಪೊಲೀಸ್ ಇಲಾಖೆಯ ತನ್ನ ಚೆಡ್ಡಿ ಂದ ಕೆಎಫ್‌ಡಿಯ ಶಕ್ತಿ ಸಾಮರ್ಥ್ಯದ ಬಗ್ಗೆ ಕೊಂಡ ಭಟ್ಟ ಆ ರೀತಿ ಕೇಸುಗಳು ಮತ್ತು ಟನೆಯಾಗುವುದು ಖಂಡಿತಾ ಎಂದು ಕೊಂಡು ಮರುದಿನವೇ ಏಕದ ಮುಖಪುಟದಲ್ಲಿ ಡಿಯ ಮತ್ತು ಮುಸ್ಲಿಂ ಜನಾಂಗದ ಬೇಷರತ್ ಣೆ ಯಾಚಿಸಿದ್ದಾನೆ.

ದು ಸುಳ್ಳು ಸುದ್ದಿಗಳನ್ನು, ಹಸಿ ದ್ವೇಷಗಳನ್ನು ಇತರ ಚೆಡ್ಡಿ ಪತ್ರಿಕೆಗಳಿಗೂ ಒಂದು ಯಾಗಲಿ. ಹಾಗೂ ಇದೇ ಮಾರ್ಗವನ್ನು ಸಮುದಾಯಗಳು ಮತ್ತು ಸಂಘಟನೆ ಹಾಗೂ ಹಿಡಿಯುವಂತಾಗಲಿ. ಎಲ್ಲಕ್ಕಿಂತ ಹೆಚ್ಚಾಗಿ ಸ ಭಟ್ಟ ಮಾಡುತ್ತಿರುವ ಚೆಡ್ಡಿ ಹರಕತ್ತುಗಳ ದರ ಸದ್ಯದ ಮಾಲೀಕರಾದ ಟೈಮ್ಸ್ ಆಫ್ ಾದವರು ಎಚ್ಚೆತ್ತುಕೊಂಡು ಈ ಭಟ್ಟನನ್ನು ಲಿ. ಗುಜರಾತ್ ಹತ್ಯಾಕಾಂಡದಲ್ಲಿ ಪತ್ರಿಕೆಗಳು ಗುಜರಾತಿ ಪತ್ರಿಕೆಗಳು ವಹಿಸಿದ ಪಾತ್ರವನ್ನು ಮಾಡಿಕೊಂಡಿರುವ ಯಾರಿಗೇ ಆದರೂ ವಹಿಸುತ್ತಿರುವ ಪಾತ್ರದ ತಾರ್ಕಿಕ ಅರ್ಥವಾಗುತ್ತದೆ. ಹೀಗಾಗಿ ಕರ್ನಾಟಕ ಮು ಗುಜರಾತ್ ಆಗಬಾರದೆಂದಾದರೆ ಏಕಗೆ ಕಲಿಸಿದ ಪಾಠದ ಮಹತ್ವ ಅರ್ಥವಾ

■




ಭಾಮಾನ ಭಂಡಾಟ ಬಂದ್ ಆಗಲಿ

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾರ್ಚ್ 28ರಂದು 'ಚಿತ್ರೋದ್ಯಮದ ಸಾಂಕೇತಿಕ ಬಂದ್' ಅನ್ನು ಘೋಷಿಸಿದೆ.

ಚಿತ್ರೋದ್ಯಮ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ನಿವಾರಿಸಲು ಈ ಬಂದ್ ನಡೆಸುತ್ತಿದ್ದೇವೆ ಎಂದು ಹೇಳುತ್ತಾ, ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡುತ್ತಿದ್ದಾರಾದರೂ, ಈ ಬಂದ್ ನಡೆಸುತ್ತಿರುವವರ ಅಸಲೀ ಉದ್ದೇಶವೇ ಬೇರೆ.

ಕಳೆದ ತಿಂಗಳು ಗಿರೀಶ್ ಕಾಸರವಳ್ಳಿ ನೇತೃತ್ವದ ಸಬ್ಸಿಡಿ ಆಯ್ಕೆ ಸಮಿತಿಗೆ ಅರ್ಜಿ ಸಲ್ಲಿಸಿದ್ದ ಸುಮಾರು 58 ಚಿತ್ರಗಳನ್ನು ವೀಕ್ಷಿಸಿ ಅದರಲ್ಲಿ 30 ಚಿತ್ರಗಳನ್ನು ಆಯ್ಕೆ ಮಾಡಬೇಕಾಗಿತ್ತು. ಸಬ್ಸಿಡಿಗಾಗಿ ಕ್ಯೂನಲ್ಲಿ ನಿಂತಿದ್ದ ಸಿನಿಮಾಗಳಲ್ಲಿ 24 ಚಿತ್ರಗಳನ್ನು ಬಿಟ್ಟರೆ ಬಹುತೇಕ ಸಿನಿಮಾಗಳು ರಿಮೇಕ್ ಮತ್ತು ಕಳಪೆ ಗುಣಮಟ್ಟದ್ದಾಗಿದ್ದರಿಂದ ಸಮಿತಿ ಈ ಚಿತ್ರಗಳ ಅರ್ಜಿಯನ್ನು ವಜಾ ಮಾಡಿತ್ತು.




ಇದೂ ಸಾಲದು ಎಂಬಂತೆ ರಾಜ್ಯಪಾಲ ರಾಮೇಶ್ವರ ಠಾಕೂರ್ ಸಮಿತಿಯೊಂದನ್ನು ರಚಿಸಿದರು. ಆ ಸಮಿತಿ ಕನ್ನಡದಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾಗಳಲ್ಲಿ ರೀಮೇಕ್ ಯಾವುದು, ಸ್ವಮೇಕ್ ಯಾವುದು ಎಂಬುದನ್ನು ಕಂಡುಹಿಡಿದು ವರದಿ ನೀಡಬೇಕಿತ್ತು. ಈ ಸಮಿತಿಗೆ ಬರಗೂರು ರಾಮಚಂದ್ರಪ್ಪನವರನ್ನು ಅಧ್ಯಕ್ಷರನ್ನಾಗಿಯೂ ನೇಮಿಸಿದ್ದರು. ಈ ಸಮಿತಿಯಲ್ಲಿ ಪತ್ರಕರ್ತ ಸುಬ್ರಮಣ್ಯ, ಸಂಕಲನಕಾರ ಸುರೇಶ್ ಅರಸ್ ಅವರು ಕೂಡಾ ಇದ್ದರು.

ಹೀಗೆ ಒಂದೆಡೆ ಕಳಪೆ ಚಿತ್ರಗಳಿಗೆ ಯಾವಾಗ ಸಬ್ಸಿಡಿಯನ್ನು ನಿರಾಕರಿಸಲಾಯಿತೋ, ಇನ್ನೊಂದೆಡೆ ರೀಮೇಕ್ ಮತ್ತು ರೀಮಿಕ್ಸ್ ಚಿತ್ರಗಳಿಗೆ ತೆರಿಗೆ ರಿಯಾಯಿತಿಯನ್ನೂ ತಡೆಯುವ ಕ್ರಮವೊಂದು ಜಾರಿಗೆ ಬಂತೋ ಕನ್ನಡ ಚಿತ್ರದ ಹಲವು ನಿರ್ಮಾಪಕರು ದಂಗಾಗಿ ಹೋದರು. ಅತ್ತ ಸರಕಾರಿ ಹಣವೂ ಇಲ್ಲ, ಇತ್ತ ತೆರಿಗೆ ರಿಯಾಯಿತಿಯೂ ಇಲ್ಲ ಎಂದಾಗ ಅವರು ಮುಂದಿಟ್ಟಿದ್ದೇ ವಿಚಿತ್ರವಾದ ವಾದವನ್ನ. ಅದರೆ ಮುಂದಾಳತ್ವವನ್ನು ವಹಿಸಿಕೊಂಡಿದ್ದೇ ಭಾ.ಮ. ಹರೀಶ್ ಎಂಬ ಸೋಕಾಲ್ಡ್ ಚಿತ್ರ ನಿರ್ಮಾಪಕ.

ಹರೀಶನ ಅರಚಾಟ

ರಿಮೇಕ್ ಚಿತ್ರಗಳಿಗೂ ಸಬ್ಸಿಡಿ ನೀಡಬೇಕೆಂದು ಬೊಬ್ಬೆ ಹೊಡೆಯುತ್ತಿರುವವರಲ್ಲಿ ನಿರ್ಮಾಪಕನಲ್ಲದ ನಿರ್ಮಾಪಕ ಭಾ.ಮಾ. ಹರೀಶನದ್ದೇ ಮುಖ್ಯ ಪಾತ್ರ. ಅಸಲಿಗೆ ಒಂದು ಚಿತ್ರವನ್ನೂ ಸ್ವಂತ್ರವಾಗಿ ನಿರ್ಮಿಸಿರದಿದ್ದ ಈ ಹರೀಶ್ ಮೊದಮೊದಲು ಯುವ ಜನತಾದಳದಲ್ಲಿ ಓಡಾಡಿಕೊಂಡಿದ್ದ ವ್ಯಕ್ತಿ. ಕ್ಲಾಸ್ ಒನ್ ಕಂಟ್ರಾಕ್ಟರ್ ಎಂ.ಜಿ. ರಾಮಮೂರ್ತಿ ಎಂಬುವರನ್ನು ಹಿಡಿದು ಸಿನಿಮಾ ಮಾಡುವ ಆಸೆ ತೋರಿಸಿದ್ದ. ರಾಮಮೂರ್ತಿಯವರಿಗೂ ಈ ಸಿನಿಮಾದ ಬಗ್ಗೆ ಸ್ವಲ್ಪ ಆಕರ್ಷಣೆ. ಭಾಮಾ ಹರೀಶನ ಮಾತಿಗೆ ಮರುಳಾದ ರಾಮಮೂರ್ತಿ 'ಮೆಜೆಸ್ಟಿಕ್' ಎಂಬ ಚಿತ್ರವನ್ನು ಮಾಡಿದರು. ಹರೀಶನ ಪುಣ್ಯಕ್ಕೆ ಸಿನಿಮಾ ಹಿಟ್ ಆಯಿತಲ್ಲದೆ ದರ್ಶನ್ ಎಂಬ ನಟ ಸ್ಟಾರ್ ಆಗಲು ಈ ಚಿತ್ರ ಕಾರಣವಾಯಿತು. ಇದನ್ನೇ ಬಂಡವಾಳ ಮಾಡಿಕೊಂಡು ದರ್ಶನ್‌ನಿಂದ ಇನ್ನೊಂದು ಕಾಲ್‌ಶೀಟ್ ಪಡೆದು ಸಿನಿಮಾ ಮಾಡಲು ಹರೀಶ್ ಸಜ್ಜಾಗಿದ್ದ. ಆದರೆ ಅಷ್ಟೊತ್ತಿಗಾಗಲೇ ಈತನ ಅಸಲಿ ಬಂಡವಾಳವನ್ನು ಅರಿತಿದ್ದ ದರ್ಶನ್ ಆತನಿಗೆ ಮತ್ತೊಂದು ಕಾಲ್ ಶೀಟ್‌ಅನ್ನು ನೀಡಲಿಲ್ಲ.




ಆಮೇಲೆ ತಮ್ಮ ಸಂಬಂಧಿಕರ ಮಗನಾದ ದೀಪಕ್‌ನನ್ನು ಕರೆದುಕೊಂಡು ಬಂದು "ದರ್ಶನ್‌ನನ್ನು ಮೀರಿಸುವಂತೆ ಈತನನ್ನು ಬೆಳೆಸುತ್ತೇನೆ" ಎಂದು ಹೇಳತೊಡಗಿದ. ಅಷ್ಟೇ ಅಲ್ಲದೆ "ಈ ದೀಪಕ್ ಶಂಕರ್‌ನಾಗ್ ತರಹವೇ ಇದ್ದಾನೆ" ಎಂದು ಪುಂಗಿ ಊದಿದ. ಕಡೆಗೆ ದೀಪಕ್‌ನನ್ನು ಹಾಕಿಕೊಂಡು 'ಶಿಷ್ಯ' ಸಿನಿಮಾವನ್ನು ಮಾಡಿ ತಾನೇ ನಿರ್ಮಾಪಕ ಎಂದೂ ಘೋಷಿಸಿಕೊಂಡ. ಆದರೆ 'ಶಿಷ್ಯ' ಚಿತ್ರಕ್ಕೆ ಈತ ಒಂದೇ ಒಂದು ಪೈಸೆ ಕೂಡಾ ಹೂಡಿರಲಿಲ್ಲ. ದೀಪಕ್‌ನ ಮನೆಯವರಿಂದಲೇ ಹಣ ಹಾಕಿಸಿ ತಾನು ಮಾತ್ರ ಉಚಿತವಾಗಿ ನಿರ್ಮಾಪಕ ಎಂಬ ಹೆಸರನ್ನು ಮಾಡಿಕೊಂಡ. 'ಶಿಷ್ಯ' ಮಾತ್ರ ಮಗುಚಿಬಿತ್ತು.

ನಂತರ 'ಪಾಪ ಪಾಂಡು' ಖ್ಯಾತಿಯ ಚಿದಾನಂದನನ್ನು ಹಾಕಿಕೊಂಡು, ಸದಾ ತನ್ನೊಂದಿಗೆ ಓಡಾಡುವ ಉಮೇಶ್ ಬಣಕಾರ್ ಮತ್ತು ಸುದೀಪ್‌ನ 'ಮುಸ್ಸಂಜೆಯ ಮಾತು' ನಿರ್ಮಿಸುತ್ತಿರುವ ಭರತ್‌ರನ್ನು ಪಾರ್ಟನರ್ ಎಂದು ಹೇಳಿ 'ಅಯ್ಯೋ ಪಾಂಡು' ಎಂಬ ಸಿನಿಮಾ ಮಾಡಿದ. ಜೊತೆಗೆ ಗುಬ್ಬಿ ವೀರಣ್ಣನವರ ಮೊಮ್ಮಗಳಾದ ನಟಿ ಸುಷ್ಮಾಳನ್ನೇ ಹೀರೋಯಿನ್ನೂ ಮಾಡಿದ. ಆದರೆ ಚಿತ್ರ ಮಾತ್ರ ಡಬ್ಬದಿಂದ ಹೊರಬರಲೇ ಇಲ್ಲ.

ಆದರೆ ಹರೀಶ ಸುಮ್ಮನೆ ಕೂರುವ ಜಾಯಮಾನ ಹೊಂದಿಲ್ಲವಲ್ಲ, ಚಿಕ್ಕಣ್ಣ ಎಂಬ ನಿರ್ಮಾಪಕ ಕಷ್ಟಪಟ್ಟು '18 ಕ್ರಾಸ್ ಮಲ್ಲೇಶ್ವರಂ' ಎಂಬ ಸಿನಿಮಾ ಮಾಡುತ್ತಿದ್ದರೆ, ಕಾರಣವಿಲ್ಲದೆ ಚಿತ್ರೀಕರಣಕ್ಕೆ ಭೇಟಿ ನೀಡುತ್ತಿದ್ದ ಈ ವ್ಯಕ್ತಿ 'ನಾನು ಈ ಚಿತ್ರದ ಎಕ್ಸಿಕ್ಯುಟಿವ್ ಪ್ರೊಡ್ಯೂಸರ್' ಎಂದು ಹೇಳಿಕೊಂಡು ತಿರುಗಾಡಲಾರಂಭಿಸಿದ... ಜೊತೆಗೆ ಈ ಚಿತ್ರದಲ್ಲಿ ಅವಕಾಶ ಕೊಡಿಸುತ್ತೇನೆ ಎಂದು ಒಂದಷ್ಟು ಜನರ ಮುಂಡಾಮೋಚಿದ. ಇಂತಹ ಹರೀಶನ ಪ್ರವರಗಳನ್ನು ಹೇಳುತ್ತಾ ಹೋದರೆ ಈ ಪುಟ ತುಂಬುತ್ತದೆ....

ಅಸಲಿಗೆ ಸಂಪೂರ್ಣ ನಿರ್ಮಾಪಕನಲ್ಲದ ಭಾ.ಮಾ.ಹರೀಶ್‌ಗೆ ಸ್ವಮೇಕ್ ಚಿತ್ರವಿರಲಿ ಒಂದು ರಿಮೇಕ್ ಚಿತ್ರ ಮಾಡುವ ತಾಕತ್ತಿದೆ ಎಂಬುದೇ ಇನ್ನೂ ಸಾಬೀತಾಗಿಲ್ಲ. ಹಾಗಿರುವಾಗ ಹರೀಶ್ ಎಂಬ ಬಡಾಯಿಯನ್ನು ಮುಂದೆ ಇಟ್ಟುಕೊಂಡು ರೀಮೇಕ್‌ಗಳಿಗೂ ತೆರಿಗೆ ರಿಯಾಯಿತಿ ಕೊಡಿ, ಕಳಪೆ ಸಿನಿಮಾಗಳಿಗೂ ಸಬ್ಸಿಡಿ ನೀಡಿ ಎಂದು ಗಾಂಧಿನಗರದವರು ಹೊರಟಿದ್ದಾರಲ್ಲ, ಅದಕ್ಕಿಂತ ಇನ್ನೊಂದು ದುರಂತ ಇರಲಿಕ್ಕಿಲ್ಲ.




'ಈ ಕತೆ ಇಲ್ಲಿಗೇ ನಿಲ್ಲುವುದಿಲ್ಲ. ಡಾ. ರಾಜ್‌ಕುಮಾರ್ ಬದುಕಿದ್ದಾಗ ಕನ್ನಡ ಚಿತ್ರೋದ್ಯಮದ ಒಳಿತಿಗಾಗಿ ಪರಭಾಷಾ ಚಿತ್ರಗಳ ವಿರುದ್ಧ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕು (ಆ ಕ್ರಮಗಳು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದರೂ) ಎಂಬ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಾ.ರಾ. ಗೋವಿಂದು ತರಹದವರೂ ಇವತ್ತು ತಮ್ಮ ವಿವೇಚನಾಶಕ್ತಿಯನ್ನು ಕಳೆದುಕೊಂಡು ಈ ಭಾ.ಮಾ.ಹರೀಶನ ಹುಚ್ಚು ಹೋರಾಟಗಳೊಂದಿಗೆ ಜೊತೆಗೂಡಿರುವುದು ನಿಜಕ್ಕೂ ಅಚ್ಚರಿ ಮೂಡಿಸುವಂತಹದ್ದು.

ವಿಪರ್ಯಾಸದ ಸಂಗತಿ ಯಾವುದೆಂದರೆ, ಈ ಭಾ.ಮಾ.ಹರೀಶ್ ಮತ್ತು ಇತ್ಯಾದಿ ತಲೆ ಕೆಟ್ಟ ಜನರ ವಾದಗಳ ವಿರುದ್ಧ ಗಿರೀಶ್ ಕಾಸರವಳ್ಳಿ, ಬಿ.ಸುರೇಶ್ ಮತ್ತು ಇತರ ಪ್ರಜ್ಞಾವಂತ ನಿರ್ದೇಶಕರು "ಯಾವುದೇ ಕಾರಣಕ್ಕೂ ರಿಮೇಕ್‌ಗಳಿಗೆ ತೆರಿಗೆ ರಿಯಾಯತಿಯನ್ನು ನೀಡಬಾರದು ಮತ್ತು ಕಳಪೆ ಸಿನಿಮಾಗಳಿಗೆ ಸಬ್ಸಿಡಿ ನೀಡುವ ಮೂಲಕ ಜನರ ಹಣವನ್ನು ಪೋಲು ಮಾಡಬಾರದು" ಎಂದು ಮನವಿ ಸಲ್ಲಿಸಿರುವುದು ಯಾರ ಗಮನಕ್ಕೂ ಬಾರದಿರುವುದು.

ಭಾ.ಮಾ.ಹರೀಶನ ಹುಚ್ಚಾಟದ ನಡುವೆಯೂ, ಆತನೊಂದಿಗೆ ಸೇರಿ ಚಿತ್ರೋದ್ಯಮದ ಬಂದ್‌ಗೆ ಕರೆ ಕೊಟ್ಟಿರುವ ಚೇಂಬರ್‌ನವರ ಪೆದ್ದುತನದ ಮುಂದೆಯೂ, ಕನ್ನಡ ಚಿತ್ರರಂಗದ ಬಗ್ಗೆ ಪ್ರಜ್ಞಾವಂತರಿಗಿರುವ ಕಾಳಜಿ ಮತ್ತು ಉತ್ತಮ ಅಭಿರುಚಿಯ ಬಗ್ಗೆ ಪ್ರಸ್ತುತ ಸರಕಾರಕ್ಕೆ ಅರಿವಾಗಿ, ತಲೆಕೆಟ್ಟವರಿಗೆ ಕಡಿವಾಣ ಹಾಕಬೇಕಿದೆ.

■

ಒಂದು ಬ್ಯಾನರ್‌ನ ಅವಾಂತರ



ಉಚ್ಚಿಲ, ಉಡುಪಿ ಮಂಗಳೂರು ಹೆದ್ದಾರಿಯಲ್ಲಿ ಕಾಪುವಿಗೆ ಸಮೀಪವಿರುವ ಸಣ್ಣ ಊರು. ಊರಿನ ಪೇಟೆಯಲ್ಲಿ, ಅಂದರೆ ಹೆದ್ದಾರಿಯ ಎರಡೂ ಕಡೆಗಳಲ್ಲಿ ಇರುವ ಅಂಗಡಿ ಸಾಲಿನಲ್ಲಿ ಹಸನ್ ಆಲಿಯವರ ಹಣ್ಣಿನ ಅಂಗಡಿಯೂ ಒಂದು. ಉಚ್ಚಿಲದವರೇ ಆದ ಹಸನ್ ಆಲಿ ಕಳೆದ ಹಲವು ವರ್ಷಗಳಿಂದ ಈ ಅಂಗಡಿಯನ್ನು ನಡೆಸಿಕೊಂಡು ಬಂದಿದ್ದಾರೆ. ಅವರ ಎರಡನೆಯ ಮಗ ಜಲಾಲುದ್ದೀನ್ ಕೂಡ ತಂದೆಯೊಟ್ಟಿಗೆ ಅಂಗಡಿ ನೋಡಿಕೊಂಡಿದ್ದಾರೆ. ಕೆಲವು ದಿನಗಳ ಹಿಂದೆ, ಅವರ ಅಂಗಡಿ ಎದುರಿನ ಮರಕ್ಕೆ ಉಚ್ಚಿಲಕ್ಕೆ ಸಮೀಪದ ಬೆಳಪು ಗ್ರಾಮದ ಜಾರಂದಾಯ ದೈವದ "ನೇಮೋತ್ಸವ"ದ ಬ್ಯಾನರ್ ಕಟ್ಟಲಾಗಿತ್ತು. (ಜಾರಂದಾಯ, ಒಂದು ಸ್ಥಳೀಯ ಬ್ರಾಹ್ಮಣೇತರ ದೈವ; ಅದರ "ನೇಮ" ಕೂಡ ಒಂದು ಅವೈದಿಕ ಆಚರಣೆ. ಆದರೆ ಕರಾವಳಿಯಲ್ಲಿ ಈಗ ಎಲ್ಲ ಬ್ರಾಹ್ಮಣೇತರ ದೈವಭೂತ ಸ್ಥಾನಗಳೂ ಬ್ರಾಹ್ಮಣೀಕರಣ, ಸಂಸ್ಕೃತೀಕರಣಗಳಿಗೆ ತುತ್ತಾಗಿ "ನೇಮ" "ಕೋಲ"ಗಳು ನೇಮೋತ್ಸವ, ಕೋಲೋತ್ಸವಗಳಾಗಿವೆ; ಆ ಸ್ಥಳಗಳಲ್ಲಿ ಈಗ ಅಷ್ಟಬಂಧ, ಬ್ರಹ್ಮಕಲಶ, ಮತ್ತಿತರ ವೈದಿಕ ವಿಧಿವಿಧಾನಗಳೂ ಶುರುವಾಗಿವೆ.)

ಫೆ. 18ರ ಸೋಮವಾರ ಬೆಳಿಗ್ಗೆ ಹಸನ್ ಆಲಿಯವರ ಅಂಗಡಿಗೆ ಸಾಮಾನು ಇಳಿಸಲು ಬಂದ ಟೆಂಪೋಗೆ ಜಾರಂದಾಯ ನೇಮೋತ್ಸವದ ಈ ಬ್ಯಾನರ್ ತಾಗಿ ಕೆಳಗೆ ಬಿದ್ದಿತು. ಅಲ್ಲಿದ್ದ ಕೆಲವರು, ಆ ಬ್ಯಾನರನ್ನು ಮತ್ತೆ ಎತ್ತಿ ಕಟ್ಟುವುದರಲ್ಲಿದ್ದಾಗ, ಅಂಗಡಿಯಲ್ಲಿದ್ದ ಹಸನ್ ಆಲಿಯವರ ಮಗ ಜಲಾಲುದ್ದೀನ್, "ಸ್ವಲ್ಪ ಮೇಲೆ ಕಟ್ಟಿ; ಅದು ಮತ್ತೆ ಕೆಳಗೆ ಬೀಳುವುದು ಬೇಡ" ಎಂದು ಹೇಳಿದರು. ಆ ಸಂದರ್ಭದಲ್ಲಿ ಯಾರಾದರೂ ಹೇಳಬಹುದಾದ ಮಾತು ಅದು. ಆದರೆ ಬ್ಯಾನರ್ ಕಟ್ಟಲು ಮುಂದಾದವರಿಗೆ ಆ ಮಾತಿನಿಂದ ಪಿತ್ತ ನೆತ್ತಿಗೇರಿ, ಬ್ಯಾನರನ್ನು ತೀರ ಕೆಳಗೆ, ಅಂದರೆ ಅಂಗಡಿಗೆ ಸರೀ ಅಡ್ಡವಾಗಿ ಕಟ್ಟಿದರು. ಜಲಾಲುದ್ದೀನ್ ಬ್ಯಾನರನ್ನು ಕಿತ್ತು ನೆಲಕ್ಕೆ ಹಾಕಿದರು.

ಆಗ ಅಲ್ಲಿಯೇ ರಿಕ್ಷಾ ಸ್ಟ್ಯಾಂಡಿನ ಬಳಿ ಇದ್ದ ರವಿ ಎಂಬಾತ, ಅಂಗಡಿಯ ಒಳಗೆ ನುಗ್ಗಿ ಮುಸ್ಲಿಮರಿಗೆ ಬೈಯುತ್ತ ಜಲಾಲುದ್ದೀನ್ ಮೈಮೇಲೆ ಕೈಮಾಡಿದ. ಆತನ ಜೊತೆ ಸ್ಥಳಿಕರಾದ ಮತ್ತೂ ನಾಲ್ಕು ಜನರಿದ್ದರು. ಜಲಾಲುದ್ದೀನ್, "ಮೈ ಮುಟ್ಟಬೇಡಿ; ಏನಿದ್ದರೂ ನಾವು ಮಾತಾಡಿಕೊಂಡು ಸೆಟಲ್ ಮಾಡುವ" ಎಂದು ಹೇಳುತ್ತಿದ್ದಂತೆ ರವಿ, ಅವರ ಕೆನ್ನೆಗೆ ಬಾರಿಸಿದ. ಅಷ್ಟರಲ್ಲಿ ಅಂಗಡಿ ಸುತ್ತ ಜನ ಸೇರಿದರು; ಗಲಾಟೆ ಜೋರಾಯಿತು. ಪೊಲೀಸರು ಬಂದು ಜಲಾಲುದ್ದೀನ್ ಹಾಗೂ ರವಿ ಮತ್ತು ಅವನ ಸಂಗಡಿಗರನ್ನು ಪಡುಬಿದ್ರಿ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಮಧ್ಯಸ್ಥಿಕೆ ಮಾಡಿ, ವಿವಾದವನ್ನು ಇತ್ಯರ್ಥ ಗೊಳಿಸಿದರು.

ಇದು ನಡೆದದ್ದು ಮಧ್ಯಾಹ್ನ ಸುಮಾರು 12.30 ರ ವೇಳೆಗೆ. ಅದೇದಿನ ಸುಮಾರು 2 ಗಂಟೆಯ ಹೊತ್ತಿಗೆ ಕಾಪು ಕ್ಷೇತ್ರದ ಮಾಜಿ ಬಿಜೆಪಿ ಶಾಸಕ ಲಾಲಾಜಿ ಮೆಂಡನ್ "ವಿವಾದಿತ" ಸ್ಥಳಕ್ಕೆ ಬಂದರು. ಅವರ ಜೊತೆಗಿದ್ದ ಸುಮಾರು 50-60ರ ಗುಂಪು, ಹಣ್ಣಿನ ಅಂಗಡಿಯನ್ನು ಬಲಾತ್ಕಾರವಾಗಿ ಮುಚ್ಚಿಸಿ, ಅದರ ಎದುರು ಸಮೀಪದ ದೇವಸ್ಥಾನವೊಂದರ ಭಾರಿ ದೊಡ್ಡ ಫ್ಲೆಕ್ಸ್ ಕಟ್‌ಔಟನ್ನು ಇರಿಸಿದರು. "ಅಂಗಡಿಯಲ್ಲಿದ್ದ ಹಣ್ಣು, ಚಾಕಲೇಟ್, ಬೇಕರಿ ತಿನಿಸು ಮುಂತಾದ್ದನ್ನು ದೋಚಿದ್ದಾರೆ; ಸುಮಾರು 10000 ರೂಪಾಯಿಯ ಮಾಲು ಹೋಯಿತು" ಎಂದು ಹಸನ್ ನನ್ನೊಡನೆ ಹೇಳಿದರು. ಈ ನಡುವೆ, ಲಾಲಾಜಿ ಮೆಂಡನ್ ಅವರ ಫೋಟೋವನ್ನು ತನ್ನ ಮೊಬೈಲ್‌ನಲ್ಲಿ ಕ್ಲಿಕ್ಕಿಸಿದ ಎಂದು ಆಪಾದಿಸಿ, ಡ್ಯೂಟಿ ಮೇಲಿದ್ದ ಪಡುಬಿದ್ರಿ ಸ್ಟೇಷನ್ನಿನ ಕಾನ್ಸ್‌ಟೇಬಲ್ ರಫೀಕ್ ಅವರಿಗೆ ಗುಂಪಿನಲ್ಲಿದ್ದವರು ಥಳಿಸಿದ್ದಾರೆ. ರಫೀಕ್ ಲಾಲಾಜಿ ಮೆಂಡನ್ ಅವರನ್ನು ತಮ್ಮ ಕಂಪ್ಲೇಂಟಿನಲ್ಲಿ ಹೆಸರಿಸಿದ್ದರೂ ಅವರ ಮೇಲಧಿಕಾರಿಗಳು ಆ ಹೆಸರನ್ನು ಕೈಬಿಡಲು ಒತ್ತಡ ಹೇರುತ್ತಿದ್ದಾರಂತೆ. ಆದರೆ ಪೆಟ್ಟು ತಿಂದ ಜಲಾಲುದ್ದೀನ್ ಮೇಲೆ ಪಡುಬಿದ್ರಿ ಸ್ಟೇಷನ್ನಿನಲ್ಲಿ ಸೆಕ್ಷನ್ 323, 504 ಮತ್ತು 506 ಗಳ ಅನ್ವಯ ಕೇಸು ದಾಖಲಾಗಿ[...] ಪೊಲೀಸ್ ಸ್ಟೇಷನ್ನಿನಲ್ಲಿ ಬಗೆಹರಿದ ವಿವಾದ[...] ಲಾಲಾಜಿ ಮೆಂಡನ್ ಪ್ರವೇಶಿಸಿ, ಗುಂ[...] ತೋಳ್ಬಲವನ್ನೂ ಪ್ರದರ್ಶಿಸಿ, ಅಂಗಡಿ ಎದು[...] ಪೊಲೀಸರ ಲಾಠಿಚಾರ್ಜಿಗೂ ಕಾರಣರಾಗಿದ್ದಾರೆ.

ಧಾರ್ಮಿಕ ಸಮಾರಂಭದ ಬ್ಯಾನರ್‌ಗಳು ಬ[...] ಜಗಳಕ್ಕೆ ಕಾರಣವಾಗುವುದು ಇದೇನೂ ಮೊದಲ ಬ[...] ಅಲ್ಲ. ಜಗಳಕ್ಕೆ ಬ್ಯಾನರ್ ಒಂದು ನೆಪ ಅಷ್ಟೆ. ಲಾಲಾ[...] ಮೆಂಡನ್ ತಮ್ಮ ಕ್ಷುದ್ರ ರಾಜಕೀಯಕ್ಕೆ ಇದ[...] ಬಳಸಿಕೊಂಡು ಉಚ್ಚಿಲದ ವಾತಾವರಣವ[...] ಹದಗೆಡಿಸಿದ್ದಾರೆ. ಕಳೆದ ತಿಂಗಳಷ್ಟೇ ಅವರ ಬಂಟನೊ[...] ಸಮೀಪದ ಮೂಳೂರಿನ ಮಸೀದಿ ಎದುರು ಕಡಿ[...] ಹಂದಿಯ ತಲೆ ಇರಿಸಿದ ಆರೋಪದ ಮೇ[...] ಸೆರೆಯಾಗಿದ್ದರು. ಆ ಪರಿಸರದಲ್ಲಿ ಕೋಮುಗಲ[...] ಹುಟ್ಟು ಹಾಕುವುದೇ ಈ ಅಕೃತ್ಯದ ಏಕಮಾ[...] ಉದ್ದೇಶವಾಗಿತ್ತು. ಆದರೆ ಅಲ್ಲಿನ ಮುಸ್ಲಿಮರ[...] ವಿವೇಚನೆಯಿಂದ ವರ್ತಿಸಿದ್ದರಿಂದ ಹಂದಿ ತ[...] ಮೆಂಡನ್‌ರಿಗೆ ಯಾವುದೇ ರಾಜಕೀಯ ಲಾಭ ತಂದ[...] ಕೊಡಲಿಲ್ಲ.

ಕಾಪು ಕ್ಷೇತ್ರದಲ್ಲಿ ಲಾಲಾಜಿ ಮೆಂಡನ್ ಅವ[...] ಬುಡ ಭದ್ರವಿಲ್ಲ. ಕಳೆದ ಚುನಾವಣೆಯಲ್ಲಿ ಅವ[...] ತಮ್ಮ ಕಾಂಗ್ರೆಸ್ ಪ್ರತಿಸ್ಪರ್ಧಿ ವಸಂತ ಸಾಲಿಯಾನ್‌ರಿಗಿ[...] ಕೇವಲ 1600 ರಷ್ಟು ಹೆಚ್ಚು ಮತಗಳನ್ನು ಪಡೆ[...] ಗೆದ್ದಿದ್ದರು. ಆದರೆ ಅದೇ ವೇಳೆಗೆ ಬಂಡುಕೋರ ಕಾಂಗ್ರೆ[...] ಅಭ್ಯರ್ಥಿ ಶ್ರೀಮತಿ ಗ್ಲಾಡಿಸ್ ಆಲ್ಮೇಡಾ ಸುಮಾ[...] 5000 ಮತಗಳನ್ನು ಪಡೆದಿದ್ದರು. ಈ ಹಿನ್ನೆಲೆಯ[...] ಚುನಾವಣೆ ಹತ್ತಿರ ಬರುತ್ತಿದ್ದಂತೆ ಮತೀಯ ದ್ವೇ[...] ಹುಟ್ಟು ಹಾಕಿ, ಸಮಸ್ತ ಹಿಂದೂ ಮತದಾರರನ್ನು ತ[...] ಓಟ್‌ಬ್ಯಾಂಕ್ ಮಾಡಿಕೊಳ್ಳುವ ಮೆಂಡನ್[...] ದುರಾಲೋಚನೆ ಈ ಪ್ರಸಂಗದಲ್ಲೂ ಎದ್ದು ಕಾಣುತ್ತ[...]

ಚುನಾವಣೆಗಳ ಮಾತು ಒತ್ತಟ್ಟಿಗಿರ[...] ಉಚ್ಚಿಲದಂತಹ ಸಣ್ಣ ಊರುಗಳಲ್ಲಿ ಈಗ ನಡೆಯುತ್ತಿರು[...] ಈ ಥರಹದ ದೊಂಬಿ, ಮತ ಪ್ರದರ್ಶನಗಳು ನಮ[...] ಮನುಷ್ಯತ್ವವನ್ನೇ ಹೇಗೆ ಅಪಾಂಗಗೊಳಿಸುತ್ತಿವೆ ಎಂ[...] ಬಗ್ಗೆ ನಾವು ಈಗ ಯೋಚಿಸಬೇಕಾಗಿದೆ. ಉಚ್ಚಿಲದ[...] ಜನರ ಆಕ್ರೋಶಕ್ಕೆ ತುತ್ತಾದ ಹಸನ್ ಆಲಿ, ಈ ಊರಿ[...]




ಬಂಟ್ವಾಳ: ರಿಕ್ಷಾ ಡ್ರೈವರ್ ಇಕ್ಬಾಲ್ ಕೊಲೆ!

ನಾಗರಾಜ ಶೆಟ್ಟಿಯ ಕುಮ್ಮಕ್ಕು?

ಫೆಬ್ರವರಿ 22 ನೇ ತಾರೀಖು ಬಂಟ್ವಾಳದ ಪಚ್ಚನಡ್ಕ ಎಂಬಲ್ಲಿನ ನಿರ್ಜನ ತಾಣದಲ್ಲಿ ಬೆಳಗ್ಗೆ 9.30 ರ ಹೊತ್ತಿಗೆ ರಿಕ್ಷಾ ಚಾಲಕ ಇಕ್ಬಾಲ್‌ನ ಕತ್ತು ಕೊಯ್ದು ಕೊಲೆ ಮಾಡಿದವರು ಯಾರು ಅನ್ನೋದೀಗ ಪೊಲೀಸರ ತನಿಖೆಯಿಂದ ಸ್ಪಷ್ಟವಾಗತೊಡಗಿದೆ. ಶಂಕಿತ 18 ಮಂದಿಯನ್ನು ವಶಕ್ಕೆ ತೆಗೆದುಕೊಂಡು ತನಿಖೆಗಿಳಿದಿರುವ ಪೊಲೀಸರು ಕೊಲೆಯ ಜಾಡನ್ನು ಈಗಾಗಲೇ ಭೇದಿಸಿದ್ದು ಮಂಗಳೂರಿನ ಮೋದಿ ನಾಗರಾಜ ಶೆಟ್ಟಿಯೇ ಇದರ ರೂವಾರಿ ಎಂಬುದು ಬೆಳಕಿಗೆ ಬಂದಿದೆ. ಇನ್ನೂ ಒಂದು ವಿಚಾರ ಎಂದರೆ ಹಂತಕರ ರಕ್ಷಣೆಗೆ ಡಿ.ವಿ. ಸದಾನಂದಗೌಡ, ಯೋಗಿಶ್ ಭಟ್, ಎಂ.ಎಲ್.ಸಿ. ಗಣೇಶ್ ಕಾರ್ಣಿಕ್ ಜತೆ ಸ್ವತಃ ಶೆಟ್ಟಿ ಪೊಲೀಸರ ಮೇಲೆ ಒತ್ತಡ ಹಾಕುತ್ತಿರುವುದು ಲೇಟೆಸ್ಟ್ ವಿದ್ಯಮಾನವಾಗಿದೆ.

ಬಂಟ್ವಾಳದ ಕೆಳಗಿನ ಪೇಟೆಯಲ್ಲಿ ವಯಸ್ಸಿಗೆ ಬಂದ ತಂಗಿ ಮತ್ತು ತಾಯಿಯನ್ನು ಕಟ್ಟಿಕೊಂಡು ಬಾಡಿಗೆ ಮನೆಯಲ್ಲಿ ಬದುಕುತ್ತಿದ್ದ 23 ರ ಹರೆಯದ, ಅವಿವಾಹಿತ ಯುವಕ ಇಕ್ಬಾಲ್. ಕೆಎಫ್‌ಡಿ ಸಂಘಟನೆಯ ಕಾರ್ಯಕರ್ತನಾಗಿದ್ದ ಇಕ್ಬಾಲ್‌ನದ್ದು 'ಆಟೋ ರಿಕ್ಷಾ' ಓಡಿಸುವುದು ಕಾಯಕ. ಯಾವುದೇ ಕ್ರಿಮಿನಲ್ ಹಿನ್ನೆಲೆಯಿರದ, ಯಾರೊಂದಿಗೂ ದ್ವೇಷ ಕಟ್ಟಿಕೊಂಡಿರದ, ಈತನನ್ನು ಕೊಲ್ಲಲು ಯಾವುದೇ ಬಲವಾದ ಕಾರಣಗಳೂ ಕಂಡುಬರುತ್ತಿಲ್ಲ.

ಆದರೆ ಮಾಜಿ ಮಂತ್ರಿ ನಾಗರಾಜ ಶೆಟ್ಟಿಯ ದೆಸೆಯಿಂದ ಕೋಮುಸೂಕ್ಷ್ಮ ಪ್ರದೇಶವಾಗಿ ಮಾರ್ಪಟ್ಟಿರುವ ಬಂಟ್ವಾಳದಲ್ಲಿ ಕಳೆದ ಎರಡು ತಿಂಗಳಿಂದ 'ದನದ-ಮಾಂಸ' ಮತ್ತು 'ತಲೆ' ವಿಚಾರದಲ್ಲಿ ಉದ್ಭವಿಸಿರುವ ಅಹಿತಕರ ವಾತಾವರಣ ಬೂದಿಮುಚ್ಚಿದ ಕೆಂಡದಂತೆ ಉಳಿದಿದ್ದು, ನರಬಲಿಯೊಂದನ್ನು ಬೇಡುತ್ತಿತ್ತು. ಅದೀಗ ಈ ಅಮಾಯಕ ಯುವಕ ಇಕ್ಬಾಲ್ ನರಾಧರ್ಮದ ಚೂರಿಗೆ ಕೊರಳೊಡ್ಡುವ ಮೂಲಕ ಸಂಪನ್ನವಾಗಿರಬಹುದೆಂದೇ ತರ್ಕಿಸಬೇಕಾಗಿದೆ.



ಈ ಕೊಲೆಗೆ ಒಂದು ದಿನಕ್ಕೆ ಮೊದಲು ಉಬೈದ್ ಎಂಬ ರಿಕ್ಷಾವಾಲಾನನ್ನು ಇದೇ ರೀತಿ ಬಾಡಿಗೆಗೆಂದು ಗೊತ್ತು ಮಾಡಿ ಕೊಲ್ಲಲ್ಲು ಸಂಚು ಹೂಡಲಾಗಿತ್ತು. ಆದರೆ ಆತ ಆ ನಿರ್ಜನ ಪ್ರದೇಶಕ್ಕೆ ಹೋಗಲು ನಿರಾಕರಿಸಿ ಮೊಡಂಕಾಪುವಿನಿಂದಲೇ ವಾಪಾಸಾಗಿ ಸಾಯದೇ ಬಚಾವಾಗಿದ್ದ. ಈ ಒಂದು ಸ್ಕೆಚ್ಚು ವಿಫಲವಾದ ಮರುದಿನವೇ ಕಾರ್ಯ ಪ್ರವೃತ್ತರಾದ ಹಂತಕರು ಮರಳಿ ಯತ್ನವ ಮಾಡಿ ಕೆಲಸ ಪೂರೈಸಿದ್ದಾರೆ. ಈ 'ಚೆಡ್ಡಿ ತಂತ್ರ' ಈಗ ನಾಗಣ್ಣನ ಪ್ರಶಂಸೆಗೆ ಪಾತ್ರವಾಗಿದೆ. ಈ ಒಂದು ಪೂರ್ವಯೋಜಿತ ಕೊಲೆಗೆ ಸಜಿಪದಿಂದ ರಿಕ್ಷಾದಲ್ಲಿ ತಲವಾರು ಸಪ್ಲೈ ಆಗಿದ್ದು, ಎರಡು ಆಟೋರಿಕ್ಷಾಗಳನ್ನು ಸೀಜ್ ಮಾಡಲಾಗಿದೆ.

ಜನಸಾಮಾನ್ಯರ ನಾಡಿಮಿಡಿತ ಅರಿಯದ ಹಣದ ಕುಳ ನಾಗರಾಜ ಶೆಟ್ಟಿ ಸ್ವಭಾವತಃ ಮುಸ್ಲಿಂ ದ್ವೇಷಿ. ತನ್ನ ಟ್ರಾನ್ಸ್‌ಪೋರ್ಟ್ ಬ್ಯುಸಿನೆಸ್ ಮತ್ತು ಶಿಪ್ಪಿಂಗ್ ದಂಧೆಯಲ್ಲಿ ಕೋಟಿಗಟ್ಟಲೆ ಕಾಸು ಮಾಡಿದರೂ, ತನ್ನ ಕಂಪೆನಿಯಲ್ಲಿ ಕತ್ತೆಯಂತೆ ದುಡಿಯುವ ಡ್ರೈವರು-ಕ್ಲೀನರ್‌ಗಳಿಗೆ ಸಂಬಳಕ್ಕೆ ಸತಾಯಿಸುವ ಫ್ಯೂಡಲ್ ಲಾರ್ಡ್ ಈತ. ಆದರೆ ಭಜರಂಗಿಗಳಿಗೆ ಮತ್ತು ಬಿಜೆಪಿಗೆ ಯಾವುದೇ ಕಂಜೂಸಿತನ ತೋರಿಸದೇ ಹಣವನ್ನು ನೀರಿನಂತೆ ಚೆಲ್ಲುವ ಮಹಾ ಪೋಷಕ. ಇದು ಈತನ ರಾಜಕೀಯ ಅರ್ಹತೆ ಕೂಡಾ ಹೌದು. ಕ್ಯಾಂಪ್ಕೋದ ಅಧ್ಯಕ್ಷನಾಗಿ ಗೋಣಿಚೀಲದಲ್ಲಿ ಅಡಿಕೆ ರಫ್ತು ಮಾಡಿ ಕಂತೆ ಕಂತೆ ಕಮಾಯಿಸಿದ ಈತ ಗೋಲ್‌ಮಾಲ್ ಶೆಟ್ಟಿ ಎಂಬ ಬಿರುದನ್ನೂ ಪಡೆದುಕೊಂಡಿದ್ದಾನೆ.

ರಮಾನಾಥ್ ರೈಯ ರಾಜಕೀಯ ಶತ್ರುಗಳನ್ನೆಲ್ಲಾ ಬುಟ್ಟಿಗೆ ಹಾಕಿಕೊಂಡು ಕಳೆದ ಬಾರಿ ಬಂಟ್ವಾಳದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದುಬಂದಿದ್ದ. ಅಷ್ಟೇ ಸಲೀಸಾಗಿ ತನ್ನ ಹಡಬೆ ಹಣದ ತಾಕತ್ತಿನಿಂದ ಇಲ್ಲಿನ ಸೀನಿಯರ್‌ಗಳನ್ನೆಲ್ಲಾ ಮೂಲೆಗುಂಪು ಮಾಡಿ ಮಂತ್ರಿಯೂ ಆದ. ಜನಸೇವೆ ಮಾಡಿದ ಅನುಭವ ಇಲ್ಲದಿದ್ದರೂ ಲಾರಿ ಖರೀದಿಸಿ[...] ರೀತಿಯಲ್ಲೇ ಮಂತ್ರಿ ಪದವಿಯನ್ನು ನಾಗರಾಜ ಶೆಟ್ಟಿ ಖರೀದಿಸಿದ್ದ. ತನ್ನ ಅಯೋಗ್ಯ ಮನಃಸ್ಥಿತಿಗೆ ತಕ್ಕಂತೆ "ನನಗೆ ರಾಜಕೀಯದಲ್ಲಿ ಮೋದಿಯೇ ಆದರ್ಶ" ಎಂದು ಆರಂಭದಲ್ಲಿಯೇ ಘೋಷಿಸಿದ್ದ.

ಆಗಲೇ ಕೋಮು ವೈಷಮ್ಯದಿಂದ ತತ್ತರಿಸಿದ್ದ ಕರಾವಳಿಗೆ ಈತನಿಂದಾಗಿ ಇನ್ನೇನು ಗಂಡಾಂತರ ಕಾದಿದೆಯೋ ಎಂಬ ಆತಂಕ ಸೃಷ್ಟಿಯಾಗಿತ್ತು. ಮುಂ[...] ಈ ಮೋದಿ ಶಿಷ್ಯನ ಉಸ್ತುವಾರಿಕೆಯಲ್ಲಿ ನಡೆದೇ ಇಲ್ಲದ ಗೋಸಾಗಾಣಿಕೆ ಎಂಬ ಕಪೋಲ ಕಲ್ಪಿತ ಸುದ್ದಿಯೇ ಕಾಡ್ಗಿಚ್ಚಿನಂತೆ ಹಬ್ಬಿ ಕೋಮುಗಲಭೆ ರೂಪ ಪಡೆದು, ಮಂಗಳೂರನ್ನೇ ಸುಟ್ಟು ಕರಕಲು ಮಾಡಿತ್ತು. ಅದರ ಬೆನ್ನಿಗೆ ಮುಲ್ಕಿಯ ಸುಖನಾಂದ ಶೆಟ್ಟಿಯ ಕೊಲೆಯಾಗಿ, ಮಂತ್ರಿ ನಾಗರಾಜ ಶೆಟ್ಟಿಯ ನೇತೃತ್ವದಲ್ಲಿ ನಡೆದ ಶವದ ಮೆರವಣಿಗೆಯು ಗಲಭೆ ರೂಪ ಪಡೆದು ಮಂತ್ರಿಯ ಕಣ್ಣೆದುರೇ ಪೊಲೀಸರು ಗೋಲಿಬಾರ್ ನಡೆಸಿ ಇಬ್ಬರು ಹಿಂದೂಗಳು ಸತ್ತು ಹೋದರು.

ಈ ಕಳಂಕದಿಂದ ಮುಕ್ತನಾಗಲು ಈ ಶೆಟ್ಟಿಯ ಫರ್ಮಾನಿನಂತೆ ಕೊಲೆ ಆರೋಪಿಗಳಾದ ಮೂಲ್ಕಿ ರಫಿಕ್ ಮತ್ತು ಬುಲೆಟ್ ಸುಧೀರ್‌ನನ್ನು ಪೊಲೀಸರೇ 'ಎನ್‌ಕೌಂಟರ್'ನಲ್ಲಿ ಪರಂಧಾಮಕ್ಕಟ್ಟಿದ್ದರು.

ಹೀಗೆ ತಾನು ಮಂತ್ರಿಯಾಗಿದ್ದಷ್ಟು ಕಾಲ 'ನರಹಂತಕ' ಮೋದಿಯ ಆದರ್ಶಗಳನ್ನು ಬರಪೂರಾಗಿ ಜಾರಿಗೊಳಿಸುತ್ತಾ ಬಂದ ನಾಗರಾಜ ಶೆಟ್ಟಿಯ ಭಾರೀ ದೊಡ್ಡ ಸಾಧನೆಯೇನೆಂದರೆ ಬಂಟ್ವಾಳವನ್ನು ಕೋಮು ದ್ವೇಷದ ಅಗ್ನಿ ಕುಂಡವಾಗಿಸಿ, ಅಲ್ಲಿನ ಮುಸ್ಲಿಮರು ಸದಾ ಭಯದ ನೆರಳಲ್ಲಿ ಬದುಕುವಂತೆ ಮಾಡಿದ್ದು. ಕಳೆದ ವರ್ಷ ಮಂಗಳೂರಿನಲ್ಲಿ ಕೋಮು ಗಲಭೆ ಹಬ್ಬುತ್ತಲೇ ಬಿ. ಸಿ. ರೋಡ್‌ನಲ್ಲಿ ಮೋದಿ ಶೆಟ್ಟಿ ಶಿಷ್ಯಂದಿರು ವ್ಯವಸ್ಥಿತವಾಗಿ ಪ್ಲಾನ್ ಮಾಡಿ ಮುಸ್ಲಿಮರ 18 ಅಂಗಡಿಗಳನ್ನು ದೋಚಿದರು. ದುಬೈಗೆ ಕೆಲಸಕ್ಕೆ ಹಿಂತಿರುಗಲು ಬ[...]

ನವರೇನೂ ಅಲ್ಲ. ಅವರು, ಅವರ ಹಿರೀಕರೂ ಅಲ್ಲಿಯೇ ಹುಟ್ಟಿ ಬೆಳೆದವರು. ಅವರ ಮನೆ ಮಾತು ಬ್ಯಾರಿ. ನಮ್ಮೊಡನೆ ಅವರು, ಇಲ್ಲಿನ ಕನ್ನಡದಲ್ಲೇ ಸಹಜವಾಗಿ ಮಾತನಾಡಿದರು. ಸುಮಾರು 60 ರ ಹರೆಯದ ಹಸನ್ ಗೆ ಇಬ್ಬರು ಗಂಡು ಮಕ್ಕಳು, ಐವರು ಹೆಣ್ಣುಮಕ್ಕಳು. ಅವರಲ್ಲಿ ಇಬ್ಬರಿಗೆ ಮದುವೆಯಾಗಿದೆ. ಹಿರಿಯ ಮಗ, ಮಸ್ಕತ್‌ನಲ್ಲಿ ಡ್ರೈವರ್ ಆಗಿದ್ದಾನೆ. ಸ್ವತಃ ಅವರೂ ತಮ್ಮ ಪ್ರಾಯಕಾಲದಲ್ಲಿ ಉದ್ಯೋಗ ಮಾಡಿದವರೆ. ಹಲವು ಗಳ ಕಾಲ, ಅವರು ಮುಂಬಯಿಯಲ್ಲಿ ನೆಲೆಸಿದ್ದು, ಅಲ್ಲಿ ಅನೇಕ ಕಂಪನಿಗಳಲ್ಲಿ ಮೆನ್, ಡ್ರೈವರ್ ಮುಂತಾದ ಕೆಲಸಗಳನ್ನು ಮಾಡಿದ್ದರು. ಕಳೆದ ಶತಮಾನದ 0 ರ ದಶಕಗಳಲ್ಲಿ ಹಸನ್ ಬೇಬಿನಂದ ಎಂದೇ ಹೆಸರಾಗಿದ್ದ ಹಿಂದಿ ಚಲನಚಿತ್ರ ನಂದಾ ಅವರ ಫಿಯೆಟ್ ಕಾರಿನ ಡ್ರೈವರ್ ಕೂಡ ಆಗಿದ್ದರಂತೆ. ಕಳೆದ 15 ಗಳಿಂದ ಅವರು ಊರಿನಲ್ಲೇ ವಾಸವಾಗಿದ್ದು ಹಣ್ಣಿನ ಅಂಗಡಿ ನಡೆಸುತ್ತಿದ್ದಾರೆ; ಡಿಗೆ ಸಮೀಪವೇ ಅವರ ಮನೆ ಇದೆ. ಹಸನ್ ಆಲಿ, ಜಲಾಲುದ್ದೀನ್ ಇವು ಮುಸ್ಲಿಮ್ ಹೆಸರುಗಳಲ್ಲ; ಅವು ಊರು, ಮನೆ, ಕುಟುಂಬ, ಉದ್ಯೋಗ ತಾದ ಜೀವನ ವಿವರಗಳಲ್ಲಿ ಮಾತ್ರ ಮೈದಳೆಯಬಹುದಾದ ಜೀವಂತ ಹೆಸರುಗಳು ಎಂದು ಸೂಚಿಸಲು ಇಷ್ಟು ವಿವರಗಳು ಸಾಕೋ?

ಲಾಜಿ ಮೆಂಡನ್ ಮತ್ತು ಅವರ ಅನುಯಾಯಿಗಳಿಗೆ ಚೂರಾದರೂ ಸೆನ್ಸ್ ಇದ್ದಿದ್ದರೆ, ಪೇಟೆಯಲ್ಲಿ ಅಂಗಡಿ ಹಾಕಿಕೊಂಡು ವ್ಯವಹಾರ ಮಾಡುವ ಒಬ್ಬ ಇನ್ನೊಂದು ಮತದವರನ್ನು, ಅದು ಬಹುಸಂಖ್ಯಾತ ಮತದವರನ್ನು ರಣ ಅವಮಾನಿಸುವುದಿಲ್ಲ ಎಂಬುದು ಗೊತ್ತಿರುತ್ತಿತ್ತು. ಆದರೆ ಮೆಂಡನ್ ರಾಜಕೀಯ ವೇಹಸನ್ ಆಲಿಯಂತಹವರ ವ್ಯಕ್ತಿತ್ವವನ್ನು ಅಲ್ಲಗಳೆಯುವುದಾಗಿದೆ. ಮರನ್ನು ಅವರ ಜೀವನ ಸಂದರ್ಭಗಳಿಂದ, ಅಂದರೆ ಊರು, ಮನೆ, ದ, ಉದ್ಯೋಗ, ಸುಖ-ಕಷ್ಟ ಮುಂತಾದ ವಿವರಗಳಿಂದ ಬೇರ್ಪಡಿಸಿದರೆ ಅವರನ್ನು ಅಮೂರ್ತಗೊಳಿಸಲು ಸಾಧ್ಯ; ಸಾರಾಸಗಟಾಗಿ ಆ ಇಡೀ ದಾಯವನ್ನು ಭಯೋತ್ಪಾದಕರು ಮತ್ತು ದೇಶದ್ರೋಹಿಗಳು ಎಂಬಂತೆ ಚಿತ್ರಿಸಲು ಆಗ ಅವರನ್ನು ದ್ವೇಷಿಸುವುದೂ ಸುಲಭ; ಕೊಲ್ಲುವುದೂ ಸುಲಭ.

ಬ್ಬಿಲ ಪೇಟೆಯಲ್ಲಿ ಹಸನ್ ಆಲಿಯವರ ಹಣ್ಣಿನ ಅಂಗಡಿ ಇರುವುದು ಹೋಟೆಲು ಪಕ್ಕದಲ್ಲಿ. ಅಷ್ಟೇ ಸಹಜವಾಗಿ, ಅಲ್ಲಿ ಎಕ್ಸ್‌ಪ್ರೆಸ್ ಬಸ್‌ಗಳು ಸ್ಟ್ಯಾಂಡಿನ ಎದುರು ನಿಲ್ಲಿಸಿರುವ ಎಲ್ಲರೂ ದೇವಸ್ಥಾನದ ಬೃಹತ್ ಕಟ್‌ಔಟ್ ಪದಲ್ಲೇ ಮೂಳೂರಿನ ಸೈಯದ್ ಅರಬೀವಲಿಯುಲ್ಲಾಹ ದರ್ಗಾ ಶರೀಫ್‌ನ ಸ್ ಝಿಯಾರತ್‌ಗೆ ನಿಮ್ಮನ್ನು ಸ್ವಾಗತಿಸುವ ಬ್ಯಾನರ್ ಕೂಡ ಇದೆ. ಈ ಳ್ವಿಗೆ ಕಿಚ್ಚುಹಚ್ಚದೆ ಲಾಲಾಜಿ ಮೆಂಡನ್‌ರ ರಾಜಕೀಯದ ಬೇಳೆ ಬೇಯುವುದಿಲ್ಲ. ಹೋಟೆಲುಗಳನ್ನು ನಡೆಸಿಕೊಂಡು ಸಂಸಾರ ನಡೆಸುವವರು ಜೀವಂತ ಳು; ದರ್ಗಾ ದೇವಾಲಯಗಳಿಗೆ ನಡೆದುಕೊಳ್ಳುವವರೂ ಜೀವಂತ ವ್ಯಕ್ತಿಗಳು. ಲಾಲಾಜಿ ಮೆಂಡನ್ ಮತ್ತು ಅವರ ಬಜೆಪಿಗೆ ಅವರೆಲ್ಲರೂ ಅಮೂರ್ತಗಳು; ಧರ್ಮಗಳನ್ನು ಮಾತ್ರ ಪ್ರತಿನಿಧಿಸುವವರು. ನರಮೇಧವೇ ಈ ರಾಜಕೀಯದ ಮು ಮಜಲು.

■ ಜಿ. ರಾಜಶೇಖರ

ನ ನಿಲ್ದಾಣಕ್ಕೆ ಓಮ್ನಿ ಕಾರಲ್ಲಿ ಹೊರಟಿದ್ದ ಮುಸ್ಲಿಂ ಯುವಕನೋರ್ವನ ಸೇರಿದಂತೆ ಮುಸ್ಲಿಮರ ಮೇಲೆ ವ್ಯಾಪಕ ಹಲ್ಲೆ, ದರೋಡೆಗಳು ಆದವು. ಈ ಸಂದರ್ಭದಲ್ಲಿ ನಷ್ಟದ ಪೂರಾ ಹಾನಿಯ ಅಂದಾಜು ಲೆಕ್ಕ ಮಾಡಲು ಮಂತ್ರಿ ಎಂ.ಪಿ. ಪ್ರಕಾಶ್ ಬಂದಾಗ ಈ ನಾಗರಾಜ ಶೆಟ್ಟಿಯು ತನ್ನ ವಾದ ಬಂಟ್ವಾಳದ ಮುಸ್ಲಿಂ ಸಂತ್ರಸ್ತರು ಅವರ ಕಣ್ಣಿಗೆ ಬೀಳದಂತೆ ನ ಪ್ರದರ್ಶಿಸಿದ್ದ. ಗಲಭೆಯಲ್ಲಿ ಕೊಲೆಯಾದ ಸುಳ್ಯದ ಮೌಲ್ವಿ ಮತ್ತು ತ್ರದಲ್ಲಿ ವಾಸಿಸುವ, ಗಲಭೆಗೆ ತುತ್ತಾದ ಮುಸ್ಲಿಂರ ಮನೆಗೆ ಹೋಗದ ಆ ಗಲಭೆಗಳಿಗೆ ಕಾರಣರಾದ, ಕೊಲೆಗಳನ್ನು ಮಾಡಿದ ಚಡ್ಡಿ ಜನರನ್ನೇ ದ ಜೈಲಿನಲ್ಲಿ ಭೇಟಿಯಾಗಿ ಅವರಿಗೆ ಸಾಂತ್ವನ ಹೇಳಿದ್ದ!

ಂತಹ ಮನುಷ್ಯ ಅದ್ಯಾವ ಮುಖ ಇಟ್ಟುಕೊಂಡು ಮತ್ತೆ ಬಂಟ್ವಾಳದಲ್ಲಿ ಎದುರು ನಿಂತು ಓಟು ಕೇಳುತ್ತಾನೋ? ಬಂಟ್ವಾಳದಲ್ಲಿ ಸದಾ ಮುಸ್ಲಿಮರ ಹಿಂದೂಗಳನ್ನು ಎತ್ತಿಕಟ್ಟುತ್ತಾ ಉರಿವ ಬೆಂಕಿಯಲ್ಲಿ ಗಳ ಹಿರಿಯುವ ಈ ತಂತ್ರ ಈ ಬಾರಿಯ ಚುನಾವಣೆಯಲ್ಲಿ ಕೆಲಸಕ್ಕೆ ಬರುತ್ತದೆಯಾ ದನ್ನು ಕಾದು ನೋಡಬೇಕಷ್ಟೆ.

ರಡು ತಿಂಗಳ ಹಿಂದೆಯಷ್ಟೇ ದನದ ಮಾಂಸವನ್ನು ಚೀಲದಲ್ಲಿ ತ್ತಿದ್ದ ಎಂಬ ಸಣ್ಣ ನೆಪಕ್ಕೇ ಮುಸ್ಲಿಂ ಹುಡುಗನೊಬ್ಬನನ್ನು ಭಜರಂಗಿ ರಿಕ್ಷಾ ಓರ್ವ ಹಿಡಿದು ನಿಲ್ಲಿಸಿ ಹಲ್ಲೆ ನಡೆಸಿದ್ದ. ಇದೇ ಆನಂತರದ ಬಿ.ಸಿ. ನಲ್ಲಿ ಇತ್ತಂಡಗಳ ನಡುವೆ ಘರ್ಷಣೆಗೆ ಕಾರಣವಾಗಿತ್ತು. ಆದರೆ ಸರ ಸಕಾಲಿಕ ಕಾರ್ಯಾಚರಣೆಯಿಂದ ಇದು ಹೆಚ್ಚು ಬೆಳೆಯದೇ ತ್ರಣಕ್ಕೆ ಬಂದಿತ್ತು. ಘರ್ಷಣೆ ಸುದ್ದಿ ತಿಳಿದದ್ದೇ ಎಲ್ಲೋ ಇದ್ದ ನಾಗರಾಜ ಕ್ಷಣಾರ್ಧದಲ್ಲಿ ದೌಡಾಯಿಸಿ ಬಂದು ಗಲಾಟೆ ಮಾಡುವುದಕ್ಕೆ ಂಗಿಗಳಿಗೆ ಪ್ರೋತ್ಸಾಹ ನೀಡುವಂತೆ ವರ್ತಿಸಿದ್ದ. ಗರಂ ಆದ ಯವರೇ ಆತನನ್ನು ಎಲ್ಲರೆದುರೇ ತರಾಟೆಗೆ ತೆಗೆದುಕೊಂಡು ಳದಿಂದಲೇ ಗೆಟ್‌ಔಟ್ ಮಾಡಿದ್ದರು. ಈ ಒಂದು ಮುಖಭಂಗದಿಂದ ದಿಯುತ್ತಲೇ ಇದ್ದ.

ದಿನಗಳಲ್ಲೇ ಶೆಟ್ಟಿಯ ಬಿ.ಸಿ. ರೋಡಿನ ಭಜರಂಗಿ ಚೇಲಾ ರವಿರಾಜನ ಎದುರು ಎರಡು ದನದ ತಲೆಗಳು ಪ್ರತ್ಯಕ್ಷವಾಗಿದ್ದವು. ಈ ಪ್ರಕರಣಕ್ಕೆ ಧಪಟ್ಟಂತೆ ನೈಜ ಆರೋಪಿಗಳನ್ನು ಬಂಧಿಸುವಲ್ಲಿ ವಿಫಲರಾದ ಸರು ಇತ್ತೀಚೆಗಷ್ಟೇ ಅಮಾಯಕ ದಾರಿಹೋಕನಾದ ಇಕ್ಬಾಲ್ ತನನ್ನು ಬಂಧಿಸಿ ಆತನನ್ನು ವಿಚಾರಿಸದೇ ಫಿಕ್ಸ್ ಮಾಡಿ ಕೈ ಕೊಂಡರು.

ಗರಾಜ ಶೆಟ್ಟಿಯ ಬೋದಿರಾಜ್‌ನನ್ನು ಬಂಟ್ವಾಳದಲ್ಲಿ ಜಾರಿಗೊಳಿಸುವ ರ್ಮಸೆಂದರೆ ಬಸ್ ಏಜೆಂಟ್ ಸುರೇಂದ್ರ. ನಾಗರಾಜ ಶೆಟ್ಟಿಯ ಕೃಪೆಯಿಂದ ಠಾಣೆಯಲ್ಲಿ ಓಡಾಡುವ ಸುರೇಂದ್ರನ ಅಕೌಂಟ್‌ನಲ್ಲಿ 23 ಕ್ರಿಮಿನಲ್ ಸಿವೆ. ಈ ಸುರೇಂದ್ರನಿಗೂ ಬಂಟ್ವಾಳದ ಪೊಲೀಸ್ ಇನ್ಸ್‌ಪೆಕ್ಟರ್ ನವರಿಗೂ ಜಿಗ್ರೀ ದೋಸ್ತಿ ಅಂದಮೇಲೆ ಕೇಳಬೇಕೆ? ಕಂಟಕ ನಾಗರಾಜ ಂದ ಬಂಟ್ವಾಳವನ್ನು ರಕ್ಷಿಸುವವರ್‍ಯಾರು?

■ ವರದಿಗಾರ

‘ನಮ್ಮನ್ನ ರೇಬಿಸ್ ಅಂದವರನ್ನ ಕಚ್ಚದೆ ಬಿಡುವುದಿಲ್ಲ!’

ಥೂತ್ತೇರಿ

■ ಯಾಹೂ

ಹಲ್ಲುಪುದಿ ಜಾಹೀರಾತುಗಾರನಂತೆ ಕಂಗೊಳಿಸುವ ನಮ್ಮ ಸದಾನಂದಗೌಡರನ್ನು ಮಾತನಾಡಿಸಿ ಮನಸ್ಸಿನ ಬೇಸರ ಕಳೆದುಕೊಳ್ಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ಫೋನ್ ರಿಂಗಾಯ್ತು.

“ನಮಸ್ಕಾರ ಸದಾನಂದ ಗೌಡ್ರಿಗೆ, ನಾನು ಪತ್ರಕರ್ತ ಯಾಹೂ.”

“ಏನೂ ಯಾಹೂ ಅವರೆ, ಅಪರೂಪಕ್ಕೆ ಫೋನ್ ಮಾಡಿದ್ದೀರಲ್ಲಾ?”

“ತಮ್ಮತ್ರ ಮಾತಾಡಬೇಕು ಅನ್ನಸ್ತು, ಮಾಡಿದೆ ಸಾರ್.”

“ಮಾತಾಡಿ, ನಾನೀಗ ಬಿಡುವಾಗಿದ್ದೇನೆ.”

“ಏನ್ ಸಾರ್ ಚುನಾವಣೆ ನವೆಂಬರ್‌ಗೆ ಹೋಗಂಗಿದೆ?”

“ಇದೆ ಏನು, ಹೋಗಿಯಾಯ್ತು. ಈಗ ಸದ್ಯದಲ್ಲಿ ಚುನಾವಣೆ ನಡೆದರೆ ಬಜೆಪಿಗೆ ಸ್ಪಷ್ಟ ಬಹುಮತ ಬರುವುದು ಗ್ಯಾರಂಟಿ ಅಂತ ಕಾಂಗ್ರೆಸ್ಸಿನವರಿಗೆ ಗೊತ್ತಾದ ಕೂಡಲೇ ಕ್ಷೇತ್ರ ವಿಂಗಡಣೆ ಅಸ್ತ್ರವನ್ನು ತೆಕ್ಕೊಂಡು ಹೊರಟಿದ್ದಾರೆ.”

“ಕ್ಷೇತ್ರ ವಿಂಗಡಣೆ ಅಸ್ತ್ರದಿಂದ ನಿಮಗೇನಾದ್ರು ತೊಂದ್ರೆನೆ?”

“ನಮಗೆಂತ ತೊಂದರೆ? ನಮಗೆ ಯಾವುದೂ ತೊಂದರೆ ಅನ್ನಿಸುವುದಿಲ್ಲ.”

“ನಿಜ ಸಾರ್, ಯಾವುದಾದ್ರು ಒಂದು ಅಮಲು ತಲೆಲಿದ್ರೆ ಅವರಿಗೆ ಯಾವುದೂ ತೊಂದ್ರೆಯಂಗೆ ಕಾಣಲ್ಲ.”

“ನಮಗೆ ಯಂತ ಅಮಲಿಲ್ಲ. ಅಮಲೇನಿದ್ದರೂ ಅನ್ಯ ಪಾರ್ಟಿಯವರಿಗೆ.”

“ಬೇರೆ ಪಾರ್ಟಿಯವರ ಅಮಲೆ ಬೇರೆ, ನಿಮ್ಮದೆ ಬೇರೆ ಸಾರ್.”

“ಅದು ಹೇಗೆ, ಹೇಳಿ ನೋಡುವ?”

“ನೋಡಿ, ಜೆಡಿಎಸ್‌ನ ದೇವೇಗೌಡರಿಗೆ ಪುತ್ರ ವ್ಯಾಮೋಹದ ಅಮಲು. ಅದು ಮತೀಯವಾದದಷ್ಟು ಅಪಾಯಕಾರಿಯಲ್ಲ. ಇನ್ನು ಕಾಂಗ್ರೆಸ್ಸಿನವರಿಗೆ ಹೇಗಾದ್ರು ಮಾಡಿ ಪವರ್‌ಗೆ ಬರಬೇಕು ಅನ್ನೊ ಅಮಲು. ಅದೇ ನೀವು ನೋಡಿ, ನಿಮ್ಮ ಹುಟ್ಟನಿಂದಲೇ ಒಂದು ಅಮಲಿಗೆ ತುತ್ತಾಗಿರಂಗೆ ವರ್ತನೆ ಮಾಡ್ತಯಿದ್ದಿರಿ. ಅದು ಮತಾಂಧತೆ ಅಮಲು. ಇಂತ ಅಮಲಿಗೆ ಸಿಕ್ಕಿದ ಕೆಲ ಮುಸ್ಲಿಮರು ಪ್ರಪಂಚದ ಸಮಸ್ಯೆಯಾಗಿದ್ದಾರೆ, ನೀವು ನಮ್ಮ ದೇಶದ ಸಮಸ್ಯೆಯಾಗ್ತಾಯಿದ್ದಿರಿ.”

“ನಾವು ಧರ್ಮ ರಕ್ಷಣೆ, ದೇಶ ರಕ್ಷಣೆಗೆ ಹೊರಟವರು. ನಾವು ಹೇಗೆ ದೇಶದ ಸಮಸ್ಯೆಯಾಗ್ತಿವಿ?”

“ನಿಮ್ಮ ವಿಷಯದಲ್ಲಿ ಅನಂತಮೂರ್ತಿ ಏನಂದವ್ರುರೆ ಗೊತ್ತಾ ಸಾರ್?”

“ರೇಬಿಸ್ ಅಂತ ಹೇಳಿದ್ದು ಹೌದಲ್ಲವಾ?”

“ಅಲ್ಲ ಸಾರ್, ಅಲ್ಪಸಂಖ್ಯಾತರು ಮತಾಂಧರಾದ್ರೆ ಅವ್ರುರೇ ನಾಶ ಆಗ್ತರೆ. ಹಿಂದೂಗಳಾದ್ರೆ ದೇಶವೇ ನಾಶ ಆಗುತ್ತೆ ಅಂದವ್ರುರೆ.”

“ಅದು ಹೇಗೆ ಆಗ್ತದೆ? ಯಾವುದು ಬಲಿಷ್ಠವಾಗಿ ದೊಡ್ಡದಾಗಿದೆಯೋ ಅದು ಸಣ್ಣದನ್ನ ಅರಗಿಸಿಕೊಳ್ತದೆ. ಆ ವಿಷಯದಲ್ಲಿ ನಮಗೆ ಜಯವುಂಟು.”

“ನೋಡಿ, ಇದನ್ನೆ ಅನಂತಮೂರ್ತಿ ರೇಬಿಸ್ ರೋಗ ಅಂದಿರೋದು.”

“ಅದಕ್ಕೆ ನಾನು ಅವರಿಗೆ ಸರಿಯಾದ ಉತ್ತರವನ್ನು ಕೊಟ್ಟಾಗಿದೆ.”

“ನೀವು ಅನಂತಮೂರ್ತಿಗೆ ಉತ್ತರ ಕೊಡೋ ಮುನ್ನ ರೇಬಿಸ್ ಅಂದ್ರೇನು ಅಂತ ಅರ್ಥ ಮಾಡಿಕೊಬೇಕಾಗಿತ್ತು ಸಾರ್.”

“ನೋಡಿ, ನಮಗೆ ಎಲ್ಲ ಗೊತ್ತಾಗ್ತದೆ. ಅರ್ಥ ಮಾಡಿಸುವ ತೊಂದರೆಯನ್ನು ನೀವು ತೆಕ್ಕೊಳ್ಳುವುದು ಬೇಡ. ನಮ್ಮನ್ನು ರೇಬಿಸ್ ಅಂದವರನ್ನು ನಾವು ಹುಚ್ಚುನಾಯಿ ಅಂದೇ ಕರೆಯುತ್ತೇವೆ.”

“ನೋಡಿ ಸಾರ್, ರೇಬಿಸ್ ಹುಚ್ಚು ನಾಯಿಯಲ್ಲಿ ಇರುತ್ತೆ, ಹುಚ್ಚು ನಾಯಿ ಬೇರೆ, ರೇಬಿಸ್ ಬೇರೆ ಅಲ್ಲ. ಅನಂತಮೂರ್ತಿಗಳು ನಿಮ್ಮನ್ನ ಈಗಾಗ್ಲೆ ರೇಬಿಸ್ ಅಂದು ಬಹಳ ದಿನಗಳಾಗಿದೆ. ಆಗ ಯಾರೂ ಮಾತಾಡಿಲ್ಲ, ಅದನ್ನ ಒಪ್ಪಿಕೊಂಡಾಗಿದೆ. ಈಗ ನೀವು ಪುನಃ ಯಾಕೆ ಹಾಗಂದ್ರಿ?”

“ನೋಡಿ, ಕೆಲವು ಮಾತುಗಳು ಪ್ರತಿಕ್ರಿಯೆಗಾಗಿ ಕಾಯುತ್ತ ಕುಳಿತ ಸಂದರ್ಭವುಂಟು, ಆ ಸಂದರ್ಭ ಈಗ ಬಂದಿತ್ತು, ನಾನು ಹಾಗೆ ಹೇಳಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತರು ಈ ದೇಶದ ಒಂದು ದೊಡ್ಡ ಪಾರ್ಟಿಯ ಜನರನ್ನು ರೇಬಿಸ್ ಅಂತ ಹೇಳುವುದು ಎಷ್ಟು ಸರಿ?”

“ನೋಡಿ ಸಾರ್, ಅನಂತಮೂರ್ತಿ ನಮ್ಮ ನಡುವೆ ಇರೋ ಸಾಂಸ್ಕೃತಿಕ ಚಿಂತಕರು, ಅಂದ್ರೆ ಸಮಾಜ ವಿಜ್ಞಾನಿ. ಅವ್ರುರು ಆಗಾಗ್ಗೆ ಸಾಮಾಜಿಕ ಕಾಯಿಲೆ ಬಗ್ಗೆ ಅಧ್ಯಯನ ನಡೆಸಿ ತಮ್ಮ ಅಭಿಪ್ರಾಯ ಹೇಳ್ತರೆ. ಅದೇ ರೀತಿ, ನಿಮ್ಮಲ್ಲಿ ಕೆಲವರು ಮಾತನಾಡೋದನ್ನ ನೋಡಿ, ಅವರ ಜೊಲ್ಲನ್ನ ಪರೀಕ್ಷೆ ಮಾಡಿ, ನಿಮಗೆ ರೇಬಿಸ್ ತಗುಲಿದೆ ಅಂದವ್ರುರೆ. ಕೂಡಲೇ ನೀವು ಇಂಜಕ್ಷನ್ ತಗೊಂಡು ಉಷಾರು ಮಾಡಿಕೊಬೇಕೊ, ಹಾಗೆ ಅಂದವರನ್ನೆ ಹುಚ್ಚುನಾಯಿ ಅಂದು ನಿಮ್ಮನ್ನ ನೀವೇ ಯಾಕೆ ಬೈಕೊಬೇಕೊ, ಹೇಳಿ?”

“ನಮ್ಮನ್ನ ನಾವೆ ಎಲ್ಲಿ ಬೈದುಕೊಂಡದ್ದು?”

“ಪುನಃ ಅದನ್ನೇ ಹೇಳ್ತಿರಲ್ಲ ಸಾರ್? ನೀವು ಕುಂಬಳೆ ಸುಂದರರಾಯರ ಥರ ಹೇಳಿದ್ದನ್ನೇ ಹೇಳಬೇಡಿ.”

“ಮಿಸ್ಟರ್ ಯಾಹೂ ಅವರೆ, ನೀವು ನಮ್ಮ ಬಳಿ ವಾದ ಮಾಡುವುದು ಬೇಡ. ನಮ್ಮನ್ನ ರೇಬಿಸ್ ಅಂದವರನ್ನ ನಾವು ಕಚ್ಚದೆ ಬಿಡುವುದಿಲ್ಲ!”

“ಅಂತೂ, ರೇಬಿಸ್ ರೋಗದ ನಾಯಿ ಅಂತ ನೀವೇ ಒಪ್ಪಿಗೊಂಡ್ರಿ.”

“ಸುಮ್ಮನೆ ಮಲಗಿದ್ದ ನಾಯಿಯ ಬಾಲ ತುಳಿದರೆ ಮತ್ತೇಂತ ಮಾಡುವುದು?”

“ರೇಬಿಸ್ ನಾಯಿ ಎಂದೂ ಮಲಗಲ್ಲ ಸಾರ್. ಅದು ಕಚ್ಚುತಾ ಹೋಗುತ್ತೆ. ಕಚ್ಚಿಸಿಕೊಂಡೋರು ಸಾಯ್ತರೆ. ಕೊನೆಗೊಂದು ದಿನ ಅದೂ ಸಾಯುತ್ತೆ. ಇದು ಪ್ರಪಂಚದ ಎಲ್ಲಾ ಕಡೆ ಹಬ್ಬಿರೊ ಮತಾಂಧರನ್ನು ಕುರಿತು ಅನಂತಮೂರ್ತಿ ಹೇಳಿರೊ ಮಾತು. ನೀವು ಕಚ್ಚೊ ಹಟಾನೆ ತೊಟ್ಟುಕೊಂಡ್ರೆ ನಾವು ಇಂಜಕ್ಷನ್‌ಗೆ ರೆಡಿ ಮಾಡಿಕೊಬೇಕಾಗುತ್ತೆ. ನಾಯಿಕಡದ್ರೆ ಏಳು ಇಂಜಕ್ಷನ್ ತಗೋಬೇಕಂತೆ. ನೀವು ಕಡಿದ್ರೆ ಎಷ್ಟು ಇಂಜಕ್ಷನ್ ಅಂತ ಗೊತ್ತಿಲ್ಲ, ಹೇಳ್ತಿರ ಸಾರ್?”

“ಹ್ಹಹ್ಹಹ್ಹ ಹೆದರುವುದು ಬೇಡ ಯಾಹು ಅವರೆ. ನಾವು ನಿಮ್ಮಂತವರನ್ನು ಕಚ್ಚುವುದಿಲ್ಲ.”

“ನಮ್ಮಂತವರು ಅಂದ್ರೆ?”

“ನಮ್ಮ ಹಿತೈಷಿಗಳನ್ನ.”

“ಅನಂತಮೂರ್ತಿ ಕೂಡ ವಾಜಪೇಯಿ ಹಿತೈಷಿಗಳು ಸಾರ್!”

“ಹಾಗಾದರೆ, ವಾಜಪೇಯಿ ಬದುಕಿರುವವರೆಗೂ ನಾವು ಅನಂತಮೂರ್ತಿಯನ್ನು ಕಚ್ಚುವುದಿಲ್ಲ. ಆನಂತರ ನೋಡಿಕೊಳ್ತೆವೆ.”

“ಥೂತ್ತೇರಿ!!!”





ಬಕೆಟ್ ಹಿಡಿದ ಕ್ರಿಕೆಟಿಗರು

ನಮ್ಮ ಕ್ರಿಕೆಟರ್‌ಗಳಿಗೆ ತಮ್ಮ ದೇಶಪ್ರೇಮವನ್ನು ಸಾಬೀತುಪಡಿಸುವ ಕಷ್ಟವೇ ಇಲ್ಲ. ಅದೀಗ ಇನ್ನೊಂದು ಹಂತಕ್ಕೆ ಜಾರಿದೆ. ಅವರೀಗ ತಮ್ಮ ಕ್ರಿಕೆಟ್ ಆಟದ ಸ್ಫೂರ್ತಿಗೂ ಎಳ್ಳುನೀರು ಬಿಡುತ್ತಿದ್ದಾರೆ. ಅವರ ಲಾಯಲ್ಟಿ ಈಗ ದುಡ್ಡಿಗೆ ಮಾತ್ರ.

ಕ್ರಿಕೆಟ್ ಜಗತ್ತು ನಿಬ್ಬೆರಗಾಗಿದೆ.

ಆಟಗಾರರು ಥ್ರಿಲ್ ಆಗಿಹೋಗಿದ್ದಾರೆ.

ಕ್ರಿಕೆಟ್ ಅಭಿಮಾನಿಗಳಂತೂ ತಮ್ಮ ನೆಚ್ಚಿನ ಕ್ರಿಕೆಟರ್‌ಗೆ ಸಿಕ್ಕ ದುಡ್ಡು ತಮಗೆ ಸಿಕ್ಕಿತೇನೊ ಎಂಬಂತೆ ಖುಷ್ ಖುಷಿಯಾಗಿದ್ದಾರೆ. ಇವತ್ತಿನ ಕ್ರಿಕೆಟ್ ಮಾರಾಟದಲ್ಲಿ ಅತೀ ಪೆದ್ದನೂ, ಅವಿವೇಕಿಯೂ ಇವನೆ... ಅಂದರೆ ಕ್ರಿಕೆಟ್ ಫ್ಯಾನ್!

ಅದು ಹೇಗೆಂದರೆ ದೋನಿ ಜೇಬಿಗಿಳಿಸುವ 6 ಕೋಟಿಯಾಗಲಿ, ಮಲ್ಯ ಖರ್ಚು ಮಾಡುವ 15 ಕೋಟಿಯಾಗಲಿ, ಟಿವಿಗಳಲ್ಲಿ ಬರುವ ಕಂಪನಿ ಜಾಹೀರಾತುಗಳ ಖರ್ಚಿರಲಿ.... ಇವೆಲ್ಲಾ ದುಡ್ಡು ಹೊರಟುಬರುವುದೇ ಕ್ರಿಕೆಟ್ ಫ್ಯಾನ್‌ಗಳ ಜೇಬುಗಳಿಂದ.



ಸುಬ್ರತೋ ರಾಯ್

ಹತ್ತಾರು ಕ್ರಿಕೆಟರ್‌ಗಳು, ನೂರಾರು ಕಂಪನಿಗಳು, ಜೊತೆಗೂಡಿ ಲಕ್ಷಾಂತರ ಅಭಿಮಾನಿಗಳಿಂದ ಕೋಟ್ಯಂತರ ರೂಪಾಯಿಗಳನ್ನು ಹಿಂಡಿ ತೆಗೆಯುವ ದಂಧೆಯೇ ಮೊನ್ನೆ ನಡೆದ ಹರಾಜಿನ ತಳಹದಿ.

ಇದೊಂದು ರೀತಿ ಪಿಕ್ ಪ್ಯಾಕೆಟ್ ದಂಧೆ ಇದ್ದಂತೆ. ಆದರೆ ಇಲ್ಲಿ ಎಲ್ಲವೂ ಕಾನೂನುಬದ್ಧ. ಯಾರು ಎಷ್ಟು ಚುರುಕಾಗಿ ಕತ್ತರಿ ಆಡಿಸುತ್ತಾನೋ ಅವನೇ ಚಾಲಾಕಿ, ಯಶಸ್ವಿ ಮನುಷ್ಯ ಎನಿಸಿಕೊಳ್ಳುವ ಕಾಲವಿದು.

ಆದರೆ ದುಡ್ಡು, ಕೀರ್ತಿ, ಪ್ರಶಸ್ತಿ, recognition... ಹೀಗೆ ಏನು ಸಿಗದೇ ಹೋದರೂ ಬಳಸಲ್ಪಡುವ ಗುಂಪೆಂದರೆ ಅದು ಕ್ರಿಕೆಟ್ ಅಭಿಮಾನಿಗಳದ್ದು.

ಇವರನ್ನು ನಿರಂತರವಾಗಿ ಕಿಸೆಗಳ್ಳತನಕ್ಕೆ ಈಡಾಗುವ ಮಂದಿ ಎಂದರೂ ಅಡ್ಡಿಯಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಅಂತದೇ ಒಂದು ಫುಲ್‌ಟೈಂ ದಂಧೆ ಅಷ್ಟೆ.

ಇಂಡಿಯನ್ ಕ್ರಿಕೆಟ್‌ಗೆ ಈಗ ಪೂರ್ತಿ ವೃತ್ತಿಪರತೆ ಅರ್ಥಾತ್ ಹಣವೇ ಅಳತೆಗೋಲೆಂಬ ಧೋರಣೆ ಬಂದುಬಿಟ್ಟಿದೆ. ಇದೇ ಟ್ರೆಂಡ್ ಯುರೋಪಿಯನ್ ಫುಟ್‌ಬಾಲ್, ಅಮೆರಿಕದಲ್ಲಿ ಬಾಸ್ಕೆಟ್‌ಬಾಲ್, ಬೇಸ್‌ಬಾಲ್, ರಗ್ಬಿ ಆಟಗಳಲ್ಲಿ ಕಾಣಿಸಿಕೊಂಡು 50 ವರ್ಷಕ್ಕೂ ಮೇಲಾಗಿದೆ.

ದೇಶ ಬಿಡು, ಕ್ರಿಕೆಟ್ಟೂ ಬಿಡು ದುಡ್ಡಿಗೆ ಬೆಲೆ ಕೊಡು

ಈ ಕ್ರಿಕೆಟ್ ಫ್ಯಾನ್‌ಗಳು ಎಂಥ ಮುಗ್ಧ (ಮುಠ್ಠಾಳ)ರೆಂದರೆ ದೇಶದ ಗಡಿ ಕಾಯುವ ಯೋಧನೂ ಈ ಕ್ರಿಕೆಟರ್‌ಗಳೂ ಒಂದೇ ಎಂದು ನಂಬುತ್ತಾರೆ.

ಈ ಸಚಿನ್, ದ್ರಾವಿಡ್‌ಗಳು ನಾನು 'ಭಾರತಕ್ಕಾಗಿ ಆಡುತ್ತೇನೆ' ಎನ್ನುತ್ತಲೇ ಅಮೆರಿಕನ್ ಕೋಲಾ ಕುಡಿಯಿರಿ ಎಂದು ರೆಕಮೆಂಡ್ ಮಾಡುವ ವಿಪರ್ಯಾಸವನ್ನವರು ಗಮನಿಸುವುದೇ ಇಲ್ಲ. ಬರೀ ಜಾಹೀರಾತುಗಳಿಂದಲೇ ನೂರಾರು ಕೋಟಿ ಬಾಚಿಕೊಳ್ಳುವ ಸಚಿನ್ ಒಂದು ವಿದೇಶಿ ಕಾರ್ ತರಿಸಿಕೊಂಡಾಗ ತೆರಿಗೆ ರಿಯಾಯಿತಿ ಕೇಳುವ ಭಿಕ್ಷುಕತನದ ಬಗ್ಗೆಯೂ ಹೇಸಿಗೆ ಪಡುವುದಿಲ್ಲ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಮ್ಮ ಕ್ರಿಕೆಟರ್‌ಗಳಿಗೆ ತಮ್ಮ ದೇಶಪ್ರೇಮವನ್ನು ಸಾಬೀತುಪಡಿಸುವ ಕಷ್ಟವೇ ಇಲ್ಲ, ಅದೀಗ ಇನ್ನೊಂದು ಹಂತಕ್ಕೆ ಜಾರಿದೆ. ಅವರೀಗ ತಮ್ಮ ಕ್ರಿಕೆಟ್ ಆಟದ ಸ್ಫೂರ್ತಿಗೂ ಎಳ್ಳುನೀರು ಬಿಡುತ್ತಿದ್ದಾರೆ. ಅವರ ಲಾಯಲ್ಟಿ ಈಗ ದುಡ್ಡಿಗೆ ಮಾತ್ರ. IPL ಟೂರ್ನಿ ಅದರ ಸಾರಥ್ಯ ವಹಿಸಿದೆ.

ಕಪಿಲ್‌ದೇವ್ ಮಂಗಾ ಆದದ್ದು



ಕಪಿಲ್ ದೇವ್

BCCI ನವರು ಇಂಡಿಯನ್ ಪ್ರೀಮಿಯರ್ ಲೀಗ್ ಅಂತ ತೇಲಿಬಿಟ್ಟದ್ದೇ ಒಂದು ವಿಚಿತ್ರ ಸಂದರ್ಭದಲ್ಲಿ. ಅದು ಸಹರಾ ಗ್ರೂಪಿನ ಕೋಟ್ಯಾಧೀಶ ಸುಬ್ರತೋ ರಾಯ್ ತಲೆಯಲ್ಲಿ ಹುಟ್ಟಿದ್ದ concept. ಜನ ಟೆಸ್ಟ್ ಕ್ರಿಕೆಟ್‌ನಿಂದ ಬೋರಾಗಿ ಒನ್‌ಡೇ ಕ್ರಿಕೆಟ್ ಹಿಂದೆ ಹೊರಟರಲ್ಲ. ಒಂದಿಪ್ಪತ್ತು ವರ್ಷ ಇದೂ ನಡೆಯಿತಾದರೂ ಇಂಥ ಮ್ಯಾಚ್‌ಗಳು ಒಂದೀಡಿ ದಿನ ನಡೆಯುತ್ತಿತ್ತಾದ್ದರಿಂದ ಒನ್‌ಡೇ ಕ್ರಿಕೆಟ್‌ಗೆ ಇನ್ನೂ ವೇಗ, ಥ್ರಿಲ್ ತರಲು ಟ್ವೆಂಟಿ 20 ಮ್ಯಾಚ್ ಪರಿಚಯಿಸಲಾಯಿತು.

ಒಂದು ಸಿನಿಮಾ, ನಾಟಕ, ಫುಟ್‌ಬಾಲ್ ಮ್ಯಾಚ್‌ನಂತೆ ಇದೂ ಕೇವಲ ಮೂರ್ನಾಲ್ಕು ಗಂಟೆಗಳಲ್ಲಿ ಮುಗಿದುಹೋಗುವ ಆಟವಾದ್ದರಿಂದ ಜನ ಹುಚ್ಚೆದ್ದರು. ಒನ್‌ಡೇ ಕ್ರಿಕೆಟ್ಟನ್ನು ಆಸ್ಟ್ರೇಲಿಯಾದ ಟಿವಿ ಧಣಿ ಪ್ಯಾಕರ್ ಪರಿಚಯಿಸಿದಂತೆ ಈ ಟ್ವೆಂಟಿ 20 concept ನ ಹಿಂದೆಯೂ ಹಲ[...]ವಾರು ಪ್ರಯೋಗಗಳಿದ್ದವು. ನ್ಯೂಜಿ[...]ಲ್ಯಾಂಡಿನ ಮಾರ್ಟಿನ್ ಕ್ರೋವ್ 7[...] ಜನರ ಇನ್‌ಡೋರ್ ಕ್ರಿಕೆಟ್ ಆಡಿಸಲು [...]ಯತ್ನಿಸಿದ್ದ. ಇನ್ನೂ ಕೆಲವರು ವೆಸ್ಟ್ ಇಂಡೀಸ್‌ನಲ್ಲಿ ಬೀಚ್ ಕ್ರಿಕೆಟ್ ಆಟ[...] ಜನಪ್ರಿಯಗೊಳಿಸಲು ನೋಡಿದ್ದರು. ಇವೆಲ್ಲಾ ಸರ್ಕಸ್ ಆದಮೇಲೆ 20-20 ಯೇ ಮಜಾ ಆಟ ಅನ್ನಿಸುವ ಹೊತ್ತಿಗೆ ಸಹರಾ ಗ್ರೂಪಿನ ಸುಬ್ರತೋ ರಾಯ್ ಮೇಲೆದ್ದ. ಕಪಿಲ್‌ದೇವ್‌ನನ್ನು ಹಿಡಿದುಕೊಂಡು ದೇಶ ವಿದೇಶಗಳ ಆಟಗಾರರಿಗೆ ಕೋಟಿಗಟ್ಟಲೆ ಹಣ [...]

ಬಿಳಿದಾಳೆ ಈಶ



ಲಲಿತ್ ಮೋದಿ

ಕೊಡುವ ಆಮಿಷ ತೋರಿಸಿ ICL (ಇಂಡಿಯನ್ ಕ್ರಿಕೆಟ್ ಲೀಗ್) ಹುಟ್ಟುಹಾಕಿದ. BCCIಗೆ ಬರೆ ಹಾಕುವಂಥ ಈ ಘಟನೆಗಳು ಕೋರ್ಟಿಗೂ ಹೋಯಿತು. ಆದರೆ ICL ಅನ್ನು ನಿಯಂತ್ರಿಸಲು BCCI ಗೆ ಆಗಲೇ ಇಲ್ಲ. ಇನ್ನು ಮಿಗಿಲಾಗಿ ಭಾರಿ ಹೆಸರಾಂತ ಹಾಲಿ, ಮಾಜಿ ಕ್ರಿಕೆಟರ್‌ಗಳೆಲ್ಲಾ ICL ಸೇರ[...]ತೊಡಗಿದರು. ICL ಟೂರ್ನಿಯ ಮ್ಯಾಚ್‌ಗಳಿಗೆ ಸ್ಟೇಡಿಯಂಗಳನ್ನು ಬಿಟ್ಟುಕೊಡುವಂತೆ ಕೋರ್ಟ್ ಸಹ BCCI ಗೆ ಆದೇಶ ನೀಡಿತ್ತು.

ಆ ಹಂತದಲ್ಲಿ ICLಗೆ ಲಗಾಮು ಹಾಕಲು BCCI ಗೆ ಉಳಿದಿದ್ದು ಒಂದೇ ದಾರಿ. ಅದು ತಾನೇ ಒಂದು ದೊಡ್ಡ ಲೆವೆಲ್‌ನ ಟ್ವೆಂಟಿ 20 ಟೂರ್ನಿಯನ್ನು ರೆಗ್ಯುಲರ್ ಆಗಿ ನಡೆಸಲು ಪ್ಲಾನ್ ಮಾಡಿತು. ಲಲಿತ್ ಮೋದಿ ಎಂಬ ಗುಜರಾತಿ ಸೇಠು ಒಬ್ಬನನ್ನು ಇದಕ್ಕಾಗಿ ನಿಯೋಜಿಸಲಾಯಿತು.

IPL ಹುಟ್ಟಿದ್ದೇ ಹೀಗೆ!

ಹೀಗಾಗಿ ಕಪಿಲ್‌ದೇವ್ ಕೈಯಿಂದ ಈಗ ಕ್ರಿಕೆಟ್ ಜಾರಿ ಹೋಗಿದೆ. ಅವನನ್ನು BCCI ಮಂಗಾ ಮಾಡಿದೆ. ವಿಶ್ವ ಕ್ರಿಕೆಟ್‌ನ ಅತೀ ಬಲಿಷ್ಠನೂ, ಇಂಡಿಯನ್ ಕ್ರಿಕೆಟ್‌ನ ಅಧಿಕೃತ ಸಂಸ್ಥೆಯೂ ಆಗಿರುವ BCCI ಯೇ ಮುಂದೆ ನಿಂತು ಯಾವಾಗ IPL ರೂಪಿಸಿತೋ ಅದರ ವ್ಯಾಪಾರದ ಬೆಲೆಯೂ ಜಾಸ್ತಿಯಾಯಿತು.

ಮೊನ್ನೆ ನಾವೆಲ್ಲಾ ನೋಡಿದ್ದು ಅದರ ಸಣ್ಣ ಸ್ಯಾಂಪಲ್ ಮಾತ್ರ. ಒಟ್ಟು 77 ಕ್ರಿಕೆಟರ್‌ಗಳನ್ನು ಅಲ್ಲಿ ಮಾರಲಾಯಿತು. ಇವರನ್ನು ಖರೀದಿಸಿರುವ 8 ಕಂಪನಿಗಳು ಅಮ್ಮ[...] ಖರ್ಚು ಮಾಡಿದ ದುಡ್ಡು ಕೇವಲ 140 ಕೋಟಿ! ಅದರಲ್ಲಿ ದೋನಿಗೆ ಕೊಟ್ಟಿರುವ 6 ಕೋಟಿ, ಸೈಮಂಡ್ಸ್‌ಗೆ ಮೂರೂವರೆ ಕೋಟಿ ಒಂದು ಲೆಕ್ಕವೇ ಅಲ್ಲ.

ಕ್ರಿಕೆಟ್‌ಗೆ ಇಷ್ಟು ಭಾರೀ ದುಡ್ಡು ಹರಿಸುತ್ತಿರುವ ಮಲ್ಯ, ಶಾರೂಕ್, ಅಂಬಾನಿಗಳು ಹೇಗೆ ಲಾಭ ಮಾಡುತ್ತಾರೆಂಬುದು ಮೇಲ್ನೋಟಕ್ಕೆ ಗೊತ್ತಾಗುವುದೇ ಇಲ್ಲ.

ಹೀಗೂ ಉಂಟಾ ಆಟದ ವ್ಯಾಪಾರ!



ರೊನಾಲ್ಡಿನೋ

ನಿಮಗೆ ಬ್ರೆಜಿಲಿಯನ್ ಫುಟ್‌ಬಾಲ್ ಪ್ಲೇಯರ್ ರೊನಾಲ್ಡಿನೋ ಗೊತ್ತಿರಬೇಕು.

ಇಂಗ್ಲೆಂಡಿನ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ಬಿಗೆ ಅವನು ಆಡುತ್ತಿದ್ದಾನೆ. ಅವನ ವಾರದ ಸಂಬಳ ಎಷ್ಟು ಗೊತ್ತಾ?

70 ಲಕ್ಷ ರೂಪಾಯಿ!

ಅವನ ಒಟ್ಟು ವರ್ಷದ ಗಳಿಕೆ 80 ಕೋಟಿ ದಾಟುತ್ತದೆ. ಅದೇ ಥರ ಅವನ ಕ್ಲಬ್ ಮಾಲೀಕ ಅಮೆರಿಕನ್ ಆದ ಗ್ಲೇಸರ್ ವರ್ಷಕ್ಕೆ 1250 ಕೋಟಿ ಟರ್ನ್‌ಓವರ್ ನಡೆಸಿ 200 ಕೋಟಿ ರೂ. ಲಾಭ ಮಾಡುತ್ತಿದ್ದಾನೆ. ಮ್ಯಾಂಚೆಸ್ಟರ್ ಯುನೈಟೆಡ್, ಎ.ಸಿ. ಮಿಲಾನ್, ಬಾರ್ಸಿಲೋನಾ, ಚೆಲ್ಸಿಯಾ... ಥರದ ಯುರೋಪಿಯನ್ ಫುಟ್‌ಬಾಲ್ ಕ್ಲಬ್‌ಗಳಿಗೆ ತಮ್ಮದೇ ಸ್ವಂತ ಸ್ಟೇಡಿಯಂಗಳಿವೆ, ವಿಮಾನಗಳಿವೆ, ಫ್ಯಾನ್ ಕ್ಲಬ್‌ಗಳೂ ಇವೆ. ಯುರೋಪ್‌ನಲ್ಲೀಗ ದೇಶದೇಶಗಳ ನಡುವೆ ಫುಟ್‌ಬಾಲ್ ಮ್ಯಾಚ್ ನಡೆಯುವುದು ವಿಶ್ವಕಪ್ ಹಾಗೂ ಯೂರೋ ಚಾಂಪಿಯನ್‌ಶಿಪ್‌ಗಳಿದ್ದಾಗ ಮಾತ್ರ. ಉಳಿದಂತೆ ಈ ಕ್ಲಬ್‌ಗಳ ನಡುವೆ ಪ್ರತಿವಾರ ಒಂದಲ್ಲಾ ಒಂದು ಕಡೆ ಮ್ಯಾಚ್ ನಡೆಯುತ್ತಲೇ ಇರುವಂತೆ, ಜನ ದುಡ್ಡು ಕೊಟ್ಟು ನೋಡುವಂತೆ, ಟಿವಿಗಳು ಪ್ರಸಾರ ಮಾಡುತ್ತಲೇ ಇರುವಂತೆ ಮಾಡಲಾಗಿದೆ. ಕೊನೆಗೆ ಜನರಿಗೆ ಇದೇ ಒಂದು ಚಟವಾಗಿ ಮನೆ ಬಾಡಿಗೆ, ಕರೆಂಟ್ ಬಿಲ್ ಕಟ್ಟುವಂತೆ ಆಟದ ಖರ್ಚು (ಮನರಂಜನೆ) ಕಡ್ಡಾಯವಾಗುವಂತೆ ಬ್ರೇನ್‌ವಾಷ್ ಮಾಡಲಾಗಿದೆ.

ಇಂಡಿಯನ್ ಕ್ರಿಕೆಟ್ ಈಗ ಅದೇ ದಾರಿ ಹಿಡಿದಿದೆ.

ನಿಮಗೆ ಅಮೆರಿಕಾದ ಬಾಸ್ಕೆಟ್‌ಬಾಲ್ ಆಟಗಾರ ಮೈಕಲ್ ಜೋರ್ಡನ್ ಗೊತ್ತಿರಬೇಕು. ಅವನು ಖ್ಯಾತಿಯ ಉತ್ತುಂಗದಲ್ಲಿದ್ದಾಗ ಸಂಬಳ, ಜಾಹೀರಾತು ಸರಕು ಮಾರಾಟ ಪ್ರಾಯೋಜಕತ್ವಗಳ ಒಟ್ಟು ವಹಿವಾಟು 50 ಸಾವಿರ ಕೋಟಿ ತಲುಪಿತ್ತು.

BCCI ಕ್ರಿಕೆಟ್ ಆಟಗಾರರಿಗೆಂದೇ ಖಾಸಗಿ ವಿಮಾನ ಖರೀದಿಸುತ್ತೇನೆಂದು ಹೇಳಿದಾಗ ಜನ ಬೆರಗಾಗಿದ್ದರು. ಈಗ ಹೇಳಿ ಇದು ಅಸಾಧ್ಯನಾ ಅಂತ.

ದೋಣಿ-60 ಲಕ್ಷಕ್ಕೆ ದೋಖಾ!



[illegible]ಇಂಡಿಯನ್ ಕ್ರಿಕೆಟ್ ಸ್ಟಾರ್ ಮಹೇಂದ್ರಸಿಂಗ್ ದೋಣಿ ಮೊನ್ನೆ [illegible]ಕೋಟಿ ರೂಪಾಯಿಗೆ ಹರಾಜಾಗಿದ್ದಾನೆ. ಈ ಗದ್ದಲದಲ್ಲಿ ಅದೇ [illegible]ನ ಕನ್ನಡಿಗರಿಗೆ 60 ಲಕ್ಷ ರೂಪಾಯಿ ನಾಮ ಹಾಕಿದ್ದು ಅಷ್ಟು [illegible]ಯಾಗಲಿಲ್ಲ.

ನಮ್ಮಲ್ಲಿ ಕ್ರಿಕೆಟ್ ಆಟಗಾರರೆಂದರೆ ಅವತಾರ ಪುರುಷರೆಂಬಂತೆ [illegible]ವಲಿನಿಂದಲೂ ಬಿಂಬಿಸಿಕೊಂಡು ಬರಲಾಗುತ್ತಿದೆ. ಆ ತರದ [illegible]ರದ ಭರಾಟೆಯಲ್ಲಿ ಅವರ ಸಣ್ಣತನ, ದುರಾಸೆ, ವಂಚನೆಗಳು [illegible]ವಾಗಿ ಬಿಡುತ್ತವೆ.

ಈ ದೋಣಿಯ ಚರಿತ್ರೆಯನ್ನೇ ನೋಡಿ.

ಕೇವಲ 2 ವರ್ಷಗಳ ಹಿಂದೆ ರಾಂಚಿಯ ಇವನು ಒಬ್ಬ ಸಾಮಾನ್ಯ [illegible]ಟರ್ ಆಗಿದ್ದ. ಆಮೇಲೆ ಒನ್ ಡೇ ಟೀಂಗೆ ಆಯ್ಕೆಯಾದ ನಂತರ [illegible] ವೇಗವಾಗಿ ಟೀಂ ಕ್ಯಾಪ್ಟನ್ನೂ ಆದ. ಟ್ವೆಂಟಿ-ಟ್ವೆಂಟಿ ಟೂರ್ನಿ [illegible]ಪಿಯನ್‌ಶಿಪ್ ಭಾರತಕ್ಕೆ ಬಂತು.

ದೋಣಿಯ ದೆಸೆ ಕುದುರಿದ್ದೂ ಆಗಲೇನೆ. ಇದೇನೆ ಇರಲಿ, [illegible]ಣಿ ಈ ಯಾವುದೇ ಸಾಧನೆ ಮಾಡುವ ಮೊದಲೇ 2006 ರ ಜನವರಿಯಲ್ಲಿ ಮೈಸೂರ್ ಸ್ಯಾಂಡಲ್ [illegible]ಪ್ ಬ್ರಾಂಡ್ ತಯಾರಿಸುವ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ (KSDL) [illegible]ಣಿಯನ್ನು ತನ್ನ ಪ್ರಚಾರ ರಾಯಭಾರಿಯನ್ನಾಗಿ ಒಪ್ಪಂದ ಮಾಡಿಕೊಂಡಿತ್ತು.

ಅದರಂತೆ ಈ ದೋಣಿ ವರ್ಷಕ್ಕೆ 5 ದಿನದಂತೆ 2 ವರ್ಷದಲ್ಲಿ 10 ದಿನವನ್ನು KSDL ಗೆ ಕೊಡಬೇಕಿತ್ತು. ಕೆಲಸಕ್ಕೆ ದೋಣಿ ಕೇಳಿದ್ದ ಫೀಸ್ 84 ಲಕ್ಷ ರೂಪಾಯಿಗಳು!

ಅಂದರೆ ದಿನವೊಂದಕ್ಕೆ ಎಂಟೂವರೆ ಲಕ್ಷ!!

'ಆಯ್ತು' ಅಂತ್ಹೇಳಿ ಅಡ್ವಾನ್ಸಾಗಿ ನೀಡಿದ 60 ಲಕ್ಷ ಜೇಬಿಗಿಳಿಸಿ ಹೋದ ಈ ದೋಣಿ 2006 ರಲ್ಲಿ [illegible]DL ಕೈಗೆ ಸಿಕ್ಕಿದ್ದು ಬರೀ 3 ದಿನ ಮಾತ್ರ. 2007 ರಲ್ಲಂತೂ ಅವನು ಮೈಸೂರ್ ಸ್ಯಾಂಡಲ್‌ನತ್ತ [illegible]ಗಿಯೂ ನೋಡಿಲ್ಲ. ಹಾಗಂತ ಅವನೇನೂ ಹಗಲೂ-ರಾತ್ರಿ ಭಾರತ ದೇಶಕ್ಕಾಗಿ ಕ್ರಿಕೆಟ್ ದುಡಿಮೆ [illegible]ಡುತ್ತಿದ್ದ ಅಂದುಕೊಳ್ಳಬೇಡಿ. KSDL ನವರಿಗಿಂತ ಜಾಸ್ತಿ ಹಣ ಕೊಡುವ ಧಣಿಗಳ ಜೊತೆ ಈ ದುಡ್ಡಿನ [illegible]ಮ ಕಾಲ ಹಾಕುತ್ತಿದ್ದ ಅಷ್ಟೆ.

ಕೊಟ್ಟ ಮಾತಿನ ಬಗ್ಗೆ ನಿಗಾ ಇಡದ, ಹಣ ಸಿಗುವ ಕಡೆ ನಾಯಿಯಂತೆ ಬಾಲ ಅಲ್ಲಾಡಿಸಿಕೊಂಡು [illegible]ವ ದೋಣಿ ಇವತ್ತು ಗ್ರೇಟ್ ಕ್ರಿಕೆಟರ್ ಅಂತೆ.

ಹೇಗಿದೆ ನೋಡಿ ವಿಪರ್ಯಾಸ!

ಇಷ್ಟಕ್ಕೂ ಮೈಸೂರ್ ಸ್ಯಾಂಡಲ್ ಸೋಪಿನವರು ತನ್ನ ಪ್ರಚಾರ ರಾಯಭಾರಿಯಾಗಿ ದೋಣಿಯನ್ನೇ [illegible]ಸಿಕೊಳ್ಳಲು ಕಾರಣವೂ ಇತ್ತು.

ದಕ್ಷಿಣ ಭಾರತದಲ್ಲಿ ಅತೀ ಪಾಪ್ಯೂಲರ್ ಆಗಿರುವ ಮೈಸೂರ್ ಸ್ಯಾಂಡಲ್ ಸೋಪಿಗೆ ಇಲ್ಲಿ 15% [illegible]ರ್ಕೆಟ್ ಷೇರ್ ಇದೆ. ಆದರೆ ಉತ್ತರ ಭಾರತದಲ್ಲಿ ಅದರ ಮಾರುಕಟ್ಟೆ ಪಾಲು ಕೇವಲ 8%. ಹಾಗಾಗಿ [illegible]ನು ಮೈಸೂರ್ ಸ್ಯಾಂಡಲ್ ಸೋಪಿನಲ್ಲೇ ಸ್ನಾನ ಮಾಡೋದು' ಅಂತ ದೋಣಿ ಬಾಯಲ್ಲಿ ಹೇಳಿಸಿದರೆ [illegible]ರ್ತ್ ಇಂಡಿಯಾದಲ್ಲಿ ವ್ಯಾಪಾರ ಕುದುರಬಹುದೆಂದು KSDL ಯೋಚಿಸಿತ್ತು.

ದೋಣಿ ಜೊತೆಗಿನ ಒಪ್ಪಂದಕ್ಕೆ ಇದೇ ಕಾರಣವಾಗಿತ್ತು.

ಅವತ್ತು ದೋಣಿಗೆ ಇವತ್ತಿರುವಷ್ಟು ಡಿಮ್ಯಾಂಡ್ ಇರಲಿಲ್ಲ. ಹಾಗಾಗಿ KSDL ನ 84 ಲಕ್ಷವೇ ಅವನಿಗೆ [illegible]ದ್ದದಾಗಿತ್ತು. ಆದರಿವತ್ತು ಅವನು ಸ್ಟಾರ್ ಕ್ರಿಕೆಟರ್. ಕೋಟಿ ಕೋಟಿಗಟ್ಟಲೇ ದುಡ್ಡು ಬಂದು ಕಾಲ ಬಳಿ [illegible]ಳುತ್ತಿದೆ.

ಹಾಗಂತ ಹತ್ತಿದ ಏಣಿಯನ್ನೇ ಒದ್ದುಬಿಡುವುದು ಸರೀನಾ?

KSDL ಈಗ ದೋಣಿ ವಂಚನೆ ವಿರುದ್ಧ ಕೇಸ್ ಹಾಕಲು ರೆಡಿಯಾಗುತ್ತಿದೆ. ಕರ್ನಾಟಕ ರಕ್ಷಣಾ ವೇದಿಕೆ [illegible]ರಾಮೇಗೌಡ ಬಣ) ದೋಣಿ ಬೆಂಗಳೂರಿನಲ್ಲಿ ಆಡಲು ಬಂದಾಗ ಪ್ರತಿಭಟಿಸಲು ತಯಾರಾಗಿ ನಿಂತಿದೆ.

ವಂಚಕ ದೋಣಿ ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಿದ್ದಾನೆ.

[illegible]ದನ್ನು ಅರ್ಥ ಮಾಡಿಕೊಳ್ಳಲು ಆಟವನ್ನೇ ಒಂದು [illegible]ದಾಯಕ ದಂಧೆಯಾಗಿ ಬೆಳೆಸಿರುವ ಯೂರೋಪ್-[illegible]ರಿಕನ್ನರನ್ನು ಗಮನಿಸಬೇಕು.

[illegible]ವು ನಂಬುತ್ತೀರೋ ಇಲ್ಲವೋ ಕಾಣೆ, ಇವತ್ತು [illegible] ಪ್ರಪಂಚದ ವರ್ಷದ ಕ್ರೀಡಾ ವಹಿವಾಟಿನ [illegible]ವೇ 20 ಲಕ್ಷ ಕೋಟಿ ರೂಪಾಯಿಗಳಷ್ಟಿದೆ. [illegible]ಲ್ಲಿ ಅಮೆರಿಕನ್ನರ ವ್ಯಾಪಾರವೇ 10 ಲಕ್ಷ ಕೋಟಿ [illegible]ದೆ. ಫುಟ್‌ಬಾಲ್ ಒಂದೇ ಆಟದಿಂದ ವರ್ಷಕ್ಕೆ [illegible]ಕ್ಷ ಕೋಟಿ ರೂ. ಕೈಬದಲಾಯಿಸುತ್ತದೆ. ಇದು [illegible] ಬಜೆಟ್ಟಿಗಿಂತಾ ಜಾಸ್ತಿ. ವಿಶ್ವವ್ಯಾಪಾರದಲ್ಲಿ [illegible] ದಂಧೆಯ ಪಾಲು 2.5% ಇದೆ. ಅವರ ವಾರ್ಷಿಕ [illegible] ದರ ಶೇ. 6 ರಿಂದ 10. ಶ್ರೀಮಂತ [illegible]ಗಳ ಒಟ್ಟು ಉತ್ಪನ್ನದಲ್ಲಿ (GDP) ಕ್ರೀಡಾ [illegible] 1.5% ಹಣ ಹುಟ್ಟುತ್ತಿದೆ.

[illegible] BCCI ಗೆ [illegible] ಫುಟ್‌ಬಾಲ್ [illegible] ಇಲ್ಲ, [illegible] ಕ್ರಿಕೆಟ್ ಆಡುತ್ತಿದ್ದಾರೆ. [illegible] ದುಡ್ಡು ಆಟದ [illegible] ಇಂಡಿಯಾ, [illegible], ಗಲ್ಫ್ ದೇಶಗಳು, ಬಾಂಗ್ಲಾ, ಶ್ರೀಲಂಕಾದಲ್ಲಿ [illegible] cricket hub ಇದೆನೆ. ಆದರೆ [illegible] ಕೋಟಿ ಕ್ರಿಕೆಟ್ [illegible] ಕ್ರಿಕೆಟ್ [illegible] encash

ಮಾಡಿಕೊಳ್ಳುವ ವ್ಯಾಪಾರಿ ತಂತ್ರದ ಭಾಗವಾಗಿಯೇ ಈಗ IPL ಬಂದಿದೆ. ಆಟಗಾರರ ಹರಾಜ್ ನಡೆಯುತ್ತಿದೆ.

ಈಗ ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬೈ, ಕೊಲ್ಕತ್ತಾ, ಮೊಹಾಲಿ ಟೀಂಗಳಿಗೆ ಆಟಗಾರರನ್ನು ಖರೀದಿಸಿರುವ ಉದ್ಯಮಿಗಳು ತಮ್ಮ ಬಂಡವಾಳ ವಾಪಸ್ ಪಡೆಯಲು ನಾನಾ ತಂತ್ರ ಹೂಡುತ್ತಾರೆ. ತಮ್ಮ ತಂಡಕ್ಕೆ ಖಾಸಗಿ ಕಂಪನಿಗಳ sponsorship ಹುಡುಕಿ ಆಟಗಾರರ ಶರ್ಟು, ಪ್ಯಾಂಟು, ಚೆಡ್ಡಿ ಬನೀನುಗಳ ಮೇಲೆ, ಬ್ಯಾಟು, ಬಾಲು, ವಿಕೆಟ್ ಮೇಲೆಲ್ಲಾ ಆ ಕಂಪನಿ ಪ್ರಾಡಕ್ಟುಗಳ ಲೇಬಲ್ ಹಾಕುವುದು, ಟೀಂ ಹೆಸರಲ್ಲಿ ಆಟಗಾರರ ಮೂರ್ತಿ ಇರುವ ಟೀ ಶರ್ಟ್, ಟೋಪಿ, ಬ್ಯಾಟು, ಬಾಲು ತಯಾರಿಸಿ ಮಾರುವುದು ಇವೆಲ್ಲಾ ನಡೆಯುತ್ತವೆ.

ಕ್ರಿಕೆಟ್ ಹುಚ್ಚರು ಇದಕ್ಕೆ ದುಡ್ಡು ಖರ್ಚು ಮಾಡುವಂತೆ ನೋಡಿಕೊಳ್ಳಲಾಗುತ್ತದೆ. ಟೋಪಿ ಹಾಕಿಸಿಕೊಳ್ಳುವವರು ಸಿಗುವುದಾದರೆ ಟೋಪಿ ಹೊಲಿಯುವವರಿಗೇನು ಧಾಡಿ!

ಕೊನೆಯದಾಗಿ

ನಾಳೆ ಯಾವನಾದರೂ ಕ್ರಿಕೆಟರ್ 'ನಾನು ಭಾರತ ದೇಶಕ್ಕಾಗಿ ಆಡುತ್ತೇನೆ' ಅಂತ ಡೈಲಾಗ್ ಹೊಡೆದರೆ 'ನಿನ್ನ ಬೋಳಿಕಾಳು ನಮಗ್ಗೊತ್ತಿಲ್ವಾ, ಹೋಗೋಲೆ' ಅನ್ನೋದನ್ನ ನಾವು ಕಲಿಯಬೇಕಷ್ಟೇ.

ಗಣೇಶ: ನೀಲಿ ಉಂಗುರದ ರಹಸ್ಯ ಏನು?

ನೀವಿದನ್ನು ಭ್ರಾಂತು ಎನ್ನಿ, ಅವಿವೇಕ ಅಂದುಕೊಳ್ಳಿ, ಅವೆಲ್ಲಾ ಸದ್ಯಕ್ಕೆ ಗಣೇಶ ತಲೆಗೆ ಇಳಿಯುವ ಸಾಧ್ಯತೆಗಳಿಲ್ಲ.

ಒಂದು ನೀಲಿ ಹರಳಿನ ಉಂಗುರದ ವಿಚಾರ ಇದು.

ನಾವು ನೀವೆಲ್ಲಾ ತಿಳಿದುಕೊಂಡಿರುವುದು ಈ ಗಣೇಶ ತನ್ನ ನಟನಾ ಪ್ರತಿಭೆಯಿಂದ, ಇರುವ ಸಂದರ್ಭ, ಸಿಕ್ಕ ಅವಕಾಶಗಳಿಂದ ಇವತ್ತು ಸೂಪರ್ ಸ್ಟಾರ್ ಆಗಿದ್ದಾನೆ ಅಂತ ತಾನೆ.

ಆದರೆ

ಅದು ಹಾಗಲ್ಲವಂತೆ.

ಯಾವುದೋ ಒಂದು ನೀಲಿ ಬಣ್ಣದ ಹರಳಿನಿಂದಲೇ ತಾನು ಸ್ಟಾರ್ ಆಗಿದ್ದೀನಿ ಅಂತ ಈ ಗಣೇಶ್ ನಂಬಿಕೊಂಡಿದ್ದಾನೆ. ಹಾಗಾಗಿ ಆ ಹರಳನ್ನೇ ಉಂಗುರು ಮಾಡಿಸಿಕೊಂಡು ಬೆರಳಿಗೆ ಸಿಗಿಸಿಕೊಂಡು ಓಡಾಡುತ್ತಿದ್ದಾನೆ ಗಣೇಶ್.

ಒಂದು ನಿರ್ಜೀವ ಹರಳು, ದಿಕ್ಕು ದೆಸೆಯಿರದ ವಾಸ್ತು, ಕವಡೆ ಶಾಸ್ತ್ರಗಳೆಲ್ಲಾ ಸೂಪರ್ ಸ್ಟಾರ್‌ಗಳನ್ನು, ಸಕ್ಸಸ್‌ಫುಲ್ ಬ್ಯುಸಿನೆಸ್ ಮೆನ್‌ಗಳನ್ನು ಹುಟ್ಟುಹಾಕುವಂತಿದ್ದರೆ ಯಾರೇ ಆಗಲಿ ಯಶಸ್ಸಿಗಾಗಿ ಅಷ್ಟು ಪರಿಪಾಟಲು ಯಾಕೆ ಬೀಳಬೇಕು ಹೇಳಿ?

'ಈ ಉಂಗುರ ನನ್ನ ಕೈಲಿರುವ ತನಕ ನಾನೇ ನಂಬರ್ ಒನ್ ಹೀರೋ' ಅಂತ ಗಣೇಶ್ ನಂಬಿಕೊಂಡಂತಿದೆ. ಇದೇ ತರ್ಕವನ್ನು ಬೆಳೆಸುತ್ತಾ ಹೋದರೆ ಇನ್ಯಾರೋ ಹೀರೋ ತಾನೇ ನಂಬರ್ ಒನ್ ಆಗಲು ಒಳ್ಳೆ ಹಿಟ್ ಸಿನಿಮಾ ಕೊಡೋ ಬದಲಾಗಿ ಗಣೇಶನ ಕೈಲಿರುವ ಉಂಗುರ ಕದಿಯೋ ಪ್ಲಾನ್ ಮಾಡಬೇಕಾಗುತ್ತೆ ಅಷ್ಟೆ!



ಗಣೇಶ್‌ಗೆ ಇನ್ನೂ ಹಲವಾರು ಮೂಢನಂಬಿಕೆಗಳಿವೆ.

ಗಣೇಶನ ಮದುವೆಗೆ ನೂರೆಂಟು ವಿಘ್ನಗಳು ಎಂಬಂತೆ ಸೂಪರ್ ಸ್ಟಾರ್ ಗಣೇಶ್ ಹಲವಾರು ವಿಘ್ನಗಳ ಮತ್ತು ವಿವಾದದ ನಡುವೆ ಹಸೆಮಣೆ ಏರಿದ್ದು ಎಲ್ಲರಿಗೂ ಗೊತ್ತೇ ಇದೆ. ಆದರೆ ಈ ಆತುರಾತುರದ ಮದುವೆಯ ನಂತರವೂ ಗಣೇಶ್ ದಿನಕ್ಕೊಂದು ಹೊಸ ಸಮಸ್ಯೆಗಳನ್ನು ಎದುರಿಸುತ್ತಲೇ ಇದ್ದಾನೆ.

ಮೊನ್ನೆ ಮೊನ್ನೆ ತನಕ ಗಣೇಶನನ್ನು ಗಾಂಧಿನಗರದ ನಿರ್ಮಾಪಕರು ಮುತ್ತಿಗೆ ಹಾಕುತ್ತಿದ್ದರು. ಹಾಗೆಯೇ ಆತ ಹೋದಲ್ಲೆಲ್ಲಾ ಹೆಣ್ಣುಮಕ್ಕಳು ಗಣೇಶನ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಈಗ ನಿರ್ಮಾಪಕರು ದೂರವಾಗಿದ್ದಾರೆ. ಹಾಗೆಯೇ ಹೆಣ್ಣುಮಕ್ಕಳೂ ಗಣೇಶನ ಬಗ್ಗೆ ಅಸಡ್ಡೆ ತೋರುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಗಣೇಶ್ ಇನ್ನೊಂದು ರೀತಿಯ ಜನರಿಂದ ಈಗ ಸುತ್ತುವರಿದಿದ್ದಾನೆ.

ಗಣೇಶನ ಮದುವೆ ಸುದ್ದಿ ಪತ್ರಿಕೆಗಳಲ್ಲಿ ಬಹಿರಂಗವಾಗಿದ್ದೇ ತಡ ಸಣ್ಣ ಪುಟ್ಟ ಗಿಣಿ ಶಾಸ್ತ್ರ ಹೇಳುವವರು, ಕವಡೆ ಶಾಸ್ತ್ರದವರು, ಕಣಿ ಹೇಳುವವರು, ಕುಖ್ಯಾತ ಜ್ಯೋತಿಷಿಗಳು ಎಚ್ಚೆತ್ತುಕೊಂಡು ಗಣೇಶನನ್ನೇ ನೆಪ ಮಾಡಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಹೊರಟಿರುವುದು ಆತನ ಪಾಲಿಗೆ ನುಂಗಲಾರದ ತುತ್ತಾಗಿದೆ.

ಮೊನ್ನೆ ಆತನ ಮಾವನ ಮನೆ ಬಾರ್ಕೂರಿನಲ್ಲಿ ಆರತಕ್ಷತೆ ನಡೆಯಿತಲ್ಲಾ? ಆಗ ಸ್ಥಳೀಯ ಜ್ಯೋತಿಷಿಗಳು, ಶಾಸ್ತ್ರ ನುಡಿಯುವವರು ಗಣೇಶನಿಗೆ ಮುತ್ತಿಗೆ ಹಾಕಿದರಂತೆ. ಹಾಗೆ ಮುತ್ತಿಗೆ ಹಾಕಿದವರು "ನಿಮಗೆ ಕುಜ ದೋಷವಿದೆ. ಆದ್ದರಿಂದ ರಾಹು ಶಾಂತಿ ಮಾಡಿಸಬೇಕು. ಆಗ ದೋಷ ಮುಕ್ತವಾಗುತ್ತೀರಿ" ಎಂದೆಲ್ಲಾ ಸಮಸ್ಯೆ ಮತ್ತು ಅದಕ್ಕೆ ಪರಿಹಾರದ ಪಟ್ಟಿಯನ್ನು ನೀಡಲಾರಂಭಿಸಿದರಂತೆ. ಅದಕ್ಕಿಂತಲೂ ಮುಖ್ಯವಾಗಿ ಅಂದು ರಾತ್ರಿ ಹತ್ತೂವರೆ ಗಂಟೆಯಾದರೂ ಈ ನವದಂಪತಿಗಳು ಮಲಗುವ ಬೆಡ್ ರೂಂನಲ್ಲಿ ಒಬ್ಬ ಮಹಿಳಾ ಜ್ಯೋತಿಷಿ ಬೊಕ್ಕಾಂ ಹೂಡಿದ್ದಳಂತೆ.

"ನೀವು ಈ ದಿಕ್ಕಿಗೆ ತಲೆ ಹಾಕಿ, ಆ ದಿಕ್ಕಿಗೆ ಕಾಲು ಚಾಚಿ ಮಲಗಬೇಕು. ಇಲ್ಲದಿದ್ದರೆ ನಿಮ್ಮ ಜಾತಕ[illegible]

ಸಂಸಾರ ಗ್ಯಾರಂಟಿ" ಎಂದೆಲ್ಲಾ [illegible] ಹೇಳುತ್ತಾ [illegible] ರೂಮಿನಲ್ಲೇ ಕುಳಿತಿದ್ದಳಂತೆ. ಅದಷ್ಟು ಸಮಯ ಆಕೆಯ ಬಡಬಡಿಕೆಯನ್ನು ತಾಳ್ಮೆಯಿಂದಲೇ ಕೇಳುತ್ತಾ ಕುಳಿತಿದ್ದ ನವ ವಧು-ವರರು ಕೊನೆಗೆ ಆಕೆಯನ್ನು ಬಲವಂತವಾಗಿ ಬೆಡ್ ರೂಂನಿಂದ ಹೊರಕ್ಕೆ ದಬ್ಬಿದರಂತೆ.

ಇದು ಸಾಲದೆಂಬಂತೆ ಮತ್ತೊಬ್ಬ ಜ್ಯೋತಿಷಿ ಮಾರನೆ ದಿನ ಇನ್ನೊಂದು ರೀತಿಯ ಬಂಡಲ್ ಬಿಟ್ಟನ. "ನೀವು ನೂರಾರು ಹೆಣ್ಣು ಮಕ್ಕಳ ಶಾಪಕ್ಕೆ ಗುರಿಯಾಗಿದ್ದೀಯ. ನಿನ್ನ ಅಭಿಮಾನಿಗಳು ಮದುವೆಯ ನಂತರ ಬಾಯಿಗೆ ಬಂದ ಹಾಗೆ ನಿನಗೆ ಶಾಪ ಹಾಕಿದ್ದಾರೆ. ಹೆಣ್ಣುಮಕ್ಕಳ ಶಾಪ ಸಾಧಾರಣವಾಗಿ ಯಾರಿಗೇ ಆದರೂ ತಟ್ಟೇ ತಟ್ಟುತ್ತೆ. ಆದ್ದರಿಂದ ಈ ಶಾಪದಿಂದ ಮುಕ್ತವಾಗಬೇಕಾದರೆ ನೀವು ಶತ


ಚಂಡಿಯಾಗ ಹೋಮ ಮಾಡಬೇಕಾಗುತ್ತದೆ" ಎಂದು ಹೇಳಿದನಂತೆ. ಮೊದಲೇ ತನ್ನ ಮಧ್ಯರಾತ್ರಿಯ ಮದುವೆಯ ಸುತ್ತ ನಡೆದ ವಾದ-ವಿವಾದಗಳಿಂದ ಜರ್ಜರಿತನಾಗಿರುವ ಗಣೇಶನಿಗೆ ಈ ಜ್ಯೋತಿಷಿಗಳ ಕಾಟವನ್ನು ಸಹಿಸದೇ ಬೇರೆ ದಾರಿ ಇಲ್ಲದಂತಾಗಿದೆ.

ಯಾಕೆಂದರೆ ಗಣೇಶ್ ನಾಸ್ತಿಕನಂತೂ ಅಲ್ಲ. ಬದಲಾಗಿ ಈತ ಮಹಾ ದೈವಭಕ್ತ. ಬೆಳಿಗ್ಗೆ ಮನೆಯಲ್ಲಿ ಕನಿಷ್ಠ ಒಂದು ಒಂದೂವರೆ ಗಂಟೆಗಳ ಕಾಲ ಪೂಜೆ ಪುನಸ್ಕಾರದಲ್ಲಿ ತೊಡಗಿರುತ್ತಾನೆ. ಅದು ವೈಯಕ್ತಿಕ ನಂಬಿಕೆ, ಭಕ್ತಿ ಎಂದು ಸುಮ್ಮನಿರಬಹುದಿತ್ತು. ಆದರೆ ಗಣೇಶನ ಈ 'ಭಕ್ತಿ' ಎಂತಹದ್ದೆಂದರೆ ಆತ ಹೋಮ ಹವನಗಳಂತಹ ಮೂಢ ಆಚರಣೆಗಳನ್ನೂ ಪಾಲಿಸುತ್ತಾನೆ. ಈಗಾಗಲೇ ತನ್ನ ಮಾವನ ಮನೆಯಲ್ಲಿ ಈ ಜ್ಯೋತಿಷಿಗಳ ಆದೇಶದಂತೆ ಒಂದು ಚಂಡಿಕಾ ಹೋಮವನ್ನೂ ನೆರವೇರಿಸಿದ್ದಾನೆ.

ಈ ಹೋಮ, ಹವನ, ಭವಿಷ್ಯ, ಮಂತ್ರ-ತಂತ್ರಗಳಲ್ಲಿ ಮಣ್ಣಿನ ಮಗ ದೇವೇಗೌಡರಷ್ಟೇ ನಂಬಿಕೆ ಹೊಂದಿದ್ದಾನೆ. ಮಣ್ಣಿನ ಮಗನಿಗೂ ಈ ಗೋಲ್ಡನ್ ಗಣೇಶನಿಗೂ ಈ ವಿಷಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅಷ್ಟೇ ಅಲ್ಲ, ಲಕ್ಕಿ ಕಲ್ಲು, ಅದೃಷ್ಟ ತರುವ ನಂಬರ್ ಇಂತಹವುಗಳಲ್ಲೂ ಆತನಿಗೆ ಅಪಾರ ನಂಬಿಕೆ ಇದೆ. ಆದ್ದರಿಂದಲೇ "ನನ್ನ ಬಳಿ ಈ ನೀಲಿ ಬಣ್ಣದ ಹರಳಿರುವ ತನಕ ಯಾರೂ ನನ್ನನ್ನು ನಂಬರ್ ಒನ್ ಸ್ಥಾನದಿಂದ ಅಲುಗಾಡಿಸಲು ಸಾಧ್ಯವಿಲ್ಲ" ಎಂದು ಹೇಳುತ್ತಿರುತ್ತಾನೆ. ಆತ ಹೀಗೆ ಬಡಾಯಿ ಕೊಚ್ಚಿಕೊಳ್ಳುವುದು ಆತನ ಆಪ್ತೇಯರಲ್ಲೂ [illegible] ಎಂದು ಅಚ್ಚರಿ ಮೂಡಿಸಿದೆ.

ಗಣೇಶ್ ಈ ಖ್ಯಾತ ಕುಖ್ಯಾತ ಜ್ಯೋತಿಷಿಗಳನ್ನೆಲ್ಲಾ [illegible] ಕಿವಿಗೊಡದೆ ವೃತ್ತಿ ಜೀವನದಲ್ಲಿ [illegible]


-ತೇಜ



ಬೀದರ್

'ಗೌಡ್ಕಿ' ಮಾಡಲು ಮಾತ್ರ ಲಾಯಕ್ಕಾದ ಚಂದ್ರಶೇಖರ ಪಾಟೀಲ ರೇವೂರ


ಶರಣಬಸವೇಶ್ವರರ ಸಂಸ್ಥಾನ ಹಾಗೂ ಖಾದೆ ಬಂದೇನವಾಜ ದರ್ಗಾ ಹೊಂದಿರುವ ಕಲಬುರ್ಗಿ ಕೋಮು ಸೌಹಾರ್ದತೆಗೆ ಹೇಳಿಮಾಡಿಸಿದ ತವರೂರು. ಆದರೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕೆಂದು ಹೊಂಚು ಹಾಕುತ್ತಿರುವ ಕೋಮುವಾದಿಗಳು ಮಾತ್ರ ಯಾರದೋ ಮನೆಗೆ ಬೆಂಕಿ ಬಿದ್ದಾಗ ಗಳ ಹಿರಿದರು ಎಂಬಂತೆ, ಯಾವುದಾದರೂ ಸಂದರ್ಭ ಸಿಕ್ಕರೆ ಸಾಕು ಕೋಮುವಾದದ ಬೆಂಕಿ ಹಚ್ಚಲು ಪ್ರಯತ್ನಿಸುತ್ತಾರೆ. ಬಸವಾದಿ ಶರಣರ ವಿಚಾರಗಳನ್ನು ತಮ್ಮ ಬದುಕಿನುದ್ದಕ್ಕೂ ಜತನದಿಂದ ಕಾಯ್ದುಕೊಂಡು ಬಂದವರು ನಾವು, ಅವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಶರಣಬಸವೇಶ್ವರರ ಬಳಿವಿಡಿದು ಬಂದವರು ನಾವು ಎಂದು ಹೇಳುವ ಲಿಂಗಾಯತರು ಮಾತ್ರ ಇಲ್ಲಿ ತಮಗೆ ಅರಿವಿಲ್ಲದೆ ಬಿಜೆಪಿಯ ಚೆಡ್ಡಿ ತೊಟ್ಟುಕೊಂಡು ಕುಣಿಯುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಸ್ವತಃ ಶರಣಬಸವೇಶ್ವರರ ರಕ್ತ ಸಂಬಂಧಿಗಳೇ ಆಗಿರುವ ಡಾ.ಶರಣಬಸವಪ್ಪ ಅಪ್ಪ ಅವರ ಸಹೋದರ ಬಸವರಾಜಪ್ಪ ಅಪ್ಪನೆ ಚೆಡ್ಡಿಗಳ ಜೊತೆ ಲಾಠಿ ತಿರುವುತ್ತಿರುವುದು ಆತಂಕ ಹುಟ್ಟಿಸುತ್ತದೆ.


ಖಮರುಲ್ ಇಸ್ಲಾಂ


ಜನಸಾಮಾನ್ಯರನ್ನು ಹೀಗೆ 'ದಿಶಾ ಬೂಲ್' ಮಾಡಿ ತಮ್ಮ ಓಟ್ ಬ್ಯಾಂಕ್‌ನ್ನು ವಿಸ್ತರಿಸಿಕೊಂಡ ಬಿಜೆಪಿ ಕಳೆದ ಸಲ ಚಂದ್ರಶೇಖರ ಪಾಟೀಲ ರೇವೂರ ಎಂಬ ಗೌಡಕಿ ಮನುಷ್ಯನನ್ನು ಚುನಾವಣೆಯ ಕಣಕ್ಕೆ ಇಳಿಸಿ ಜಯ ಸಾಧಿಸಿತು. ಹೇಳಿ ಕೇಳಿ ಎಲ್ಲ ತುಂಬಿರುವ ಮನುಷ್ಯನಾದ ಚಂದ್ರಶೇಖರ ಪಾಟೀಲ ಐದು ನೂರು ಎಕರೆ ಭೂಮಿ ಹೊಂದಿರುವ ಭೂ ಮಾಲೀಕ. ಮೇಲಾಗಿ ಜನಸಾಮಾನ್ಯರ ನೋವಿಗೆ ಸ್ಪಂದಿಸಬೇಕು ಎಂಬ ಇಚ್ಛೆಯಾಗಲಿ, ಗರ್ವ ಆಗಲಿ ಎರಡೂ ಇಲ್ಲದವ. ಕಲಬುರ್ಗಿಯ ಶಾಸಕನಾದ ನಂತರವೂ ಒಂದು ದಿನವೂ ತನ್ನ ಕ್ಷೇತ್ರದ ಜನತೆಯ ಅಹವಾಲುಗಳನ್ನು ನೋಡುವುದಿರಲಿ, ಅವನ್ನು ಕಿವಿಯ ಮೇಲೆ ಸಹ ಹಾಕಿಕೊಳ್ಳದ ಮನುಷ್ಯ. ತನ್ನ ಸುತ್ತಮುತ್ತಲೂ ತನ್ನಂತೆ ಎಲ್ಲ ತುಂಬಿರುವವರನ್ನು ಇಟ್ಟುಕೊಂಡು ರಾಜಕೀಯ ಮಾಡತೊಡಗಿದರೆ ಅದು ಜನಸಾಮಾನ್ಯರಿಗೆ ಎಂದಾದರೂ ತಲುಪಲು ಸಾಧ್ಯವೆ?

ತಲೆಯ ಮಾಸು ಇನ್ನೂ ಆರಿರದ ಕೆಲವು ಪಡ್ಡೆ ಹುಡುಗರ ಪಟಾಲಂ ಹಾಗೂ ಹತ್ತು ಹನ್ನೆರಡು ಜನ ಕಾರ್ಪೊರೇಟರ್‌ಗಳನ್ನು ತನ್ನ ಜೊತೆ ಕರೆದುಕೊಂಡು ಇದ್ದು ಬಿಟ್ಟರೆ ಎಂಎಲ್‌ಎಗಿರಿಯನ್ನು ಅನುಭವಿಸಿದಂತೆ ಎಂಬುದು ರೇವೂರನ ಅಭಿಮತ. ಸ್ವತಃ ತಮ್ಮ ಪಾರ್ಟಿಯ ರಾಜ್ಯಮಟ್ಟದ ಲೀಡರ್‌ಗಳಿರಲಿ, ಜಿಲ್ಲಾ ಮಟ್ಟದ ಲೀಡರ್‌ಗಳ ಜೊತೆ ಸಹಿತ ಎಂದೂ ಬೆರೆಯದೆ ಐಷಾರಾಮಿ ಜೀವನ ನಡೆಸುವ ಆಸಾಮಿ ಈತ. ಇಂಥ ಜನಸಂಪರ್ಕವೇ ಇಲ್ಲದ ರೇವೂರ ಜನನಾಯಕನಾದುದಾದರೂ ಹೇಗೆ? ಎಂಬ ಚಿಂತೆ ನಿಮಗೆ ಈಗಾಗಲೇ ಕಾಡಿದ್ದರೆ ಅದಕ್ಕೆ ಇಲ್ಲಿನ ಮಾಜಿ ಮಂತ್ರಿ - ಶಾಸಕ ಖಮರುಲ್ ಇಸ್ಲಾಂನನ್ನು ಖಂಡಿತ ಹೊಣೆಗಾರನನ್ನಾಗಿ ಮಾಡಬೇಕಾಗುತ್ತದೆ. ಏಕೆಂದರೆ ಹಿಂದೊಮ್ಮೆ ಈ ಖಮರುಲ್ ಇಸ್ಲಾಂ ಜಗತ್ ಸರ್ಕಲ್‌ನಲ್ಲಿಯೆ ಮುಸ್ಲಿಂ ಜನಾಂಗವನ್ನು ಉದ್ದೇಶಿಸಿ ಮಾತನಾಡುತ್ತ "ಕಲಬುರ್ಗಿಯನ್ನು ಚೋಟಾ ಪಾಕಿಸ್ತಾನ ಮಾಡುವುದಾಗಿ" ಹೇಳಿಕೆ ನೀಡುವ ಮೂಲಕ ಬಹುತೇಕ ಮುಸ್ಲಿಂರ ಓಟ್ ಬ್ಯಾಂಕ್ ತನ್ನತ್ತ ಸೆಳೆಯುವ ಕೀಳು ರಾಜಕೀಯ ಮಾಡಿದ್ದ. ಇದನ್ನು ಕಂಡ-ಕೇಳಿದ ಹಿಂದೂಗಳೆಲ್ಲ ತಮಗೆ ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಬಿಜೆಪಿಯ ಮತ್ತೊಬ್ಬ 'ಖೋಮೇನಿ ಮುಖವಾಡದ ರೇವೂರ'ಗೆ ಮತನೀಡಿ ಗೆಲ್ಲಿಸಿದ್ದರು. ಆಗ ಬಹುತೇಕ ಜನಸಾಮಾನ್ಯರು ಖಮರುಲ್ ಇಸ್ಲಾಂನನ್ನು 'ಕಮ್ಯುನಲ್ ಇಸ್ಲಾಂ' ಎಂದೇ ಸಂಬೋಧಿಸಿ ಕರೆಯುತ್ತಿದ್ದರು.

ಇದೇನೆ ಇರಲಿ, ಸಂಪೂರ್ಣ ಗೌಡ್ಕಿ ಲೆಕ್ಕದಲ್ಲಿರುವ ರೇವೂರ ಹಿಂದೆ ತಾನು ಎಂಎಲ್‌ಎ ಆಗದಿದ್ದಾಗ ಬೀದಿಯಲ್ಲಿ ನಿಂತು ಕಲಬುರ್ಗಿ ರಸ್ತೆಗಳ ಅಗಲೀಕರಣದ ಕುರಿತು, ಇಲ್ಲಿನ ಡ್ರೈನೇಜ್ ಕುರಿತು, ನೀರಿನ ಸಮಸ್ಯೆ ಕುರಿತು ಒಂದೆಸಮ ಬೊಂಬಡಾ ಬಜಾಯಿಸಿದ್ದ. ಧರಣಿ ಗಿರಣಿ ಅಂತ ನಾಟಕವನ್ನೂ ಆಡಿದ್ದ. ಅಂದಿನ ಎಲ್ಲಾ ಪೌರುಷಗಳು ಗೆದ್ದು ಬಂದನಂತರ ಉತ್ತರಕುಮಾರನ ಪೌರುಷದಂತೆ ಕಾಣತೊಡಗಿದೆ. ಹಿಂದೆ ನೀರಾವರಿ ಇಲಾಖೆಗೆ ಕೀಲಿ ಜಡಿದು ಬೀದಿ ರಂಪ ಮಾಡಿದ್ದ ರೇವೂರ ಬಾಯಿಗೆ ಈಗ ಬೀಗ ಬಿದ್ದದ್ದಾದರೂ ಹೇಗೆ? ಎಂಬುದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ. "ಹಾವು ತಿಂದವರ ನುಡಿಸಬಹುದು. ಗರ ಹೊಡೆದವರ ನುಡಿಸಬಹುದು. ಸಿರಿಗರ ಹೊಡೆದವರ ನುಡಿಸಲಾಗದು" ಎಂಬಂತೆ ಶ್ರೀಮಂತಿಕೆಯ ಉಪ್ಪರಿಗೆಯಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತ ರೇವೂರನನ್ನು ಶ್ರೀಸಾಮಾನ್ಯ ಮಾತನಾಡಿಸಲಿಕ್ಕೆ ಸಾಧ್ಯವಿಲ್ಲವೆಂದ ಮೇಲೆ ಅವನ ಕೆಲಸ ಯಾವತ್ತು ಆಗಬೇಕು? ಹಿಂದಿನಿಂದಲೂ ರೇವೂರನದು ವತನದಾರಿಕೆಯ ಮನೆತನವಾದರೂ 'ಧನದ ದಾಹ' ಮಾತ್ರ ಹಿಂಗಿಲ್ಲ. ತನ್ನ ಕುಮಾರ ದತ್ತಾತ್ರೇಯ ಪಾಟೀಲ ಮೂಲಕ ನಡೆಸಿದ ವಸೂಲಿ, ವರ್ಗಾವಣೆ ದಂಧೆಯಲ್ಲಿ ಕಮಾಯಿಸಿದ ಹಣಕ್ಕೆ ಮಿತಿ-ಮೆರೆಯೇ ಇಲ್ಲ.


ಚಂದ್ರಶೇಖರ ಪಾಟೀಲ ರೇವೂರ

ಪ್ರಜಾಪ್ರಭುತ್ವದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲದ ಈ ರೇವೂರ ಹಿಂದೊಂದು ಸಂದರ್ಭದಲ್ಲಿ ಗುಲಬರ್ಗಾಕ್ಕೆ ಆಗಮಿಸಿದ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಬಹಿರಂಗ ಸಭೆಯಲ್ಲಿ ಏನು ಕೇಳಿದರು ಗೊತ್ತೆ? "ನಮ್ಮ ಕಡೆಗೆ ಇರೋ ಒಂದಿಬ್ಬರು ನೌಕರರ ವರ್ಗಾವಣೆ ಮಾಡಲು ಬಹಳಷ್ಟು ಚಾಲತ್ತರೂ ಇವ ರ್‍ಯಾಕೋ ಕಿವಿಯಮ್ಯಾಲೆ ಹಾಕಿಕೊಳ್ಳುತ್ತಿಲ್ಲ? ಈಗಲಾದರೂ ಅವನ್ನು ಮಾಡಿಕೊಡುತ್ತೇನೆಂದು ನಿಮ್ಮೆಲ್ಲರ ಎದುರು ಭರವಸೆ ನೀಡಲಿ!" ಎಂದು ಹೇಳಿ ತನ್ನ ಅಜ್ಞಾನವನ್ನು ಸಾರ್ವಜನಿಕವಾಗಿಯೆ ಪ್ರದರ್ಶಿಸಿದ್ದ. ಹಳ್ಳಿಯ ಮಟ್ಟದಲ್ಲಿ 'ಗೌಡ್ಕಿ' ಮಾಡಲು ಮಾತ್ರ ಲಾಯಕ್ಕಾದವನನ್ನು ತಂದು ಪಟ್ಟಣದ ಎಂಎಲ್‌ಎಗಿರಿಯನ್ನು ಕೊಟ್ಟರೆ ಏನಾಗಬಹುದು ಎಂಬುದಕ್ಕೆ ಈ ರೇವೂರ ಉತ್ತಮ ಉದಾಹರಣೆಯಾಗಿದ್ದಾನೆ. ಆದ್ದರಿಂದ ಈ ಬಾರಿ ರೇವೂರ ಮಹಾಶಯನನ್ನು ಅಮರನಾಥ ಪಾಟೀಲ ಹಾಗೂ ಶಶಿಲನಮೋಶಿ ತರಹದ ಚೆಡ್ಡಿಗಳೇ ಬಹಿರಂಗವಾಗಿ ವಿರೋಧಿಸುತ್ತಿವೆ.


ಎಸ್.ಕೆ. ಕಾಂತ

ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಕಮ್ಯುನಲ್ ಇಸ್ಲಾಂ ಖ್ಯಾತಿಯ ಖಮರುಲ್ ಇಸ್ಲಾಂ ತನ್ನ ಹಿಂದಿನ ಪ್ಲೇಟ್ ಬದಲಾಯಿಸಿ ಈ ಸಲ ಬದಲಾದಂತೆ ಕಂಡುಬರುತ್ತಿದ್ದಾನೆ. ಮುಂದಿನ ಶಾಸಕತ್ವದ ಅಖಾಡಕ್ಕೆ ತನ್ನ ಕುದುರೆಯೂ ರೇಸ್‌ನಲ್ಲಿ ಇದೆ ಎಂಬುದನ್ನು ಆಗಾಗ ತೋರಿಸಿಕೊಳ್ಳುತ್ತಿದ್ದಾನೆ. ಇತ್ತೀಚಿನ ಕಾರ್ಪೊರೇಷನ್ ಚುನಾವಣೆಯಲ್ಲಿ ಮುಸ್ಲಿಂ ಜನಾಂಗವೇ ಹೆಚ್ಚು ಸಂಖ್ಯೆಯಲ್ಲಿರುವ ವಾರ್ಡವೊಂದರಲ್ಲಿ ಭೀಮರೆಡ್ಡಿ ಪಾಟೀಲ ಕುರಕುಂದಾ ಎಂಬ ಹಿಂದೂ ವ್ಯಕ್ತಿಯೊಬ್ಬನನ್ನು ನಿಲ್ಲಿಸಿ ಗೆಲ್ಲಿಸಿದ್ದು ಈತನ ಹಿಂದೂ- ಮುಸ್ಲಿಂ ಸೌಹಾರ್ದತೆ ಮನಸ್ಸಿನ ಪ್ರತೀಕ ಎಂತಲೂ ಹೇಳುವವರಿದ್ದಾರೆ. ಇದು ಕೇವಲ ತಾತ್ಕಾಲಿಕ ನಾಟಕ ಎಂದು ಹೀಗಳೆಯುವವರೂ ಇದ್ದಾರೆ. ಇದಕ್ಕೆಲ್ಲ ಕಾಲವೇ ಉತ್ತರ ಹೇಳಬೇಕು.

ಜೆಡಿಎಸ್ ಗುಲಬರ್ಗಾದಲ್ಲಿ ಮಕಾಡೆ ಮಲಗಿಬಿಟ್ಟಿದೆ. ಆದರೆ ಎಸ್.ಕೆ.ಕಾಂತಾ ಮಾತ್ರ ಅಳಿದ ಊರಿಗೆ ಉಳಿದವನೆ ಗೌಡ ಎನ್ನುವಂತಾಗಿದೆ. ಕಾರ್ಮಿಕರ-ಬಡಜನತೆಯ ಬಗೆಗೆ ನಿಜವಾದ ಕಾಳಜಿ ಇಟ್ಟುಕೊಂಡು ಮಾಡುವ ಹೋರಾಟವೆ ತನ್ನ ರಾಜಕೀಯ ಎಂದು ತಿಳಿದುಕೊಂಡಿರುವ ಕಾಂತಾ ಒಂದೊಂದು ಸಲ ತಾವು ಇರುವ ಪಾರ್ಟಿಯ ಜನಕ್ಕೇ ಮಗ್ಗುಲ ಮುಳ್ಳಾಗುವವರು. ಹೀಗಾಗಿ ಜೆಡಿಎಸ್ ಪಾರ್ಟಿಯ ಜನವೇ ಒಳಗೊಳಗೆ ಕಾಂತಾ ಅವರನ್ನು ವಿರೋಧಿಸುತ್ತಾರೆ. ಅಲ್ಲದೆ "ಪಾಪ ಕಾಂತಾ ಒಳ್ಳೆಯವರು. ಹೋರಾಟಗಾರರು. ಪ್ರಾಮಾಣಿಕರು. ಆದರೆ ಇಂದಿನ ಡರ್ಟಿ ದಿನಮಾನಗಳಲ್ಲಿ ಅವರಂತಹವರು ಗೆದ್ದು ಬರಬಲ್ಲರೆ?" ಎಂದು ಅವರ ಪಾರ್ಟಿಯ ಜನರೇ ಮಾತಾಡುವಾಗ ಅವರೆಲ್ಲ ಕಾಂತಾರ ಗೆಲುವಿಗೆ ಅದೆಷ್ಟು ಶ್ರಮಿಸಬಲ್ಲರು? ಇದನ್ನು ಜನಸಾಮಾನ್ಯರೆ ಸರಿಯಾಗಿ ಅರಿತು ರಚನಾತ್ಮಕವಾಗಿ ಚುನಾವಣೆಯಲ್ಲಿ ಮತ ಚಲಾಯಿಸಿದ್ದೇ ಆದರೆ ಕಾಂತಾ ಎಂಬ ಅಪರೂಪದ ರಾಜಕಾರಣಿ ಈ ಸಲ ಗೆದ್ದು ಬರಬಹುದು?

ಆದರೆ ಇದೆಲ್ಲ 'ರೇ' ರಾಜ್ಯಕ್ಕೆ ಸಂಬಂಧಿಸಿದ್ದರಿಂದ ಇದನ್ನು ಕಾಲವೆ ನಿರ್ಧರಿಸಬಲ್ಲುದು ಎಂದು ಮಾತ್ರ ಹೇಳಬಹುದು.

-ವಿಶ್ವಾರಾಧ್ಯ ಸತ್ಯಂಪೇಟೆ

ರಾಜಕಾರಣದ ರಾಡಿಯಲ್ಲಿ ಸಿಕ್ಕುಬಿದ್ದಿರುವ ರೈತರು

ಒಂದೆಡೆ ತಮ್ಮ ಭೂಮಿಯನ್ನು ಕೊಡೊಲ್ಲ ಅಂತ ಹೋರಾಟ ಮಾಡುತ್ತಿರುವ ರೈತರು. ಇನ್ನೊಂದು ಕಡೆ ಆ ಭೂಮಿ ಬೇಕೇಬೇಕೆಂದು ಹಠಕ್ಕೆ ಬಿದ್ದಿರುವ ಸರ್ಕಾರ. ಇಲ್ಲಿಯತನಕ ಈ ಜಗ್ಗಾಟದಲ್ಲಿ ರೈತರು ಧರಣಿ ಕೂತಿದ್ದಾರೆ, ಸತ್ಯಾಗ್ರಹ ಮಾಡಿದ್ದಾರೆ, ಒಬ್ಬ ವಿಷ ಸೇವಿಸಿ ಸಾವಿನ ದವಡೆವರೆಗೂ ಹೋಗಿಬಂದಿದ್ದಾನೆ. ಮತ್ತೀಗ ಎಲ್ಲರೂ ಧರಣಿ ಕೂತಿದ್ದಾರೆ. ಆದರೆ ಇದು ಯಲಬುರ್ಗಿ ಹೊರತಾಗಿ ಎಲ್ಲೂ ಸುದ್ದಿಯಾಗಿಲ್ಲ.

ಅತ್ತ ವಿಶೇಷ ಆರ್ಥಿಕ ವಲಯಕ್ಕೆಂದು ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪಶ್ಚಿಮ ಬಂಗಾಳದ ಸರಕಾರ ಸಜ್ಜಾದಾಗ ನಂದಿಗ್ರಾಮದ ಸಾವಿರಾರು ರೈತರು ಹೋರಾಟದಲ್ಲಿ ನಿರತರಾಗಿರುವಾಗ, ಇತ್ತ ಸಾವಿರಾರು ಎಕರೆ ಭೂಮಿಯನ್ನು ಯಾವ ಕ್ಷಣದಲ್ಲಾದರೂ ಕರ್ನಾಟಕ ಸರಕಾರ ತನ್ನ ವಶಕ್ಕೆ ಪಡೆದುಕೊಳ್ಳಬಹುದೆಂಬ ಆತಂಕದಲ್ಲಿ ನಂದಗುಡಿಯ ನೂರಾರು ರೈತರು ಇರುವಾಗ, ಕೇವಲ ಹನ್ನೊಂದು ಎಕರೆಯ ತಮ್ಮ ಭೂಮಿಗಾಗಿ ಹನ್ನೊಂದು ರೈತರು ನಡೆಸುತ್ತಿರುವ ಹೋರಾಟ ಅದು ಹೇಗೆ ರಾಜ್ಯದ ಸುದ್ದಿಯಾಗುತ್ತದೆ?

ಆದರೆ ಅವರದ್ದೂ ಒಂದು ಬದುಕು, ಅವರದ್ದೂ ಒಂದು ಹೋರಾಟ ಎಂಬುದು ಮಾತ್ರ ವಾಸ್ತವ.

ಕಳೆದ ಒಂದು ವರ್ಷದಿಂದ ಈ ವಿವಾದ ನಡೆಯುತ್ತಿದೆ. ಹೋದ ವರ್ಷ ಜನವರಿಯಲ್ಲಿ ನೂರು ಹಾಸಿಗೆಗಳ ಆಸ್ಪತ್ರೆಯ ನಿರ್ಮಾಣಕ್ಕೆಂದು ಯಲಬುರ್ಗಿಯ ಸರ್ವೆ ನಂ. 350, 351ರ ಒಟ್ಟು 11 ಎಕರೆ 31 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಆದರೆ ಅದೇ ಭೂಮಿಯನ್ನು ಅವಲಂಬಿಸಿ ತಮ್ಮ ಬದುಕನ್ನು ಸಾಗಿಸುತ್ತಿರುವ ಹನ್ನೊಂದು ರೈತರು ಮತ್ತು ಪಕ್ಕದ ನಿವೇಶನಗಳ 20 ಮಾಲೀಕರು ಆ ಕ್ರಮದ ವಿರುದ್ಧ ತಕರಾರು ಅರ್ಜಿಯನ್ನು ಸಲ್ಲಿಸಿದರು. ಅಲ್ಲಿಂದ ಇಲ್ಲಿಯತನಕ ಈ ಇಡೀ ವಿವಾದವನ್ನು ಯಲಬುರ್ಗಿ ಹಾಸಿ-ಹೊದ್ದು, ಮಲಗಿ-ಎದ್ದು ಒಂದು ವರ್ಷ ಕಳೆದಿದ್ದರೂ ಪರಿಹಾರ ಮಾತ್ರ ಕಾಣಿಸುತ್ತಿಲ್ಲ.


ಇದಕ್ಕೆ ಬೇರೇನೂ ಕಾರಣವಿಲ್ಲ, ಬದಲಾಗಿ ಇಲ್ಲಿನ ಮಾಜಿ ಶಾಸಕ ಬಸವರಾಜ ರಾಯರೆಡ್ಡಿಯ ಕರಾಮತ್ತು ಮತ್ತು ಸ್ಥಳೀಯ ಚೆಡ್ಡಿಗಳ ಮಸಲತ್ತು. ಇವರಿಬ್ಬರ ನಡುವೆ ಸಿಕ್ಕಿಕೊಂಡಿರುವ ರೈತರು ಮಾತ್ರ ಬರ್ಬಾದು ಎಂಬಂತಾಗಿದೆ.

ರೈತರ ಒಪ್ಪಿಗೆಯಿಲ್ಲದೇ ಅವರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೆ ಹಿಂದೆ ರಾಯರೆಡ್ಡಿ ಕುಮ್ಮಕ್ಕು ಇತ್ತು, ಈ ವಿಷಯ ಗೊತ್ತಾದ ಕೂಡಲೇ ಎಚ್ಚೆತ್ತುಗೊಂಡ ಬಿಜೆಪಿಗಳು ಕೇವಲ ರಾಜಕೀಯ ಲಾಭಕ್ಕಾಗಿ ರೈತರ ಪರವಾಗಿ ಕಣಕ್ಕಿಳಿದರು. ಅದನ್ನು ಕಂಡ ಮತ್ತಷ್ಟು ವ್ಯಗ್ರಗೊಂಡ ರಾಯರೆಡ್ಡಿ ತನ್ನ ಹಠ ಸಾಧಿಸಲು ಪಣ ತೊಟ್ಟ. ಇವರಿಬ್ಬರ ಜಿದ್ದಾಜಿದ್ದಿಯಿಂದ ಈ ವಿವಾದ ಸದ್ಯದಲ್ಲೇ ಬಗೆಹರಿಯುವಂತಿಲ್ಲ.


ತಮ್ಮ ಭೂಮಿಗಾಗಿ ಧರಣಿ ಕುಳಿತ ರೈತರು

ಈ ಮಧ್ಯೆ ಯಲಬುರ್ಗಾ ತಾಲ್ಲೂಕಿನ ಕುದ್ರಿಕೊಟಗಿ ಗ್ರಾಮದ ಸಣ್ಣಕಲ್ಲಯ್ಯ ಮತ್ತು ಉಮೇಶನಾಯ್ಕ ಎಂಬುವವರು ಬಸ್ ಡಿಪೋಗೆ ಹೊಂದಿಕೊಂಡಿರುವ ತಮ್ಮ ಭೂಮಿಯನ್ನೇ ಸರ್ಕಾರಿ ದರದಲ್ಲಿ, ಆಸ್ಪತ್ರೆ ನಿರ್ಮಾಣಕ್ಕೆ ನೀಡುವುದಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ನೀಡಿದರು. ಆದರೆ ರೈತರ ಪ್ರತಿಭಟನೆಯನ್ನು ನಿರ್ಲಕ್ಷಿಸಿದಂತೆ ಇವರ ಪತ್ರವನ್ನೂ ಜಿಲ್ಲಾಧಿಕಾರಿಗಳು ನಿರ್ಲಕ್ಷಿಸಿದರು.

ರಾಯರೆಡ್ಡಿಯ ಪಿತೂರಿ ಮತ್ತು ಚೆಡ್ಡಿಗಳ ಅವಕಾಶವಾದಿತನವನ್ನು ಕಂಡು ಅಂದಿನ ಸಚಿವ ಇಕ್ಬಾಲ್ ಅನ್ಸಾರಿಯವರು "ಪ್ರತಿಭಟನಾನಿರತ ಹನ್ನೊಂದು ರೈತರು ತಮ್ಮ ಜೀವನೋಪಾಯಕ್ಕೆ ಆ ಭೂಮಿಯನ್ನು ಆಧರಿಸಿರುವುದರಿಂದ ಅದನ್ನು ವಶಪಡಿಸಿಕೊಳ್ಳಬಾರದು" ಎಂದು ಕಂದಾಯ ಇಲಾಖೆಗೆ ಪತ್ರ ಬರೆದರು. ಅದರ ಪ್ರತಿಯನ್ನು ಅಂದಿನ ಕಂದಾಯ ಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಣ್ಣಿನ ಮೊಮ್ಮಗ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಗೂ ಕಳುಹಿಸಿದರು ಇಕ್ಬಾಲ್ ಅನ್ಸಾರಿ.


ರಾಯರೆಡ್ಡಿ

ಆದರೆ ಅಧಿಕಾರದಲ್ಲಿದ್ದವರಿಂದ ಯಾವ ಪ್ರತಿಕ್ರಿಯೆಯೂ ಬಾರಲಿಲ್ಲ, ರಾಯರೆಡ್ಡಿಯ ಕರಾಮತ್ತೂ ನಿಲ್ಲಲಿಲ್ಲ. ಇದೆಲ್ಲದರ ಮಧ್ಯೆ, ತಮ್ಮ ಭೂಮಿಯನ್ನು ಕಳೆದುಕೊಳ್ಳುವ ಭಯದಲ್ಲಿ ಬದುಕು ಸವೆಸುತ್ತಿದ್ದ ರೈತರು ಕಂಗಾಲಾಗಿ ತಹಶೀಲ್ದಾರರ ಕಚೇರಿ ಮುಂದೆ ಅಮರಣಾಂತ ಉಪವಾಸವನ್ನು ಪ್ರಾರಂಭಿಸಿದರು. ಅವರಲ್ಲಿ ಒಬ್ಬರಾದ ಶಿವಶಂಕರಗೌಡ ಎಂಬುವವರ ವಯಸ್ಸು 90. ಅಮರಣಾಂತ ಉಪ ವಾಸದಿಂದ ಅವರ ಆರೋಗ್ಯ ಕೆಟ್ಟು ಅವರ ಜೀವ ಅಪಾಯದಲ್ಲಿತ್ತು. ಆಗ ರೈತರು ಪ್ರತಿಭಟಿಸುತ್ತಿದ್ದಲ್ಲಿಗೆ ಓಡೋಡಿ ಬಂದ ಎಸಿ ಗಂಗೂಬಾಯಿ ಮಾನ್ಕರ್ ರೈತರ ಮನವೊಲಿಸಿ ಉಪವಾಸ ಹಿಂತೆಗೆದುಕೊಳ್ಳುವಂತೆ ಮಾಡಿದರು.

ಅಷ್ಟೇ ಅಲ್ಲ, "ಭೂಮಿ ಕಳೆದುಕೊಳ್ಳುವ ರೈತರು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಇಟ್ಟುಕೊಳ್ಳುತ್ತೇವೆ. ನೇಣು ಹಾಕಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಅವರೆಲ್ಲ ಅತಿಸಣ್ಣ ಹಿಡುವಳಿದಾರರು. ಅವರಿಗೆ ಬೇರೆ

...ಯಚೂರು ಜಿಲ್ಲೆಯ ದೇವದುರ್ಗದಲ್ಲಿ ಈಗ ...ವ ಅನಾರ್ಕಿ-ಅರಾಜಕತೆಯನ್ನು ಬಹುಶಃ ...ವರೇ ಬಂದು ನೆಲೆ ನಿಂತು ಸುಧಾರಿಸಬೇಕೆಂದು ...ಸಿದವರೂ ಸೋತು ಹೋಗುತ್ತಾನೆಂದೆನಿಸುತ್ತದೆ. ...ಲ್ಲಿ ಬಹುತೇಕ ಕಾರಣ ಇಲ್ಲಿಯ ಮುತ್ಸದ್ದಿತನಕ್ಕೆ ...ವರೆಗೆ ಬಂದು "ಉಂಡೂ ಹೋದ ಕೊಂಡೂ ...ದ" ಎಂಬಂತೆ ಬಂದುಹೋದ ರಾಜಕಾರಣಿಗಳು, ...ಪಕ್ಷದ ರಾಜಕಾರಣಿಗಳು ದೇವದುರ್ಗವನ್ನು ತಮಗೆ ... ಸಾಧ್ಯವೋ ಅಷ್ಟಷ್ಟು ಹರಿದು ತಿಂದರು. ಆದರೆ ...ಲ್ಲಿ ಪ್ರಶ್ನಿಸಬೇಕಾದ ವಿವೇಕವಂತರು, ಪ್ರಜ್ಞಾವಂತರು ...ಗ್ಯಾಕೆ ಬೇಕು ಇಲ್ಲದ ಉಸಾಬರಿ?" ಎಂದು ...ಲ್ಲಿ ಕುಳಿತರು. ಅದೇರೀತಿ ಜನಸಾಮಾನ್ಯರಲ್ಲಿ ...ಚಾರದ ಬಾದಾಬಾನಗದಿಗಳನ್ನು ವಿವರಿಸಿ ಪ್ರಶ್ನೆ ...ಹಾಕಬೇಕಾದ ಪತ್ರಿಕಾಕರ್ತರು ಇಲ್ಲಿ 'ಬ್ಲಾಕ್‌ಮೇಲ್ ...ಗೆ' ಇಳಿದಿರುವುದೂ ಒಂದು ದುರಂತ. "ಏರಿ ...ಂಬದೆ ಬೇಲಿಕೇಯ ಮೇವೂಡೆ, ನಾರಿ ತನ್ನ ...ಮಲ್ಲಿ ಕಳವೂಡೆ ಇನ್ನಾರಿಗೆ ದೂರುವೆನಯ್ಯ?" ...ಂತೆ ಯಾರಿಗೂ ಹೇಳುವಂತಿಲ್ಲ-ಕೇಳುವಂತಿಲ್ಲ ... ನಿರ್ವೀರ್ಯಭಾವ ಬಹುತೇಕರಲ್ಲಿ ತುಂಬಿ ತುಳು...ತ್ತಿದೆ.

...ಹೀಗಾಗಿ ಸರಕಾರಿ ಇಲಾಖೆಯ ಕುರ್ಚಿಗಳಿಗೆ ...ಕೊಂಡಿರುವ ಬಹುತೇಕ ಬಾವುಗಗಳು, ಗಡವಗಳು, ...ಗಳು ತಮ್ಮ ಸಾಮ್ರಾಜ್ಯದಲ್ಲಿ ತಾವು ಯಾರ ...ರಿಲ್ಲದೆ ದುರಹಂಕಾರದಿಂದ ವರ್ತಿಸತೊಡಗಿವೆ.


ರಾಮಶೆಟ್ಟಿ

ದೇವದುರ್ಗ ತಾಲೂಕಿನ ಬಹಳಷ್ಟು ಜನ ಶಿಕ್ಷಕರಿಗೆ ಯಾಮಾರಿಸಿದ್ದಾನೆ. ತಾಲೂಕಿನ ಯಾವುದೇ ಶಿಕ್ಷಕ ತನ್ನ ಕಾರ್ಯಾಲಯದ ಹತ್ತಿರ ಸುಳಿದಾಡುವುದು ಕಂಡರೆ ಸಾಕು ಅವರನ್ನು ಕಚೇರಿಯ ಒಳಗಡೆ ಕರೆಯುತ್ತಾನೆ. ಅವರೆಲ್ಲರ ಮನೆಯ ಸಂಗತಿಗಳನ್ನು, ಕುಶಲವನ್ನು ವಿಚಾರಿಸುತ್ತಲೇ ಅನಾಮತ್ತು ಅವರ ಜೇಬಿಗೆ ಕೈಹಾಕಿ ನಾಲ್ಕೆಂಟು ದಿನಗಳಿಗೆ ಕೈಗಡವೆಂದು ಹಣ ಪಡೆಯುತ್ತಾನೆ. ಅನಂತರ ಆ ಹಣ ವಾಪಾಸು ಕೊಡುವುದು ಒತ್ತಟ್ಟಿಗಿರಲಿ, ಕೈಗಡದ ಹಣ ಕೇಳಲು ಬಂದ ಶಿಕ್ಷಕರಿಗೆ ರೋಫು ಹಾಕಿ ಕಳಿಸುತ್ತಾನೆ. ಇದಲ್ಲದೆ ಶಿಕ್ಷಕರು ಒಕ್ಕಲುತನದ ಮನೆಯವರಾಗಿದ್ದರಂತೂ ಅವರ ಹೊಲದಲ್ಲಿ ಬೆಳೆಯುತ್ತಿರುವ ಅಕ್ಕಿ, ಗೋಧಿ, ಜೋಳ, ಕೊನೆಗೆ ಸಜ್ಜೆಯನ್ನು ಮಾತ್ರವಲ್ಲ ಅವರ ತೋಟದಲ್ಲಿ ಬೆಳೆದ ಕಾಯಿಪಲ್ಯವನ್ನು ಯಾವ ನಾಚಿಕೆ ಇಲ್ಲದೆ ಬೇಡಿ ಪಡೆದುಕೊಳ್ಳುತ್ತಾನೆ. ಮೇಲುನೋಟಕ್ಕೆ ಸಂಭಾವಿತನಂತೆ ಕಂಡರೂ ಒಳಗೊಳಗೆ ಗುಮ್ಮನ ಗುಸುಗ ಎನ್ನುವ ವರ್ತನೆ ರಾಮಶೆಟ್ಟಿಯಲ್ಲಿ ಮನೆಮಾಡಿ ಕೊಂಡಿದೆ. ಎಂಥವರನ್ನೂ ಅಣ್ಣ-ತಮ್ಮ ಎಂದು ಸಂಭೋದಿಸುತ್ತ ಅವರ ತಲೆಯನ್ನು ಅವರ ಅರಿವಿಗೆ ಬರದಂತೆ ನುಣ್ಣಗೆ ಬೋಳಿಸುವ ದಂಧೆಯಲ್ಲಿ ನಿಷ್ಣಾತನಾದ ಈತನನ್ನು 'ಸೂಪರ್ ಹೈಟೆಕ್ ಬ್ಲೇಡ್ ರಾಮಶೆಟ್ಟಿ' ಎಂದು ಕರೆದರೆ ತಪ್ಪಾಗಲಾರದು.


ಕಳೆದ ಡಿಸೆಂಬರ್ ತಿಂಗಳಿನಲ್ಲಿ ತಾಲೂಕಿನ 14 ಜನ ಪ್ರಾಥಮಿಕ ಶಾಲೆಯ ಶಿಕ್ಷಕರು ತಮ್ಮ ತಮ್ಮ ಜಿಲ್ಲೆಯ ಶಿಕ್ಷಕರಾಗಿ ಆಯ್ಕೆಯಾದುದು ತಿಳಿಸುತ್ತ ಇಲ್ಲಿಯ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಹೋದರು. ಹಾಗೆ ಹೋದ ಅವರು ಅಲ್ಲಿ ತಮ್ಮ ಮೂಲ ದಾಖಲಾತಿಗಳನ್ನು ಸಲ್ಲಿಸಿ ಜ್ವಾಯಿನ್ ಆಗಬೇಕಾಗಿತ್ತು. ಆದರೆ ಅವರ ಮೂಲ ದಾಖಲಾತಿಗಳು ದೇವದುರ್ಗದ ಶಿಕ್ಷಣ ಇಲಾಖೆಯಲ್ಲಿ ಇದ್ದವು. ಅವರು ತಮ್ಮ ಹಿಂದಿನ ದಾಖಲಾತಿಗಳನ್ನು ಅರ್ಜೆಂಟ್ ಪಡೆಯಲೇಬೇಕಾಗಿತ್ತು, ಆಗ ಅವರೆಲ್ಲ ಸೇರಿ ರಾಮಶೆಟ್ಟಿಯನ್ನು ಭೇಟಿಯಾದರು. ಹೇಳಿಕೇಳಿ ರಾಮಶೆಟ್ಟಿ ಹೈಟೆಕ್ ಬ್ಲೇಡ್ ಕಂಪನಿಯವ. ತನ್ನನ್ನು ಹುಡುಕಿಕೊಂಡು ಬಂದ ಶಿಕ್ಷಕ ಮಿಕಗಳನ್ನು ಸುಮ್ಮನೆ ಬಿಟ್ಟಾನೆಯೆ? "ನಿಮ್ಮ ದಾಖಲಾತಿಗಳು ಅರ್ಜೆಂಟ್ ಬೇಕಿದ್ದರೆ ತಲಾ ನಲವತ್ತು ಸಾವಿರ ಭಕ್ಷೀಸು ನೀಡಿದರೆ ಆಗುತ್ತೆ" ಎಂದು ಹೇಳಿ ಅವರೆಲ್ಲರಿಂದ 5 ಲಕ್ಷ ಅರವತ್ತು ಸಾವಿರ ರೂ.ಗಳನ್ನು ಅನಾಮತ್ತು ಹೊಡ ಕೊಂಡು ಕುಳಿತ. ಅವರೆಲ್ಲರಿಂದ 10 ರೂಪಾಯಿಯ ಸ್ಟ್ಯಾಂಪ್ ಪೇಪರ್ ಮೇಲೆ ತಾವು ಖುದ್ದಾಗಿ, ಮನ ರಾಜಿಯಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಬಾಂಡ್ ಕೂಡ ಬರೆಯಿಸಿಕೊಂಡ. ಅವರನ್ನು ತನ್ನ ಸುಪರ್ದಿಯಿಂದ ರಿಲೀವ್ ಮಾಡಿದ. ತಾನು ಹೀಗೆಲ್ಲ ಮಾಡುತ್ತಿರುವುದು ಕಾನೂನಿಗೆ ವಿರುದ್ಧವಾದ ಕ್ರಮ ಎಂಬುದು ಈ ಬದ್ಮಾಶ ಅಧಿಕಾರಿಗೆ ಗೊತ್ತಿದ್ದರೂ ಅದನ್ನು ಆಯಾ ಶಿಕ್ಷಕರಿಗೆ ಹೇಳುವ ಗೋಜಿಗೆ ಹೋಗಲಿಲ್ಲ ಎಂಬುದು ಇಲ್ಲಿ ಗಮನಾರ್ಹ.

ದೇವದುರ್ಗದ ಶಿಕ್ಷಣ ಇಲಾಖೆಯಲ್ಲೊಂದು

ರಾಮಶೆಟ್ಟಿ ಎಂಬ ಹೆಗ್ಗಣ

...ನಾಯಿ ಬಾಲವನ್ನು ಅಲ್ಲಾಡಿಸುವ ಬದಲು ...ವೇ ನಾಯಿಯನ್ನು ...ಡಿಸುವ ಪರಿಸ್ಥಿತಿ ...ರ್ಣವಾಗಿದೆ. ಹೀಗಾಗಿ ...ದುರ್ಗದಲ್ಲಿನ ಸರಕಾರಿ ...ರಿಗಳ ಸಮೀಪಕ್ಕೆ ...ಗುತ್ತಿರುವಂತೆ ನಿಮ್ಮ ...ಗಿಗೆ ಅಡರಿಕೊಳ್ಳುವ ಗಬ್ಬು ...ನೆ ತಡಕೊಳ್ಳುವುದಕ್ಕೆ ...ವೆ ಇಲ್ಲ. ಶಿಕ್ಷಣ ಇಲಾಖೆಯ ...ರಿಯ ಹತ್ತಿರ ಹೋದರಂತೂ ... ಮೂಗು ಅಲ್ಲಿಯ ...ರ್ತಕ್ಕೆ ಕಡಿದುಬೀಳುತ್ತದೆ. ...ಮಶೆಟ್ಟಿ ಎಂಬ ಇಲ್ಲಿನ ಕ್ಷೇತ್ರ ...ಾಧಿಕಾರಿ ಶಿಕ್ಷಣ ಇಲಾಖೆಯ ...ವನ್ನು ಹರಾಜು ಹಾಕಿರುವ ... ಎಂಥವರನ್ನೂ ...ಗೊಳಿಸುತ್ತದೆ. ಇಡೀ ...ಕ್ಷೇತ್ರದ ಸರಕಾರಿ ಕಚೇರಿಗಳನ್ನು ಗುತ್ತಿಗೆ ಹಿಡಿದು ... ಮೂಲಗಳಿಂದ ಬಾಬ್ತು ಸಂಗ್ರಹಿಸುತ್ತಿದ್ದ ಆಲ್ಕೋಡ ...ಮಂತಪ್ಪ ಎಂಬ ಮಾಜಿ ಮಂತ್ರಿಯೆ ಇವನ ...ಷ್ಟ ಸಿಡಿದು ನಿಂತಿದ್ದಾನೆಂದರೆ ಇವನ 'ಹಲ್ಕಾ ...ಗಳು'' ಯಾವ ಪರಿ ಇರಬೇಕು?

...ಮಿತ್ರಗೆ ಮಾತಾಡುತ್ತ ಬಹಳ ಒಳ್ಳೆಯ ಆಫೀಸರ್ ... ಇಮೇಜನ್ನು ಸೃಷ್ಟಿ ಮಾಡುತ್ತಲೇ ಈ ರಾಮಶೆಟ್ಟಿ



ತ.ಮ.ವಿಜಯಭಾಸ್ಕರ್

ತಮ್ಮ ಜಿಲ್ಲೆಗೆ ತೆರಳಿ ಶಿಕ್ಷಕ ಹುದ್ದೆಗಳಿಗೆ ಜ್ವಾಯಿನ್ ಆಗಬೇಕೆಂದು ತರಾತುರಿಯಲ್ಲಿ ಹೋದ ಶಿಕ್ಷಕರಿಗೆ "ಈಗಾಗಲೇ ಶಿಕ್ಷಕ ಹುದ್ದೆಗೆ ಆಯ್ಕೆಯಾಗಿ ಬೇರೆ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಮತ್ತೆ (ತಮ್ಮ ಜಿಲ್ಲೆಗಳಲ್ಲಿ) ಆಯ್ಕೆಯಾಗಿದ್ದರೆ ಅಂತಹವರನ್ನು ಜ್ವಾಯಿನ್ ಮಾಡಿಕೊಳ್ಳಕೂಡದು" ಎಂಬ ಸರಕಾರಿ ಆಜ್ಞೆನೋಡಿ ಅವರೆಲ್ಲ ದಂಗಾಗಿಹೋದರು. ಸರಕಾರಿ ನೌಕರಿಯೇ ಹೋಯಿತಲ್ಲ ಎಂದು ಹೌಹಾರಿದರು. ಅವರೆಲ್ಲ ಮತ್ತೆ ಹಳೆಯ ಗಂಡನ ಪಾದವೇ ಗತಿ ಎಂದು ದೇವದುರ್ಗದ ಕೆ.ರಾಮಶೆಟ್ಟಿಯ ಕಾಲಿಗೆ ಬಿದ್ದು ಅವಲತ್ತುಕೊಂಡರು. ಹೇಗಾದರೂ ಮಾಡಿ ನಾವು ಈ ಹಿಂದೆ ನೀಡಿದ್ದ ರಾಜೀನಾಮೆ ಪತ್ರ ವಾಪಾಸು ಕೊಡಿರಿ, ನಮ್ಮನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಗೋಳಾಡಿದರು. ಇದನ್ನೆ ಮತ್ತೆ ಎನ್‌ಕ್ಯಾಶ್ ಮಾಡಿಕೊಂಡ ರಾಮಶೆಟ್ಟಿ ಅವರೆಲ್ಲರಿಂದ ಮತ್ತೆ ತಲಾ 20 ಸಾವಿರ ರೂಪಾಯಿಗಳಂತೆ ಒಟ್ಟು ಎರಡು ಲಕ್ಷ ಎಂಭತ್ತು ಸಾವಿರ ರೂ.ಗಳನ್ನು ಹೊಡೆದುಕೊಂಡ. ಹೀಗೆ ಏಕಾಏಕಿ ರಿಲೀವ್ ಮಾಡುವುದು, ಮತ್ತೆ ಅವರನ್ನು ಕೆಲಸಕ್ಕೆ ಜ್ವಾಯಿನ್ ಮಾಡಿಸಿಕೊಳ್ಳುವುದು ಸರಿಯಲ್ಲ ಎಂದು ಹೇಳಿದ ಮುಖ್ಯ ಗುರುಗಳಿಗೆ ಫೋರ್ಸ್ ಮಾಡಿ ಜ್ವಾಯಿನ್ ಮಾಡಿಸಿದ. ಕೇವಲ ಒಂದು ತಿಂಗಳ ಅವಧಿಯಲ್ಲಿ ಈತ ತನ್ನ ಗುಡಾಣಕ್ಕೆ ಈ ಮೂಲದಿಂದ ಸೇರಿಸಿಕೊಂಡ ಒಟ್ಟು ಮೊತ್ತ ಕೇವಲ ಎಂಟು ಲಕ್ಷ ನಲವತ್ತು ಸಾವಿರ ಮಾತ್ರ!

'ಸರ್ವಶಿಕ್ಷಣ ಅಭಿಯಾನ'ದ ಅಡಿಯಲ್ಲಿ ನಿರ್ಮಿಸಬೇಕಿರುವ ಶಾಲಾ ಕಟ್ಟಡಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಗಂಗೋತ್ರಿ ನೋಡಿದರೆ ಎದೆ ಬಿರಿದು ಹೋಗುತ್ತದೆ. ಅಲ್ಲಲ್ಲಿಯ ಹೆಡ್‌ಮಾಸ್ಟರ್ ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರನ್ನು ಹಿಡಕೊಂಡು ದುಡ್ಡನ್ನು ಅನಾಮತ್ತು ಬಾಚಿ ತನ್ನ ಉಡೆಗೆ ಬಳಕೊಂಡಿದ್ದಾನೆ. ಕೆಲವು ಕಡೆ ಕಟ್ಟಡಗಳೇ ಇಲ್ಲ, ಆದರೂ ದುಡ್ಡನ್ನು ಮಾತ್ರ ಸಂಪೂರ್ಣ ಡ್ರಾ ಮಾಡಲಾಗಿದೆ. ಇನ್ನು ಹಲವು ಕಡೆ ನಿರ್ಮಿಸಿದ ಕಟ್ಟಡಗಳು ನೀವು ಜಾಡಿಸಿ ಒದ್ದರೆ ಉದುರಿಬೀಳುವ ಕಳಪೆ ಕಾಮಗಾರಿಯಾಗಿವೆ. ತಾಲೂಕಿನ ಸೋಮನ ಮರಡಿ, ಬೊಮ್ಮನಹಳ್ಳಿ, ಭೂಮನಗುಂಡ, ಹೇರೂರ, ಎಚ್.ಎಸ್.ತಾಂಡಾ ಹಾಗೂ ದೇವದುರ್ಗದ ಕನ್ಯಾ ಹಿ.ಪ್ರಾ.ಶಾಲೆಗಳನ್ನು ನನ್ನ ಮಾತಿಗೆ ಉದಾಹರಣೆಯಾಗಿ ಪರಿಶೀಲಿಸಬಹುದು. ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಇರುವ 'ಆಶಾಕಿರಣ ಯೋಜನೆ'ಯ ಸಂಪೂರ್ಣ ಹಣ (ಅಮೇಧ್ಯ) ರಾಮಶೆಟ್ಟಿ ಹಾಗೂ ದಯಾನಂದ ಎಂಬ ಬಿಆರ್‌ಸಿ ನುಂಗಿ ನೀರು ಕುಡಿದಿವೆ. ತಾಲೂಕಿನ 27 ಶಾಲೆಗಳಿಗೆ 50 ಸಾವಿರ ರೂಪಾಯಿಗಳಂತೆ, ತಲಾ 10 ಸಾವಿರದಂತೆ 27 ಶಾಲೆಗಳಿಗೆ, 15000 ಸಾವಿರದಂತೆ 126 ಶಾಲೆಗಳಿಗೆ 'ಕಲಿಕಾ ಸಾಮಗ್ರಿ'ಯ ಉಪಕರಣ ಖರೀದಿ ಮಾಡಬೇಕಿರುವ ಹಣವಂತೂ ನೇರ ಜಿ.ಶರಣಪ್ಪ ಎಂಬ ಇನ್‌ಚಾರ್ಜ ಬಿಆರ್‌ಸಿ ಮೂಲಕ ಈತನ ಕಿಸೆ ಸೇರಿದೆ. ಬೊಟ್ಟ, ಏಜೆನ್ಸಿಯ ಮೂಲಕ ಕಲಿಕಾ ಸಾಮಗ್ರಿಗಳನ್ನು ಖರೀದಿಸಿದಾಗಿ ಹೇಳಿ ಎಲ್ಲವನ್ನೂ ಬಾಚಿ ಬಳಕೊಂಡ

ಕಳ್ಳ ಮೌನ ತಳೆದಿರುವ ಎಂ.ಪಿ.ವೆಂಕಟೇಶ್ ನಾಯಕ

ಹಾಡುಹಗಲೇ ರಾಮಶೆಟ್ಟಿ ಇಡೀ ದೇವದುರ್ಗದ ಶಿಕ್ಷಣ ಇಲಾಖೆಗೆ ಬಂದ ದುಡ್ಡನ್ನು ಸವರ್‍ಯಾಡಿ ತಿನ್ನುತ್ತಿರುವಾಗ ಇಲ್ಲಿನ ಎಂ.ಪಿ.ವೆಂಕಟೇಶ್ ನಾಯಕ ಮಾತ್ರ ತನಗೂ ಇದಕ್ಕೂ ಏನೂ ಸಂಬಂಧವಿಲ್ಲದವನಂತೆ ಕೈ ಜಾಡಿಸುತ್ತ ಕುಳಿತಿದ್ದಾನೆ. ತನ್ನ ಸ್ವಗ್ರಾಮದ ಅರಿಕೇರಿಯ ಪ್ರಾಥಮಿಕ ಶಾಲೆಯ 'ಛತ್' ಈಗಲೇ ಬಗ್ಗಿಹೋಗಿದೆ. "ನಾನು ಈ ಬಗ್ಗೆ ಏನಾದರೂ ಕೇಳಲು ಶುರುಮಾಡಿದರೆ ಇಲ್ಲದ ಟೆನ್ಶನ್ ಕ್ರಿಯೇಟ್ ಆಗುತ್ತದೆ" ಎಂದು ಹೇಳುತ್ತ ಕಳ್ಳ ಮೌನ ತಾಳಿದ್ದಾನೆ. ಆದರೆ ಈತನ ಕುಲಪುತ್ರ ರಾಜಶೇಖರ ನಾಯಕ ಹಾಗೂ ತಾಲೂಕು ಪಂಚಾಯತಿಯ ಅಧ್ಯಕ್ಷ ಆದನಗೌಡ ಪಾಟೀಲ ರಾಮಶೆಟ್ಟಿಯ ಬೆಂಬಲಕ್ಕೆ ನಿಂತು ಜನರಿಂದ ಛೀ.. ಥೂ ... ಎಂದು ಕ್ಯಾಕರಿಸಿ ಉಗುಳಿಸಿಕೊಳ್ಳುತ್ತಿದ್ದಾರೆ.


ವೆಂಕಟೇಶ್ ನಾಯಕ್


ಆಲ್ಕೋಡ್ ಹನುಮಂತಪ್ಪ

ಬೇರೆ ಯಾವುದಾದರೂ ವಿಷಯದಲ್ಲಿ ಆಲ್ಕೋಡ ಹನುಮಂತಪ್ಪ ಹೇಗಾದರೂ ಇರಲಿ ಈ ರಾಮಶೆಟ್ಟಿಯ ವಿಷಯದಲ್ಲಿ ಆತ ಒಂದೇ ಸಮ 'ಗುಟುರು' ಹಾಕಿದ್ದಾನೆ. ಐದಾರು ಸಲ ಪತ್ರಿಕಾ ಹೇಳಿಕೆ, ಒಂದೆರಡು ಸಲ ಧರಣಿಯನ್ನು ಮಾಡಿ ದೇವದುರ್ಗದ ಮರ್ಯಾದೆ ಉಳಿಸಿದ್ದಾನೆನಿಸುತ್ತದೆ. ಇಡೀ ಏಷ್ಯಾ ಖಂಡದಲ್ಲಿಯೆ ಅತ್ಯಂತ ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಡುವ ದೇವದುರ್ಗವನ್ನು ಹೀಗೆ ತಿಕ್ಕಿ ಮುಕ್ಕಿ ತಿನ್ನುವ ಹೆಗ್ಗಣಗಳು ಸೇರಿಕೊಂಡಾಗ ಅದನ್ನು ಕಾಪಾಡುವವರು ಯಾರು ?

ತಿಂದಿದ್ದಾನೆ. ಎಂ.ಪಿ.ಜಿ.ಎಲ್ ಯೋಜನೆಯ ಸಂಪೂರ್ಣ ದುಡ್ಡು ಯಾರದೋ ರೊಕ್ಕ ಎಲ್ಲಮ್ಮನ ಜಾತ್ರೆಯಂತೆ ಖರ್ಚು ಮಾಡಿದ್ದಾಗಿ ಹೇಳಿಕೊಂಡಿದ್ದಾನೆ. ಚಿಣ್ಣರ ಅಂಗಳ, 153 ಶಾಲೆಗಳಿಗೆ ವಿದ್ಯುತ್ ಸಂಪರ್ಕ ಯೋಜನೆ, 47 ಶಾಲೆಗಳಿಗೆ 12,500ರೂ.ಗಳಂತೆ ಗ್ರೀನ್‌ಬೋರ್ಡ್ ಪ್ರಕರಣಗಳಲ್ಲಿ ತಿಂದುಂಡು ತೇಗಿದ್ದೆ ಅಧಿಕ.

ಕಾರವಾರ ಜಿಲ್ಲೆಯ ಹಳಿಯಾಳ, ಶಿವಮೊಗ್ಗ ಜಿಲ್ಲೆಯ ಸಾಗರ ಮುಂತಾದ ಕಡೆ ಈ ಪುಣ್ಯಾತ್ಮ ತಿಂದ ಅಮೇಧ್ಯಕ್ಕೆ ಪ್ರತಿಯಾಗಿ ಸಸ್ಪೆಂಡ್ ಆಗಿ ಬಂದಿದ್ದಾನೆ. ಆದರೂ ಈತ ನಾಚಿಕೆ-ಗೀಚಿಕೆ ಕೊಂಚವೂ ಇಟ್ಟುಕೊಂಡಿಲ್ಲ. ತೀರಾ ಭಂಡನಂತೆ, ಲಜ್ಜೆಗೆಟ್ಟ ಮಾನಗೇಡಿಯಂತೆ ಶಿಕ್ಷಣ ಇಲಾಖೆಯ ಕಸವನ್ನೂ ಬಿಡದಂತೆ ನುಂಗಿ ನೀರು ಕುಡಿದಿದ್ದಾನೆ. ತಾನೊಬ್ಬನೆ ಕುಡಿದರೆ ಹೈರಾಣಾಗುತ್ತದೆಂದು ತನ್ನ ಪಾಲಿನಲ್ಲಿ ರವಷ್ಟನ್ನು ರಾಯಚೂರು ಜಿಲ್ಲೆಯ ಶಿಕ್ಷಣ ಇಲಾಖೆಯ ಡಿಡಿಪಿಐ ಹಾಗೂ ಡಿವಾಯ್‌ಪಿಸಿಯವರಿಗೂ ಕೊಂಚ ಮುಸುರಿ ತಗುಲಿಸಿದ್ದಾನೆ. ಈಗಾಗ್ಲೇ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ರಾಜ್ಯ ಸಾರಿಗೆ ಆಯುಕ್ತ ಲಕ್ಷ್ಮೀನಾರಾಯಣ ಈತನ ಬಗ್ಗೆ ರಾಜ್ಯಪಾಲರಿಗೆ ಪತ್ರ ಬರೆದು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದ್ದಾರೆ. ಶಿಕ್ಷಣ ಇಲಾಖೆಯ ಕಾರ್ಯದರ್ಶಿ ತ.ಮ.ಭಾಸ್ಕರ ಕೊಂಚ ವಿವೇಕವಂತರಾಗಿ ಕಾಣುತ್ತಾರೆ. ಅವರಾದರೋ ಈ ರಾಮಶೆಟ್ಟಿ ಲಫಡಾಗಳನ್ನು ಸಂಪ[illegible] ರಾಜ್ಯಪಾಲರಿಗೆ [illegible]

-ವಿಶ್ವಾರಾಧ್ಯ ಸತ್ಯಂಪೇಟೆ

...ಪ್ರತೀ ಭೂಮಿಯಿಲ್ಲ, ಇದೇ ಭೂಮಿ ಅವರ ...ಪಾಧಾರವಾಗಿದೆ" ಅಂತ ಪ್ರಾಮಾಣಿಕವಾದ ...ಯನ್ನೂ ಜಿಲ್ಲಾಧಿಕಾರಿಗೆ ನೀಡಿದರು. ಇಲ್ಲಿಯವರೆಗೆ ... ವರದಿಗಳು ರೈತರ ಪರವಾ ಗಿದ್ದರೂ ಭೂಸ್ವಾಧೀನ ...ಮ ನಿಂತಿಲ್ಲ, ಇದರಿಂದ ಬೇಸತ್ತ ರೈತರು ಕಳೆದ ...ಬರ್ 31 ರಿಂದ ಉಪವಾಸ ಸತ್ಯಾಗ್ರಹವನ್ನು ...ಭಿಸಿದರು. ಅದಕ್ಕೂ ಜಿಲ್ಲಾಧಿಕಾರಿ ಪ್ರತಿಕ್ರಿಯಿಸದಿ... ಜನವರಿ 24 ರಂದು ರಾಮನಗೌಡ ಮಾಲಿ...ಟ್ ಎಂಬ ಪ್ರತಿಭಟನಾ ನಿರತ ರೈತ ವಿಷ ...ದರು. ಅವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ...ಕೊಂಡು ಹೋಗಿ, ಚಿಕಿತ್ಸೆ ನೀಡಿ ಬದುಕುಳಿಸ...ಯಿತು. ಇದಾದನಂತರ ಶಿದ್ರಾಮಗೌಡ ಎಂಬ ...ರ್ ರೈತ ತನ್ನ ಮೈಮೇಲೆ ಸೀಮೆಎಣ್ಣೆ ಸುರಿದು ...ಡು ಆತ್ಮಾಹುತಿ ಮಾಡಿಕೊಳ್ಳಲು ಸಜ್ಜಾದಾಗ ಅಲ್ಲಿ... ...ಪೊಲೀಸ್ ಅವರನ್ನು ಬಚಾವ್ ಮಾಡಿದರು. ...ಷ್ಟು ಆಗುವ ಹೊತ್ತಿಗೆ ರಾಜ್ಯದಲ್ಲಿ ಸರ್ಕಾರವೇ ...ಹೋಗಿತ್ತಲ್ಲ? ಅದಕ್ಕಿಂದ ಬಿಜೆಪಿಯ ಚಿನ್ನಗಳು ಹಾಗೂ ರಾಯರೆಡ್ಡಿ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಓಡಾಡಿದ್ದೇನು, ರೈತನಿಗೆ ಸಹಾಯಧನ ಕೊಟ್ಟಿದ್ದೇನು, ಅಬ್ಬಾ ಮೆಚ್ಚಬೇಕು ಇವರ ರಾಜಕಾರಣ. ತಾನು ಹೇಳಿದ್ದೇ ಆಗಬೇಕೆನ್ನುವ ವಿಚಿತ್ರ ಹಠದ ರಾಯರೆಡ್ಡಿ ಮತ್ತು ರೈತರ ಪರ ನಿಂತ ಬಿಜೆಪಿಯ ರಾಜಕಾರಣ ಇವೆರಡರ ರಾಜಕೀಯದ ರಾಡಿಯಲ್ಲಿ ಸಿಕ್ಕು ಈಗ ರೈತರು ಒದ್ದಾಡುತ್ತಿದ್ದಾರೆ. ಆದರೆ ಸದರಿ ರೈತರು ತಮ್ಮ ಹೋರಾಟದಲ್ಲಿ ಬರೀ ಬಿಜೆಪಿಯವರನ್ನು ಬಿಟ್ಟು ಇನ್ನಿತರ ಸಂಘಟನೆಗಳ ಬೆಂಬಲಕ್ಕೆ ನಕಾರ ತೋರಿಸಿದ್ದೇ ಇಷ್ಟೆಲ್ಲ ಆಗಲೂ ಕಾರಣವಾಗಿದೆ ಎನ್ನಬಹುದು.

ಮೊನ್ನೆ 20 ರಂದು ಈ ವಿವಾದದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯ ಉಪನಿರ್ದೇಶಕರುಗಳಾದ ಧನ್ಯಕುಮಾರ ಮತ್ತು ಕೋರದಾನ್ಯಮಠ ಬಂದು ವಿವರವಾಗಿ ಪರಿಶೀಲಿಸಿ ಹೋಗಿದ್ದಾರೆ. ಅವರ ವರದಿಯಿಂದಾದರೂ ಸರ್ಕಾರ ಕಣ್ಣು ತೆರೆಯಲಿ. ಇಲ್ಲದಿದ್ದರೆ ಬಡ ರೈತರ ಸಮಾಧಿ ಮೇಲೆ ರಾಜಕಾರಣಿಗಳ ಭಂಡ ರಾಜಕಾರಣ ಮುಂದುವರೆಯುತ್ತದೆ

-ವರದಿಗಾರ

ಭಳಾರೆ ವಿಚಿತ್ರಂ


ಭಾಗ-2

'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಪುಸ್ತಕದ ಬಗ್ಗೆ ಜನವರಿ 30ರ ಸಂಚಿಕೆಯಲ್ಲಿ ಶ್ರೀಯವರು ಬರೆದ ವಿಮರ್ಶೆಯಲ್ಲಿದ್ದ ಆಶೀಶ್ ನಂದಿಯವರ ವಿಚಾರಗಳ ಕುರಿತಾದ ಎರಡು ಗುರುತರವಾದ ಟೀಕೆಗಳಿಗೆ ನಾನು ಪ್ರತಿಕ್ರಿಯೆ ನೀಡಿದ್ದೆ (ಫೆಬ್ರವರಿ 6ರ ಸಂಚಿಕೆ). ನನ್ನ ಪ್ರತಿಕ್ರಿಯೆ ಇಷ್ಟಕ್ಕೆ ಸೀಮಿತವಾಗಿದ್ದು, ತಾವು ವಿಮರ್ಶೆಯಲ್ಲಿ ಎತ್ತಿದ 'ಮೂಲವಾದ'ದ ಬಗ್ಗೆ ನಾನು 'ನಿಗೂಢ ಮೌನ' ತಾಳಿದ್ದೇನೆ ಎಂದು ಶ್ರೀಯವರು ಫೆಬ್ರವರಿ 20ರ ಸಂಚಿಕೆಯ 'ಮರುಪ್ರತಿಕ್ರಿಯೆ'ಯಲ್ಲಿ ಬರೆದಿದ್ದಾರೆ. ಮಾತ್ರವಲ್ಲ, ತಾವು ಪ್ರಸ್ತುತ ಪುಸ್ತಕದ ಕೆಲವು ಬರಹಗಳ ಬಗ್ಗೆ ತಮ್ಮ ವಿಮರ್ಶೆಯಲ್ಲಿ ಎತ್ತಿರುವ ಅನುಮಾನಗಳನ್ನು ನಾನು 'ಒಪ್ಪಿ'ಕೊಂಡ ನಂತರವೂ, ಆ ಅನುಮಾನಗಳ ಬಗ್ಗೆ ಯಾಕೆ ಮುಂದೆ ಮಾತನಾಡುತ್ತಿಲ್ಲ? ಎಂಬ ಪಾಟಿ ಸವಾಲನ್ನೂ ಹಾಕಿದ್ದಾರೆ. ನಾನು ಶ್ರೀಯವರ ವಿಮರ್ಶಾತ್ಮಕ ಅನುಮಾನಗಳು 'ಗಮನಾರ್ಹವಾಗಿವೆ' ಎಂದು ಹೇಳಿದ್ದೇನೆ ಹೊರತಾಗಿ 'ಒಪ್ಪಿ'ಕೊಂಡಿದ್ದೇನೆ ಎಂದಲ್ಲ- ಇವೆರಡರ ನಡುವಿನ ವ್ಯತ್ಯಾಸವನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ. ಶ್ರೀ ತಮ್ಮ ವಿಮರ್ಶೆಯಲ್ಲಿ 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಪುಸ್ತಕದಲ್ಲಿರುವ 'ಆಹಾರ', 'ಶಿಕ್ಷಣ' ಲೇಖನಗಳ ವಾದಸರಣಿ ಬಂಡವಾಳಶಾಹಿಯ ರಾಜಕೀಯವನ್ನು ಸರಿಯಾಗಿ ಗುರುತಿಸುತ್ತವೆಯಾದರೂ ಜಾತಿಯಾಧಾರಿತ ಭಾರತದ ಸಮಾಜದಲ್ಲಿ ಮುಖಾಮುಖಿಯಾಗಬೇಕಾದ ಕ್ಲಿಷ್ಟ ಪ್ರಶ್ನೆಗಳನ್ನು ಎತ್ತುವುದಿಲ್ಲ, ಹೀಗಾಗಿ ನಮ್ಮ ಸಂದರ್ಭದಲ್ಲಿ ಇವು ವ್ಯತಿರಿಕ್ತವಾದ (ಮೇಲ್ಜಾತಿವಾದಿ) ಧ್ವನಿಯನ್ನು ಹುಟ್ಟಿಸುತ್ತವೆ ಎನ್ನುತ್ತಾರೆ. 'ಆಹಾರ' ಲೇಖನದ ಒತ್ತು ಇರುವುದು ರಾಜಕೀಯ ದಬ್ಬಾಳಿಕೆ ಹಾಗು ಆರ್ಥಿಕ ಏಕಸ್ವಾಮ್ಯಗಳು ಹೇಗೆ ಸೇವಿಸುವ ಆಹಾರದ ಮೂಲಕವೂ ತಮ್ಮ ಸ್ವರೂಪವನ್ನು ತೋರಿಸುತ್ತವೆ ಎನ್ನುವುದು ಹಾಗೂ ಈ ತೆರನಾದ ಅಧಿಕಾರ ವ್ಯಾಕರಣವನ್ನು ಸರಿಯಾಗಿ ಮನಗಂಡು ಹುಟ್ಟಿಕೊಂಡಿರುವ ಪ್ರತಿರೋಧಿ ಮಾರ್ಗಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದರ ಕಡೆಗೆ. ಹೀಗಾಗಿ, ತಮ್ಮ ವಿಶ್ಲೇಷಣೆಯಲ್ಲಿ ಲೇಖಕರಿಗೆ ಎಲ್ಲಿಯೂ ಮಾಂಸಾಹಾರ/ಸಸ್ಯಾಹಾರಗಳ ಪರ/ವಿರೋಧಿ ನಿಲುವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯೇ ಕಾಣುವುದಿಲ್ಲ, ಅಷ್ಟೇ ಯಾಕೆ ಮಾಂಸಾಹಾರ ಸೇವಿಸುವ ಜನರಲ್ಲಿ ಮಾಂಸದ ನಮೂನೆಯ ಆಧಾರದಲ್ಲಿಯೇ ಉಳ್ಳವರು-ಇಲ್ಲದವರ ನಡುವಿನ ಶ್ರೇಣೀಕರಣ ಹೇಗೆ ಒಡೆದು ಕಾಣುತ್ತದೆ ಎಂದೂ ಪ್ರಸ್ತುತ ಬರಹ ತೋರಿಸುತ್ತದೆ. ಶ್ರೀಯವರು ಬರಹದ ಒಂದು ವಾಕ್ಯವನ್ನು ಉದಾಹರಿಸಿ, ಭಾರತದ ಪರಿಸ್ಥಿತಿಯಲ್ಲಿ ಇದು ಬೇರೆಯದೇ ದನಿ ಹೊರಡಿಸುವುದಿಲ್ಲವೆ? ಎಂದು ಕೇಳುವುದಕ್ಕೆ ಗಟ್ಟಿಯಾದ ಆಧಾರಗಳು ಬರಹದ ಬೌದ್ಧಿಕ ಕಟ್ಟನಲ್ಲಿ ನನಗೆ ಎಲ್ಲೂ ಕಾಣುತ್ತಿಲ್ಲ, ಹಾಗೆಯೇ ಶ್ರೀ, 'ಶಿಕ್ಷಣ' ಎಂಬ ಲೇಖನದ ಕೆಲವು ವಾಕ್ಯಗಳನ್ನು ಉದ್ಧರಿಸಿ, 'ನಮ್ಮ ಶ್ರೇಣೀಕೃತ ಸಮಾಜದ ಸಂದರ್ಭದಲ್ಲಿ ಹಳೆಯ ಕಲಿಕೆಯ ಮಾರ್ಗಗಳನ್ನು ನೆನಪಿಸಿಕೊಳ್ಳುವುದೆಂದರೆ ಮೋಚಿಯ ಮಗ ಚಪ್ಪಲಿ ಹೊಲಿಯುವುದನ್ನೇ ಕಲಿಯುವುದು ಮತ್ತು ಕಲಿಸುವುದು ಅಂತಲೇ ಆದೀತು' ಎಂಬ ತೀರ್ಮಾನ ಕೊಡುವುದರ ಜೊತೆಗೆ 'ಅಂಬೇಡ್ಕರ್ ಚಿಂತನೆ ಮತ್ತು ನಂತರದ ದಲಿತ ಚಳವಳಿಯ ವಾದಗಳನ್ನು ಈ ಚಿಂತನಾಕ್ರಮದೊಂದಿಗೆ ಮುಖಾಮುಖಿಯಾಗಿಸಿ ನೋಡಿದಾಗ ಹುಟ್ಟಬಹುದಾದ ಕ್ಲಿಷ್ಟ ಪ್ರಶ್ನೆಗಳನ್ನು ಈ ಲೇಖನ ಎತ್ತುವುದಿಲ್ಲ' ಎಂಬ ತಕರಾರನ್ನೂ ಎತ್ತುತ್ತಾರೆ. ಪ್ರಸ್ತುತ ಬರಹದ ಪೂರ್ಣ ಪಾಠವನ್ನು ಓದಿ, ಈ ಪತ್ರದ ಸಂದರ್ಭದಲ್ಲಿ 'ಹಳೆಯ ಕಲಿಕೆಯ ಮಾರ್ಗಗಳನ್ನು ನೆನಪಿಸಿಕೊಳ್ಳುವುದು' ಎಂದರೆ 'ಮೋಚಿಯ ಮಗ ಚಪ್ಪಲಿ ಹೊಲಿಯುವುದನ್ನೇ ಕಲಿಯುವುದು' ಎಂದಾಗುತ್ತದೆಯೋ ಎಂದು ಕನ್ನಡದ ಜಾಣ-ಜಾಣೆಯರೇ ತಿಳಿದುಕೊಳ್ಳುವುದೊಳಿತು; ನನ್ನ ಮಟ್ಟಿಗಂತೂ, ಶ್ರೀಯವರ ತೀರ್ಮಾನ, ಆ ಬರಹದ ಕಾಳಜಿಯನ್ನು ಸಾರಾಸಗಟು ಅರ್ಥಹೀನಗೊಳಿಸುವ ಮಾತುಗಳಾಗಿವೆ. ಅಂತೆಯೇ, ಆಧುನಿಕ ಶಿಕ್ಷಣದ ಕುರಿತಾಗಿ ವಸಾಹತುಶಾಹಿ ವಿರೋಧಿ ಹೋರಾಟದ ಪರಿವರ್ತನೆಯ ಕಾಲಘಟ್ಟದಲ್ಲಿ ಫುಲೆ-ಅಂಬೇಡ್ಕರರು ಪ್ರಕಟಿಸಿದ ವಿಚಾರಗಳಿಗೆ ಇದ್ದ ಪ್ರಖರ ಕಾರ್ಯಸಾಧ್ಯತೆಗಳು, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಧಿಕಾರಸ್ಥರ ವಾಸ್ತವಿಕ ವರಸೆಗಳಿಂದ ಮೊಂಡಾಗುತ್ತಿರುವುದನ್ನೂ ದಲಿತ ಚಳವಳಿಗಳೇ ಚರ್ಚಿಸುತ್ತಿವೆ. ಇವತ್ತು 'ಆಧುನಿಕ ಶಿಕ್ಷಣ', 100 ವರ್ಷಗಳ ಹಿಂದೆ ಕಲ್ಪಿಸಿಕೊಂಡಿರುವ ಹಾಗೆ ನಿಜವಾದ ಬಿಡುಗಡೆಯ ಮಾರ್ಗವಾಗಿದೆಯೇ? ಎನ್ನುವುದರ ಕುರಿತಾಗಿ ಇಂದು ದಲಿತ ಚಳವಳಿಗಳ ಮಧ್ಯೆಯೇ ನಡೆಯುತ್ತಿರುವ ಚರ್ಚೆಗಳು ಶ್ರೀ ಅಪೇಕ್ಷಿಸುವಷ್ಟು ನಿರಪೇಕ್ಷವಾಗಿಲ್ಲ, ಪ್ರಶ್ನೆಗಳು ನಿಜಕ್ಕೂ 'ಕ್ಲಿಷ್ಟ'ವಾಗಿದ್ದರೆ ಭಿನ್ನ ಚಿಂತನಾ ಮೂಲಗಳ ಬಗ್ಗೆ ಆಸ್ಥೆ ಗೌರವಗಳೂ ಅಷ್ಟೇ ಜರೂರಾಗಿರುತ್ತವೆ ಎನ್ನುವುದಷ್ಟನ್ನೇ ಇಲ್ಲಿ ಸೂಚಿಸಬಹುದು. ಇಷ್ಟಿದ್ದೂ ಇಂತಹ ಅನುಮಾನಗಳು 'ಗಮನಾರ್ಹ' ಎಂದದ್ದು ಇಂತಹ ಪ್ರಶ್ನೆಗಳನ್ನು ತನ್ನ ವಾದರಚನೆಯ ಆಯಾಮದಲ್ಲಿ ಸೇರಿಸಿಕೊಳ್ಳಬಲ್ಲ ಬೌದ್ಧಿಕ ಕಟ್ಟಿನ ತಾಳಿಕೆಯ ಗುಣ 'ಆಹಾರ', 'ಶಿಕ್ಷಣ'ದಂತಹ ಬರಹಗಳಿಗೆ ಇದೆಯೋ ಎಂದು ಓದುಗರು ಕಂಡುಕೊಳ್ಳಲು ಉಪಯುಕ್ತವಾಗಿದೆ ಎನ್ನುವುದಕ್ಕೇ ಹೊರತಾಗಿ, ಶ್ರೀಯವರ ಅನುಮಾನಗಳು ನಿಸಂದಿಗ್ಧ ಎನ್ನುವ ಕಾರಣಕ್ಕಾಗಿಯಲ್ಲ. ಶ್ರೀ ತಮ್ಮ ವಿಮರ್ಶೆಯಲ್ಲಿ 'ಅಭಿವೃದ್ಧಿ ಮೀಮಾಂಸೆಯನ್ನು ವಿಮರ್ಶೆಗೆ ಒಳಪಡಿಸಿದ ನಂತರದಲ್ಲಿ ನಾವು ನಮ್ಮ ''ರಾಜಕೀಯ ಕಾರ್ಯಶೀಲತೆ''ಯ ಹಾದಿಯಾಗಿ ಯಾವುದನ್ನು ಆಯ್ದುಕೊಳ್ಳುತ್ತೇವೆ ಎನ್ನುವುದು ಆದರಿಂದ ಮುಖ್ಯವಾಗುತ್ತದೆ' ಎಂದಿದ್ದಾರೆ. ನಂತರದಲ್ಲಿ ಪ್ರಸ್ತುತ ಪುಸ್ತಕದ ಬರಹಗಳ ಕುರಿತಾದ ತಮ್ಮ ವಿಮರ್ಶಾತ್ಮಕ ಅನುಮಾನಗಳನ್ನು ಪ್ರಕಟಿಸುತ್ತಾರೆ. ಕೊನೆಗೆ, ಈ ಅನುಮಾನಗಳೇ ಖಚಿತವಾದ ದೋಷಾರೋಪಣಾ ಪಟ್ಟಿ ಎನ್ನುವ ದಾರ್ಷ್ಟ್ಯದಲ್ಲಿ 'ಒಬ್ಬ ವಿಮರ್ಶಕಿ'ಯನ್ನು ಸಾಕ್ಷಿಯಾಗಿ ಪರಿಗಣಿಸಿ, ಪ್ರಸ್ತುತ ಕೃತಿಯ ಸಂಪಾದಕರು 'ಗೊತ್ತಿದ್ದೋ ಗೊತ್ತಿಲ್ಲದೆಯೋ ಹಿಂದೂ ಬಲಪಂಥೀಯರ ಟ್ರೋಜನ್ ಕುದುರೆಗಳು' ಎನ್ನುವ ತೀರ್ಮಾನಕ್ಕೂ ಸಹಮತ ಸೂಚಿಸುತ್ತಾರೆ. ಈ ನಮೂನೆಯ ''ರಾಜಕೀಯ ಕ್ರಿಯಾಶೀಲತೆ''ಯಂತೂ ಆತಂಕ ಹುಟ್ಟಿಸುತ್ತದೆ.



ತಮ್ಮ ಮರುಪ್ರತಿಕ್ರಿಯೆಯಲ್ಲಿ ಶ್ರೀ 'ನನ್ನ ಲೇಖನದ ಉದ್ದೇಶ ಆಶೀಶ್ ನಂದಿಯವರ ವಿಚಾರಗಳನ್ನು ವ್ಯವಧಾನವಿಲ್ಲದೆ ತಳ್ಳಿ ಹಾಕಿಬಿಡುವುದಲ್ಲ, ನಾನು ಹೇಳಲು ಹೊರಟಿದ್ದು ಆಶೀಶ್ ನಂದಿಯ ವಿಚಾರಗಳ ಸುತ್ತಮುತ್ತ ನಡೆದ ವಾದ-ವಿವಾದಗಳ ಬಗ್ಗೆ' ಎಂದೂ 'ದಿಯೊರೊಲದಲ್ಲಿ ಸತಿ ನಡೆದ ಸಂದರ್ಭದಲ್ಲಿ ಆಶೀಶ್ ಮತ್ತು ಅವರನ್ನು ಒಪ್ಪದ ಮಂದಿಯ ನಡುವೆ ನಡೆದ ವಾದವಿವಾದಗಳು ನನ್ನ ಸೀಮಿತ ಓದಿಗೆ ದಕ್ಕಿದ ಮಟ್ಟಿಗೆ ಉಡಾಫೆ ವಿವಾದಗಳಲ್ಲ' ಎಂದೂ ಹೇಳಿದ್ದಾರೆ ಮತ್ತೂ, 'ಆಶೀಶ್ ನಂದಿಯ ವಿಚಾರಗಳ ಸುತ್ತಮುತ್ತ ನಡೆದ ವಾದ-ವಿವಾದ'ಗಳಿಗೂ, 'ಅವರನ್ನು ಒಪ್ಪದ ಮಂದಿ'ಗೂ ಪ್ರತಿನಿಧಿಯಾಗಿ ನಿಲ್ಲಿಸುವುದು 'ಸ್ತ್ರೀವಾದಿ-ಎಡಪಂಥೀಯ ವಿಮರ್ಶಕಿ' ಹಾಗು ಅವರ 'ವಿಮರ್ಶೆಯನ್ನು'. ತಮ್ಮ ಮರುಪ್ರತಿಕ್ರಿಯೆಯಲ್ಲೂ ಆ 'ವಿಮರ್ಶಕಿ' ಯಾರು ಹಾಗು ಅವರ 'ವಿಮರ್ಶೆ' ಏನು ಎನ್ನುವ ಬಗ್ಗೆ ಯಾವ ಸೂಚನೆಯನ್ನೂ ಕೊಡದಿರುವುದರಿಂದ, ಆ ವಿಮರ್ಶಕಿ ಮೀರಾ ನಂದ ಹಾಗು ಆಶೀಶರ ಕುರಿತ ಅವರ ವಿಮರ್ಶೆ 'ಫ್ರಂಟ್‌ಲೈನ್' ಪಾಕ್ಷಿಕದಲ್ಲಿ ಪ್ರಕಟವಾದ 'ಪೋಸ್ಟ್ ಮಾಡರ್ನಿಸಮ್, ಹಿಂದು ನ್ಯಾಷನಾಲಿಸಮ್ ಅಂಡ್ ವೇದಿಕ್ ಸೈನ್ಸ್' (ಡಿಸೆಂಬರ್ 30, 2003 ಮತ್ತು ಜನವರಿ 16, 2004) ಲೇಖನ ಎಂದಿಟ್ಟುಕೊಂಡು ಮುಂದುವರೆಯುತ್ತೇನೆ. ಮೀರಾನಂದರ ಪ್ರಕಾರ, 17-18ನೇ ಶತಮಾನದ ಯುರೋಪಿನಲ್ಲಿ ಹುಟ್ಟಿದ 'ಎನ್‌ಲೈಟನ್ಮೆಂಟ್' ಚಿಂತನಾಕ್ರಮ, 'ವಿಜ್ಞಾನ ಯಾವತ್ತೂ ನಿರಪೇಕ್ಷವಾಗಿದ್ದು, ಸಾರ್ವಕಾಲಿಕ ವಿಶ್ವಾತ್ಮಕ ಸತ್ಯವನ್ನು ಕಂಡುಕೊಳ್ಳುವ ಪಥದ ನಿರೂಪಣೆ' ಎಂಬ ವಿಚಾರಕ್ರಮದ ಆಧಾರದಲ್ಲಿ ಕಟ್ಟಿಕೊಟ್ಟ 'ವೈಜ್ಞಾನಿಕ ವಿಚಾರವಾದ' ಮನುಕುಲ ಅರಿತಿರುವ ಸಕಲ ತತ್ವಜ್ಞಾನಗಳಲ್ಲಿ ಉನ್ನತ ಮತ್ತೂ ಮೇಲುಸ್ತರದ್ದು; ಹಾಗಾಗಿ ಸಾಮಾಜಿಕವಾಗಿಯೂ, ರಾಜಕೀಯವಾಗಿಯೂ ಪ್ರಗತಿಪರವಾದದ್ದು. ಈ ವಿಚಾರಕ್ರಮ ನಿರಾಕರಿಸುವ ಪರಂಪರಾನುಗತ ಚಿಂತನಾಕ್ರಮಗಳು ಮೌಢ್ಯದ ನೆಲೆಯಲ್ಲಿರುವ, ಶ್ರೇಣೀಕೃತ ಯಜಮಾನಿಕೆಯನ್ನು ಕಾಯುವ ಕಾಯಕದಲ್ಲಿ ನಿರತವಾಗಿರುವಂತಹವು. ಹಾಗಾಗಿ ಪ್ರತಿಗಾಮಿ ಸಾಮಾಜಿಕ-ರಾಜಕೀಯ ಉದ್ದೇಶಗಳನ್ನು ಪೋಷಿಸುವಂತಹುದು. ಈ ಬೌದ್ಧಿಕ ಕಟ್ಟಿನಿಂದ ಮೀರಾನಂದ, ಇಂದಿನ ಭಾರತದ ಸಾಮಾಜಿಕ ವಿಚಾರಗಳನ್ನು 'ವೈಜ್ಞಾನಿಕ ವಿಚಾರವಾದಕ್ಕೆ' ಬದ್ಧವಾದ ಸತ್ಯಶೀಲ ವಿಚಾರಗಳು ಹಾಗು ಇದಕ್ಕೆ ತದ್ವಿರುದ್ಧವಾದ ಪರಂಪರಾನುಗತ ಚಿಂತನಾಕ್ರಮಗಳ ಪ್ರಾಮುಖ್ಯವನ್ನು ಒತ್ತಿ ಹೇಳುವ ಪ್ರತಿಗಾಮಿ ವಿಚಾರಗಳು ಎಂದು ವಿಂಗಡಿಸಿಕೊಳ್ಳುತ್ತಾರೆ. ಇಷ್ಟಾದಮೇಲೆ, 'ಪರಂಪರೆಯನ್ನು ವಿಜೃಂಭಿಸುವ ಕಾರ್ಯಸೂಚಿಯನ್ನುಳ್ಳ' ಸಂಘಪರಿವಾರವನ್ನೂ ಮತ್ತು ವೈಜ್ಞಾನಿಕ ವಿಚಾರವಾದವೇ ಅಂತಿಕ ಸತ್ಯ ಎನ್ನುವುದನ್ನು ಕಟುವಾಗಿ ವಿರೋಧಿಸಿ, ಪರಂಪರಾನುಗತ ಜ್ಞಾನಧಾರೆಗಳ ಚೈತನ್ಯಶೀಲತೆಯನ್ನು ಒತ್ತಿ ಹೇಳುವ ಆಶೀಶ್, ವಂದನಾ ಶಿವ, ಶಿವ್ ವಿಶ್ವನಾಥನ್, ಕ್ಲಾಡ್ ಆಲ್ವರಿಸ್, ರಜನಿ ಕೊತ್ತಾರಿ, ಪಾರ್ಥ ಚಟರ್ಜಿ, ಗಾಯತ್ರಿದೇವಿ ಮುಂತಾದ ಚಿಂತಕರನ್ನೂ ಒಂದು ಬುಟ್ಟಿಗೆ ಹಾಕುತ್ತಾರೆ. ನಂತರ ಸಲೀಸಾಗಿ, 'ಸರಿಯಾದ ಪದಗಳನ್ನು ಹೊಂದಿಸಿರಿ' ಶೈಲಿಯಲ್ಲಿ ಈ ಚಿಂತಕರ ವಿಚಾರಗಳು ಸಂಘಪರಿವಾರದ ಅಜೆಂಡಾಗಳಿಗೆ ಸಮರ್ಥನೆ ಒದಗಿಸುತ್ತವೆ ಎಂದು ನಿರ್ಣಯಿಸಿ- 'ಇಂತು ನಿರಪೇಕ್ಷವಾದ ಸತ್ಯವನ್ನು ಸಾಧಿಸಿ ತೋರಿಸಿದ್ದೇನೆ' (ಕ್ವಾಡ್ ಎರಾಟ್ ಡೆಮಾನ್ಸ್ಟ್ರಾಂಡಮ್) ಎಂದು ಸಾರುತ್ತಾರೆ. ತನ್ನ ವೈಚಾರಿಕ ಕ್ರಮವೇ ಅಂತಿಮವಾಗಿ ಶ್ರೇಷ್ಠವೆಂಬ ಕಟು ದಾರ್ಷ್ಟ್ಯ ಅದನ್ನು ವಿರೋಧಿಸುವವರನ್ನು ಅಪರಾಧಿಗಳೆಂದು ಪರಿಗಣಿಸಿ ಅವರ ವಿರುದ್ಧ ಒಂದು ದೋಷಾರೋಪಣಾ ಪಟ್ಟಿ ತಯಾರಿಸುವುದು, ನಂತರ ಅವರ ವಿಚಾರಗಳನ್ನು ಕಟಕಟೆಯಲ್ಲಿ ನಿಲ್ಲಿಸಿ ತನಗೆ ಬೇಕಾದ ಉತ್ತರಗಳನ್ನು ಪಡೆಯುವ ಪಾಟಿಸವಾಲು ನಡೆಸುವುದು ಹಾಗು ಅಪರಾಧ ಸಾಬೀತಾಯಿತು ಎಂದು ತಾನೇ ಘೋಷಿಸುವ ಮೀರಾನಂದರ ವರಸೆ, ವೈಚಾರಿಕ ವಾಗ್ವಾದದ ಅತ್ಯಂತ ಕೆಟ್ಟ ಮಾದರಿ. ತಮ್ಮ ಇಡಿ ಬರಹದುದ್ದಕ್ಕೂ ಮೀರಾನಂದ ಮೇಲೆ ಹೇಳಿದ ಚಿಂತಕರ ವಿಚಾರಕ್ರಮಗಳನ್ನು ತನಗೆ ಅನುಕೂಲವಾಗುವ ರೀತಿಯಲ್ಲಿ ತಿರುಚಿ, ಸಾಮಾನ್ಯೀಕರಿಸಿ ಮಾತನಾಡುತ್ತಾರೆಯೇ ಹೊರತಾಗಿ, ಪ್ರಸ್ತುತ ಚಿಂತಕರ ಬರಹಗಳನ್ನು ಅವುಗಳ ವಾಸ್ತವಿಕ ವಿಸ್ತಾರದಲ್ಲಿ ಓದಿ ಚರ್ಚಿಸುವ ಗೋಜಿಗೆ ಹೋಗುವುದಿಲ್ಲ, ಇಂಥ ವೈಚಾರಿಕ ದಾರಿದ್ರ್ಯದ ಬರಹವನ್ನು ಶ್ರೀ ಒಂದು ಮಾದರಿಯಾಗಿಟ್ಟುಕೊಂಡು, ಆಶೀಶರ ಚಿಂತನೆಗಳಿಗೆ ಬಿರುಬೀಸಾದ ಹಣೆಪಟ್ಟಿ ಹಚ್ಚಲು ಕಾತುರರಾಗಿರುವುದು ಒಳ್ಳೆಯ 'ರಾಜಕೀಯ ಕಾರ್ಯಶೀಲತೆ'ಯಲ್ಲ ಎನ್ನುವುದು ನನ್ನ ಬಲವಾದ ನಿಲುವು; ಆ ನಿಲುವಿನ ತುರ್ತಿನಲ್ಲಿಯೇ ಈಗಲೂ ಪ್ರತಿಕ್ರಿಯಿಸುತ್ತಿದ್ದೇನೆ.

ಶ್ರೀ ದೇವರೊಲದಲ್ಲಿ ನಡೆದ ಸತಿಯ ಸುತ್ತಮುತ್ತಲಿನ ವಾದವಿವಾದಗಳ ಬಗ್ಗೆ ಹೇಳಿದ್ದಾರೆ. ಈ ವಾದವಿವಾದಗಳಾದರೂ ಏನು? ದೇವರೊಲದಲ್ಲಿ ರೂಪ್ ಕನ್ವರ್ ಸತಿಯಾಗುವುದಕ್ಕೆ 12 ವರ್ಷ ಮುಂಚೆಯೇ, ಆಶೀಶ್ ನಂದಿ ತಮ್ಮ 'ಸ್ಯಾವೇಜ್ ಫ್ರಾಯ್ಡ್: ಅಟ್ ದಿ ಎಡ್ಜ್ ಆಫ್ ಸೈಕಾಲಜಿ' ಪುಸ್ತಕದಲ್ಲಿ ಸತಿಪದ್ಧತಿಯನ್ನು ವಿಶ್ಲೇಷಿಸುವ ಪ್ರಬಂಧವನ್ನು ಪ್ರಕಟಿಸಿದ್ದರು (ಈ ಪ್ರಬಂಧದ ಕನ್ನಡ ಅನುವಾದಕ್ಕೆ ನೋಡಿ: 'ಆಶೀಶ್ ವಿಚಾರಗಳು', ಅಕ್ಷರ ಪ್ರಕಾಶನ, 1995). ಈ ಪ್ರಬಂಧದಲ್ಲಿ ಅವರು ಮೂರು ಮುಖ್ಯವಾದ ಸಂಗತಿಗಳನ್ನು ಚರ್ಚಿಸಿದ್ದಾರೆ. ಒಂದು: ಸತಿಪದ್ಧತಿ ಭಾರತದ ಪರಂಪರೆಯಲ್ಲಿ ಯಾವತ್ತೂ ಸಾರ್ವತ್ರಿಕ ಮನ್ನಣೆ ಪಡೆದ, ಸಾಮಾನ್ಯವಾದ ಆಚರಣೆಯಾಗಿರಲಿಲ್ಲ, ಕ್ರಿ.ಪೂ.ದಿಂದ ಹಿಡಿದು 18ನೇ ಶತಮಾನದವರೆಗೂ ಈ ಪದ್ಧತಿ, ರಾಜಕೀಯ ಹಾಗು ಸಾಮಾಜಿಕ ಕಾರಣಗಳಿಗಾಗಿ ಅಲ್ಪಕಾಲ ಕಾಣಿಸಿಕೊಳ್ಳುವುದು ಮತ್ತೆ ಮರೆಯಾಗುವುದು ನಡೆದೇ ಇತ್ತು, ಆದರೆ ಸತಿಪದ್ಧತಿಯ ವ್ಯಾಪಕ ಧಾರ್ಮಿಕ ಪ್ರತಿಪಾದನೆ ಹಾಗು ಅದನ್ನು ಪವಿತ್ರ ಧಾರ್ಮಿಕ ಆಚರಣೆ ಎಂದು ಸಮರ್ಥಿಸುವ ಕೆಲಸ ನಡೆದದ್ದು ಬ್ರಿಟೀಷ್ ವಸಾಹತುಶಾಹಿಯ ಪ್ರವೇಶವಾದ ನಂತರದ ಕಾಲಘಟ್ಟದಲ್ಲಿ. ಎರಡು: 18-19ನೇ ಶತಮಾನದಲ್ಲಿ ಸತಿಪದ್ಧತಿಯ ಧಾರ್ಮಿಕ ಸಮರ್ಥನೆ ಹಾಗು ಆಚರಣೆಗಳು ಕಂಡುಬಂದದ್ದು ಮೇಲ್ಜಾತಿಯವರಾಗಿದ್ದ, ಆ ಹೊತ್ತಿಗೆ ತಮ್ಮ ಆಸ್ತಿ ಹಾಗು ಪ್ರತಿಷ್ಠೆಗಳನ್ನು ಕಳೆದುಕೊಂಡು, ಆಧುನಿಕ ವಿದ್ಯಾಭ್ಯಾಸ ಮತ್ತು ಜೀವನಕ್ರಮಗಳನ್ನು ರೂಢಿಸಿಕೊಂಡು ನಗರವಾಸಿಗಳಾಗಿದ್ದ 'ಭದ್ರಲೋಕ್'ದ ಜನರಲ್ಲಿ, ಬಂಗಾಲದ ಗ್ರಾಮಗಳಲ್ಲಿ ಹಾಗು ಶೂದ್ರ ಸಮುದಾಯದ ಮಧ್ಯೆ ಈ ಪದ್ಧತಿಗೆ ಯಾವ ಮಾನ್ಯತೆಯೂ ಇರಲಿಲ್ಲ, ಸತಿಪದ್ಧತಿಗೆ ಶೂದ್ರ ಸಮುದಾಯದ ಬೆಂಬಲವೇನಿದ್ದರೂ, 'ಭದ್ರಲೋಕ್'ದ ಜೀವನಕ್ರಮವನ್ನು ಆಧುನಿಕತೆಯ ಮಾದರಿಯಾಗಿ ಸ್ವೀಕರಿಸಿ ಸಾಮಾಜಿಕ ಶ್ರೇಣೀಕರದಲ್ಲಿ ಮೇಲೇರುವ ಆಕಾಂಕ್ಷೆ ಹೊಂದಿದ್ದ ಜನರ ನಡುವೆ ಮಾತ್ರವಾಗಿತ್ತು, ಈ ಕಾರಣವಾಗಿ 17-18 ನೇ ಶತಮಾನದಲ್ಲಿ ನಡೆದ ಸುಮಾರು 8000 ಮಿಕ್ಕಿದ ಸತಿ ಪ್ರಕರಣಗಳೆಲ್ಲ ಕೊಲ್ಕತ್ತ ಹಾಗು ಅದರ ಸುತ್ತಲಿನ ನಗರ ಪ್ರದೇಶಗಳಲ್ಲಿಯೇ ನಡೆದಿದ್ದವು. ಮೂರು: ಈ ಪದ್ಧತಿ ಈ ಬಗೆಯ ವ್ಯಾಪಕತೆ ಪಡೆದುಕೊಳ್ಳುವ ಕಾಲಕ್ಕೆ ವಿಧವೆಯರು ಒಂದು ಹೊರೆ ಎಂಬ ಸಾಮಾಜಿಕ ಮನೋಭೂಮಿಕೆ ಗಟ್ಟಿಯಾಗತೊಡಗಿತ್ತು; ಹೆಂಗಸರನ್ನು ಮೂಲತಃ ಪಾಪ ಕೃತ್ಯಗಳಿಗೆ ಸಹಜವಾಗಿ ತಮ್ಮನ್ನು ಕೊಟ್ಟುಕೊಳ್ಳಬಲ್ಲವರು, ಸ್ವಭಾವದಲ್ಲೇ ಅಪವಿತ್ರರು ಎಂದು ಕಾಣುವ ಪುರುಷ ದೃಷ್ಟಿಕೋನಕ್ಕೆ ಧಾರ್ಮಿಕ-ಸಾಮಾಜಿಕ ಸಹಮತ ರೂಢಿಸುವ ಪ್ರಯತ್ನಗಳು ಮೇಲ್ಜಾತಿಯ ಜನರ ನಡುವೆ ಶುರುವಾಗಿದ್ದವು. ಅದುವರೆವಿಗೂ, 'ಲೋಕಪಾಲಕಿ'ಯಾದ ಸ್ತ್ರೀ ಪರಿಕಲ್ಪನೆಯಲ್ಲಿ ಬಿರುಕೊಡೆದು, 'ಶಕ್ತಿದಾಯಕಿ ದುರ್ಗೆ' ಹಾಗು 'ಅಪವಿತ್ರ ತುಚ್ಛ ಆಚರಣೆಗಳಿಂದ ತೃಪ್ತಳಾಗುವ ಕಾಳಿ'ಯರಾಗಿ ಇಬ್ಭಾಗ ಮಾಡಲಾಯಿತು. ಹೆಂಗಸರನ್ನು ಕುರಿತಾದ ಈ ದ್ವಂದ್ವ ಸಾಮಾಜಿಕ ಮನೋಭಾವ ಎಷ್ಟು ಗಟ್ಟಿಯಾಗಿತ್ತೆಂದರೆ, ಸತಿಪದ್ಧತಿಯನ್ನು ನಿಷೇಧಿಸುವ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ 'ಆಧುನಿಕ ಸಮಾಜ ಸುಧಾರಕ' ರಾಜರಾಮ್ ಮೋಹನ್ ರಾಯ್ ಕೂಡ 'ಧಾರ್ಮಿಕ ಪಾವಿತ್ರ್ಯದ ಪ್ರತಿಮೆ'ಯಾಗಿ ಸತಿಯನ್ನು ಒಪ್ಪಿಕೊಂಡು 'ದೇಹವನ್ನು ಜೀವಂತ ಸುಡುವ ಅಸಹ್ಯ' ವಾಸ್ತವಿಕ ಆಚರಣೆ ನಿಷೇಧಗೊಳ್ಳಬೇಕು ಎಂಬ ನಿಲುವಿನವನಾಗಿದ್ದ. ಈ ಸುವಿಸ್ತಾರವಾದ ವಿವರ-ವಿಶ್ಲೇಷಣೆಗಳ ಮೂಲಕ ಆಶೀಶ್, 'ಸತಿಪದ್ಧತಿ ಎನ್ನುವುದು ಆಧುನಿಕ ವೈಚಾರಿಕತೆ ಇಲ್ಲದ, ಮಧ್ಯಯುಗದ ಮೌಢ್ಯಗಳಲ್ಲಿ ಮುಳುಗಿದ ಗ್ರಾಮೀಣ ಜನಸಮುದಾಯಗಳ ಬರ್ಬರ ಆಚರಣೆ' ಎಂಬ ಪ್ರಗತಿಪರ ವ್ಯಾಖ್ಯಾನ ಬರಿ ಬೊಗಳೆ ಎಂದು ತೋರಿಸಿದರು; ಮತ್ತೂ ಇದು ಖಂಡಿತಕ್ಕೂ ನಿಷ್ಠಾವಂತ 'ವೈಜ್ಞಾನಿಕ ವಿಚಾರವಾದಿ'ಗಳಿಗೆ ಅಪಥ್ಯವಾಗಿತ್ತು. 1987ರ ಡಿಸೆಂಬರ್ 22 ರಂದು ರೂಪ್ ಕನ್ವರಳನ್ನು ಅವರ ಮಾವನ ಮನೆಯವರು ಸತಿಗೆ ಈಡು ಮಾಡಿದಾಗ ನಡೆದ ಸಾರ್ವಜನಿಕ ಪ್ರತಿಭಟನೆಗಳಲ್ಲಿ, ನಾನೂ ಸೇರಿದ ಹಾಗೆ, ಪ್ರಗತಿಪರರೆಂದು ಭಾವಿಸಿಕೊಳ್ಳುವವರು ನಮ್ಮ ಬೊಗಳೆಯನ್ನೇ ಪುನರುಚ್ಚರಿಸಿದೆವು. ಆಗ ಆಶೀಶ್ ನಂದಿ ಸತಿಪದ್ಧತಿಯ ಬಗ್ಗೆ ತಮ್ಮ ಪ್ರಬಂಧದಲ್ಲಿ ಪ್ರಕಟಿಸಿದ ನಿಲುವನ್ನು ಮತ್ತೊಮ್ಮೆ ಪ್ರತಿಪಾದಿಸಿದರು ಮಾತ್ರವಲ್ಲ, ದೇವರೊಲ ಘಟನೆಯ ಕೆಲವು ವಾಸ್ತವಿಕ ಅಂಶಗಳ ಬಗ್ಗೆ ನಾವು ಹುಸಿ ಸುಳ್ಳುಗಳನ್ನು ಹೇಳುತ್ತಿರುವುದನ್ನು ಎತ್ತಿ ತೋರಿಸಿದರು. ದೇವರೊಲ ನಮ್ಮ ಉಡುಪಿಯ ಹಾಗೆ ಆಧುನಿಕತೆಯನ್ನು ಉಂಡ ಊರಾಗಿತ್ತು; ರೂಪ್ ಕನ್ವರ್, ಅವಳ ಪತಿ ಹಾಗು ಮಾವ ಆಧುನಿಕ ವಿದ್ಯಾವಂತರಾಗಿದ್ದರು; ಇಷ್ಟಿದ್ದೂ ನಾವು ಆ ಘಟನೆಯನ್ನು 'ಮಧ್ಯಯುಗೀನ ಸಮಾಜದ ಮೂಢನಂಬಿಕೆಗಳಿಗೆ ಜೋತುಬಿದ್ದವರ ಬರ್ಬರ ಕೃತ್ಯ' ಎಂದೆವು! ರಾಜಸ್ಥಾನದ ಹಳ್ಳಿಯ ಜನರ ಒತ್ತಾಸೆಯಿಂದ ಈ ಕೃತ್ಯ ನಡೆದಿರಲಿಲ್ಲವಾದರೂ, ಆ ಘಟನೆ ನಡೆದನಂತರ ನಿರ್ಮಾಣವಾದ 'ಸತಿಸ್ಥಳ'ಕ್ಕೆ ರಾಜಸ್ಥಾನದ ಸಾವಿರಾರು ಸಂಖ್ಯೆಯ ಗ್ರಾಮವಾಸಿಗಳು ಹೋಗಿ ನಮಿಸಿದರು. ಆ ಸಂದರ್ಭದಲ್ಲಿಯೇ ಆಶೀಶ್, ಆಧುನಿಕರಾದ ರೂಪ್ ಕನ್ವರಳ ಮಾವನ ಮನೆಯವರು 'ದೇಹವನ್ನು ಜೀವಂತ ಸುಡುವ ಅಸಹ್ಯ' ವಾಸ್ತವಿಕ ಆಚರಣೆಯನ್ನು ನಡೆಸಿದರೆ, ಗ್ರಾಮೀಣ ಜನ 'ಧಾರ್ಮಿಕ ಪಾವಿತ್ರ್ಯದ ಪ್ರತಿಮೆ'ಯಾಗಿ 'ಸತಿಸ್ಥಳ'ಕ್ಕೆ ಯಾತ್ರಾರ್ಥಿಗಳಾಗಿದ್ದರ ವ್ಯತ್ಯಾಸ ಅರ್ಥವಾಗದಿರುವ ನಿಮಗೆ ಭಾರತದ ಜನಸಮೂಹದ ನಂಬಿಕೆಗಳ ಕುರಿತಾಗಿ ಸೈದ್ಧಾಂತಿಕ ಅಹಂಮಿಕೆಯ ಹೇವರಿಕೆಯನ್ನು ಬಿಟ್ಟರೆ ಮತ್ತೇನೂ ತಿಳಿದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಇದು ದೇವರೊಲದ ಸತಿ ಪ್ರಕರಣದ ಸುತ್ತ ನಡೆದ 'ವಾದವಿವಾದಗಳ' ಹೂರಣ.



ಇಷ್ಟು ವಿವರಿಸಿದ ನಂತರ, ಆಶೀಶ್ 'ಹಿಂದು ಬಲಪಂಥದ ಟ್ರೋಜನ್ ಕುದುರೆ'ಯಾಗಿದ್ದರೋ ಇಲ್ಲವೋ ಎಂಬುದನ್ನು ಓದುಗರ ಚಿಂತನಾಶಕ್ತಿಗೆ ಬಿಡುವುದೊಳ್ಳೆಯದು.

ಆಶೀಶ್ ನಂದಿಯವರ ವಿಚಾರಗಳನ್ನು ಯಾರೂ ಯಥಾವತ್ತಾಗಿ ಒಪ್ಪಿಕೊಳ್ಳಬೇಕಾಗಿಲ್ಲ; ಅವರ ವಿಚಾರಗಳೇ ಭಾರತದ ಜನಜೀವನದ ಸಂಪೂರ್ಣ ದರ್ಶನ ಮಾಡಿಸಬಲ್ಲಂತಹವು ಎಂಬ ಹುಂಬ ಅಹಂಕಾರವನ್ನು ಸ್ವತಃ ಆಶೀಶರ ಬರಹಗಳೇ ಪ್ರಕಟಿಸುವುದಿಲ್ಲ, ಆಶೀಶ್ ನಂದಿಯಂತಹ ಚಿಂತಕರ ವಿಚಾರಗಳ ವಿಮರ್ಶೆ ಮಾಡುವಾಗ ತೋರಬೇಕಾದ ಎಚ್ಚರ ಹಾಗು ವೈಚಾರಿಕ ಸಂಯಮವನ್ನು ಕಡೆಗಾಣಿಸಿದರೆ ಆಗುವ ನಷ್ಟದ ಬಗ್ಗೆ ಎಡಪಂಥೀಯರು ಇಂದಿಗೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ.

ಕೊನೆಯದಾಗಿ: 'ಭಳಾರೆ ವಿಚಿತ್ರಂ' ಎನ್ನುವ ಆಶ್ಚರ್ಯ ಅಭಿವ್ಯಕ್ತಿ ಭಾಷಾ ಪ್ರಯೋಗವನ್ನು ನಾನು ಕಲಿತಿರುವುದು ಕನ್ನಡ-ತೆಲುಗು ದ್ವಿಭಾಷಿಕತೆಯ ಬಳ್ಳಾರಿ ಸೀಮೆಯ ಬಯಲಾಟಗಳಿಂದ; ಕಂಪೆನಿ ನಾಟಕಗಳು ಹಾಗು ಸಿನಿಮಾಗಳು ಈ ನಮೂನೆಯ ಲೋಕಜ್ಞಾನವನ್ನು ತಮ್ಮ ಯೋಗ್ಯತಾನುಸಾರ ಬಳಸಿಕೊಂಡಿವೆ. ಇದರಲ್ಲಿ ಮೂಗುಮುರಿಯುವಂತಹುದು, 'ವಿವಾದನೀಯ'ವಾದದ್ದೂ ಏನು ಇಲ್ಲ.

■ ಕೆ.ಫಣಿರಾಜ್



...ನ್ನೆಲದಿನ್ನೆ ಕಡೆಯ ನಡಿಗೆ ಅದೇಕೋ ತುಂಬಾ ...ನ್ನಿಸಿತು. ಭಾರವಾದ ಹೆಜ್ಜೆಗಳೊಂದಿಗೆ ಪಿಟ್ಬೋನು, ...ಯ್ಯ, ಪೋಲಯ್ಯ ತಮ್ಮ ಮಾತಿನಲ್ಲಿ ತಾವು ...ಗಿದ್ದರೆ ಎಲ್ಲನ್ನ ಸ್ವಲ್ಪ ದೂರದಲ್ಲಿ ಮೌನವಾಗಿ ...ದ್ದ. ನಾಗನ್ನನಿಗೆ ಆ ಮೌನವನ್ನ ತಡೆದುಕೊಳ್ಳುವ ... ಇಲ್ಲವಾಯಿತು. ಇಂದಿನ ಈ ಘಟನೆ ...ವ ಜೀವನದಲ್ಲಿ ಯಾವ ಯಾವ ತಿರುವುಗಳನ್ನು ...ಹಾಕುತ್ತೆ ಅನ್ನೋದು ನಾಗನ್ನನ ಕಳವಳಕ್ಕೆ ...ವಾಗಿತ್ತು. ಎಲ್ಲನ್ನ ಕಲಾವಿದ, ಸಂವೇದನೆ ...ವನ ಹೃದಯ ವೈಶಿಷ್ಟ್ಯ. ದಿಬ್ಬಲಮಿಟ್ಟದ ಜನರನ್ನು ... ಹೇಗೆ, ಎಷ್ಟರಮಟ್ಟಿಗೆ ಅರ್ಥಮಾಡಿಕೊಳ್ತಾನೆ ...ದರ ಮೇಲೆ ಅವನ ಸಂವೇದನೆ ಎಂಥದ್ದು ...ದು ಅವಲಂಬಿಸಿರುತ್ತೆ. ಆ ಜನರ ಭಯವನ್ನು ...ಮಾಡಿಕೊಂಡು ಅವರಿಂದ ಆ ಭಯವನ್ನ ಹೋಗ ...ೋ ಮಾರ್ಗ ಹುಡುಕೋ ಸ್ಪಂದನೆ ಅವನಲ್ಲಿ ...ವರೆ ಅವನ ಕಣ್ಣಿನ ಕೆಂಪಿಗೆ ನಿಜವಾದ ಅರ್ಥ ... ತಿರುವಿನಲ್ಲಿ ಜೋರಾಗೋ ಪ್ರವಾಹದಂತೆ, ...ಳ್ಳೋ ಪ್ರೇಮದಂತೆ ಅವನಲ್ಲಿ ಉಳಿಯುತ್ತೆ. ...ದೆ, ಈ ಜನರನ್ನು ನಂಬಿ ಏನೂ ಮಾಡಬಾರದು ... ಏನಾದರು ಅನ್ನಿಸಿತೋ ಅದು ದುರಂತ. ...ದನ ಸಂವೇದನೆ ಅತಿ ಸೂಕ್ಷ್ಮವಾದ ...ು.

...ಗೆಲ್ಲಾ ಯೋಚಿಸ್ತಾ ಇದ್ದ ನಾಗನ್ನನಿಗೆ ನಡೆ ...ೂ ಕಷ್ಟವಾಗಿತ್ತು. ಅದೇ ಸಮಯಕ್ಕೆ ಸರಿಯಾಗಿ ...ದೃಶ್ಯ ಅವನ ಹೃದಯದ ಭಾರವನ್ನ ಇನ್ನೂ ...ತು. ಯಾರೋ ಬಲವಾಗಿ ಅವನ ಎದೆಯ ... ಒದ್ದು ಕೊಡವಿದಂತೆ ಅನ್ನಿಸಿತು. ಒಂದು ...ಾಡಿ ಆ ಮಣ್ಣಿನ ದಾರಿಯಲ್ಲಿ ಧೂಳೆಬ್ಬಿಸುತ್ತಾ ... ಮಟ್ಟದ ಕಡೆಯಿಂದ ಎನ್ನೆಲದಿನ್ನೆಯ ಕಡೆ ...ಇತ್ತು. ಅದು ಅಚ್ಚರೆಡ್ಡಿಯ ಗಾಡಿ, ...ಳ ಗಂಟೆಗಳ ಶಬ್ದದಿಂದಲೇ ಅದು ...ಯದೇ ಗಾಡಿ ಅಂತ ಗುರ್ತು ಹಿಡಿದ ...ನು. ಅದು ಹೋಗುತ್ತಿದ್ದ ದಾರಿಯ ... ನೋಡುತ್ತಿದ್ದ ನಾಗನ್ನನಿಗೆ ಆ ಗಂಟೆಗಳ ...ನ್ನ ಸೋಲು, ಅಚ್ಚರೆಡ್ಡಿಯ ಗೆಲುವಿನ ...ವಾಗಿ ಕಂಡಿತು.

...ಗ ಸುಲಭವಾಗಿ ಮುಂದಕ್ಕೆ ...ೀದಕ್ಕೆ ಆಗ್ತಾ ಇಲ್ಲ. ಸಂಜೆ ... ಕವಿತಾ ಇತ್ತು. ಹೊಲೆಯನ ... ಮೇಲೆ ನಡೆದು ಊರು ...ಣ ಅಂದುಕೊಂಡು ಅತ್ತ ಕಡೆ ...ದರು. ಆ ದಿಬ್ಬ ಹತ್ತಿರ ಬರುತ್ತಿದ್ದಂತೆ ... ಎದೆಬಡಿತ ಜೋರಾಯಿತು. ಇನ್ನು ...ರಾಗಲಿಲ್ಲ ಅವನಿಗೆ.

...ಂದಾ ಸ್ವಲ್ಪ ಹೊತ್ತು ನಿಲ್ಲೋಣ" ಎಂದ ನಾಗನ್ನನ ...ಲ್ಲನ್ನ ನೋಡಿದ. ಕಂದಾ ಈ ಮೊದಲೆಲ್ಲಾ ...್ಯ, ಈ ಕರೆ ಈ ನಡುವೆ ಇರಲಿಲ್ಲ, ಅದೂ ... ದನಿಯಲ್ಲಿ ಹೇಳುತ್ತಿದ್ದಾನೆ.

...ಲ್ಪ ಹೊತ್ತು ಕೂತಿರೋಣ."

...ಲ್ಲೆ ಸ್ವಲ್ಪ ಹೊತ್ತು ಕೂತುಕೊಂಡು ಆಮೇಲೆ ...ೋಣ ಎಂದವನೇ ನಾಗನ್ನ ನಿಂತ ಜಾಗದಲ್ಲೇ ... ಬಿಟ್ಟ.

...ತ್ತಲೂ ಕತ್ತಲು ಮುಸುಕಿತ್ತು, ಹೊಲೆಯನ ... ಮೇಲಿನ ಜೋಳದ ಬೆಳೆ ಚೆನ್ನಾಗಿ ಬೆಳೆದಿದ್ದು ...ಬುಗೊಂಚಲಾಗಿ ಬಿಟ್ಟಿದ್ದ ಜೋಳದ ತೆನೆಯು ...ಕೆಮ್ಮದಿಯಿಂದ ನೋಡಿದ ನಾಗಣ್ಣ, ಬೆಳದಿಂಗಳಾ ...ಇಷ್ಟು ಚೆನ್ನಾಗಿತ್ತು ಅಂದುಕೊಂಡ. ಅದರೂ ಜೋಳದ ತೆನೆ ಕತ್ತಲಲ್ಲೂ ಚನ್ನಾಗಿಯೇ ಕಾಣಿಸ್ತಿತ್ತು. ಕಾವಲುಗಾರನನ್ನ ಕೂಗಿ ಕರೆದು ಸ್ವಲ್ಪ ಕುಡಿಯೋ ನೀರಿದ್ದರೆ ತಾ ಅಂದ ಪಿಟ್ಬೋನು.

'ಬೆಳೆ ಚನ್ನಾಗಿದೆ.... ಈ ಸಲ ಹೊಟ್ಟೆಪಾಡಿಗೆ ಭಯವಿಲ್ಲ.'

ನಾಗನ್ನನ ಮಾತುಗಳಿಗೆ ಎಲ್ಲರೂ ತಲೆಯಾಡಿಸಿದರು. ಅಷ್ಟು ಕತ್ತಲಲ್ಲಿಯೂ ನಾಗನ್ನ ಏನನ್ನೋ ಹುಡುಕುತ್ತಿದ್ದ ಹಾಗಿತ್ತು. ಅವನು ನೋಡ್ತಾ ಇದ್ದ ಕಡೆಯೇ ಎಲ್ಲರೂ ನೋಡಿದರೆ ಅವರಿಗೆ ಕಂಡಿದ್ದು ಸ್ವಲ್ಪ ದೂರದಲ್ಲಿ ಅಚ್ಚರೆಡ್ಡಿಯ ಹೊಲದ ನಡುವಿನ ಕಾವಲುಗಾರನ ಪಂಜು.

'ಅದು ಅಚ್ಚರೆಡ್ಡಿಯ ಸೊತ್ತಲ್ಲ. ಶ್ಯಾನುಭೋಗನ ಲೆಕ್ಕಕ್ಕೆ ಅದು ಬರೋದಿಲ್ಲ.' ಎಲ್ಲರೂ ನಾಗನ್ನ ಬೆರಳಿನಿಂದ ತೋರಿಸುತ್ತಿದ್ದ ಕಡೆಗೇ ನೋಡಿದರು. ಆ ರೆಡ್ಡಿಯ ಹೊಲಕ್ಕೂ, ಹೊಲೆಯನ ದಿಬ್ಬಕ್ಕೂ ನಡುವೆ ಜಾಲಿಮರಗಳ ಗುಂಪು ತಲೆಕೂದಲು ಬಿಚ್ಚಿಕೊಂಡ ದೆವ್ವಗಳ ಥರ ಆಡ್ತಾ ಇದ್ದವು.

'ಈ ಬದುವು ಅಲ್ಲಿ ಬೀಳಬೇಕು.'

ಎಲ್ಲನ್ನ ನಾಗನ್ನನ ಕಣ್ಣುಗಳನ್ನು ಬೆದಕುವವನಂತೆ ನೋಡಿದ. ತನ್ನ ಕಡೆಗೇ ಹಾಗೆ ನೋಡ್ತಾ ಇದ್ದ ಎಲ್ಲನ್ನನ ಬೆನ್ನು ತಟ್ಟಿ ನಾಗನ್ನ ಮೇಲಕ್ಕೆದ್ದ. ಸ್ವಲ್ಪ ನೀರು ಕುಡಿದು ಮತ್ತೆ ನಡೆದ. ಹಾದಿಯ ಉದ್ದಕ್ಕೂ ಮಾತನಾಡ್ತಾಲೇ ಇದ್ದ. ಆದರೆ ಈಗ ಅವನ ಮಾತು ಹೊಸದಾಗಿ ಕೇಳುತ್ತಿತ್ತು. ಅವನ ದನಿ ಕ್ಷೀಣವಾಗಿತ್ತು. ಆದರೂ ಮಾತನಾಡುತ್ತಲೇ ಇದ್ದ. ತಮ್ಮೆಲ್ಲರ ಆಟ, ಹಾಡು ಎಲ್ಲವೂ ಬದಲಾಗಬೇಕೆಂದ. ಎರಡು ಮೂರು ಹೊಸ ಹಾಡುಗಳನ್ನ ಹೇಳಿದ. ಅವರಿಗೆ ಅವು ಪೂರ್ತಿ ಹೊಸದಾಗಿದ್ದವು. ಹಸಿವು, ಭೂಮಿ, ಕಣ್ಣೀರು, ಹೊಲೆಯರು, ಮಾದಿಗರು, ಈ ಎಲ್ಲವೂ ಆ

ಜಿ. ಕಲ್ಯಾಣರಾವ್‌ರವರ ಅಸ್ಪೃಶ್ಯ ವಸಂತ 12

ಅನುವಾದ: ಪ್ರೊ. ನಗರಗೆರೆ ರಮೇಶ್

ಹಾಡುಗಳಲ್ಲಿ ತುಂಬಿದ್ದವು.

ಆ ರಾತ್ರಿ ಎಲ್ಲನ್ನ ನಾಗನ್ನನ ಹತ್ತಿರವೇ ಇದ್ದುಬಿಟ್ಟ. ಅವನು ಒಂದೊಂದು ಹಾಡನ್ನೂ ತನ್ನ ಮನಸಿನಲ್ಲಿ ಮಟ್ಟುಗಳ ಸಮೇತ ಕಟ್ಟಿಹಾಕುತ್ತಿದ್ದ. 'ಕಂದಾ, ಗಂಗೆಯ ಹಾಡುಕೇಳೋ' ಅಂತ ಹೇಳಿ ನ್ನಾಗನ್ನ ಗಂಗೆಯ ಹಾಡು ಹಾಡಿದ. ಗಂಗೆಯನ್ನ ಭೂಮಿಗೆ ತಂದಿದ್ದು ಭಗೀರಥನಲ್ಲ, ತಮ್ಮಟೆ ಹಾಡಿನವರು. ಭಗೀರಥನ ಕಥೆ ಸುಳ್ಳು; ತಮ್ಮಟೆ ಹಾಡಿನವರು ವಾಸ್ತವ. ತಮ್ಮಟೆ ಶಬ್ದದಿಂದಲೇ ಪ್ರಳಯ ಹುಟ್ಟಿದ್ದು. ಈ ಭೂಮಿಯ ಮೇಲೆ ಮೊದಲು ನೀರಿನ ಕಾಲುವೆ ಕಟ್ಟಿದ್ದು ಮಾದಿಗರು, ಹೊಲೆಯರು, ಎರಕಲವರು, ಯಾನಾದಿಗಳು. ಗಿರಿಸೀಮೆ ಗುಂಡಿಗೆಯಲ್ಲಿ ನಿದ್ರೆ ಮಾಡೋ ಗಿರಿಜನರು.

ಬೆಂಕಿಯನ್ನ ಬೆಳಸಿದರು. ನೀರು ತಂದರು. ನೆಲವನ್ನು ಉತ್ತಿ, ಬಿತ್ತಿ ಅನ್ನ ಕಾಣಿಸಿದರು. ಬೇರೆಯವರೆಲ್ಲಾ ಆಮೇಲೆ ಬಂದವರೇ. ಅದುವರೆಗೂ ದುಡೀತಿದ್ದವರ ತಟ್ಟೆಯುಳ್ಳಿ ಅಗ್ನವನ್ನ ಕದ್ದ ಯಾರೇ ಇರಲಿ ಆಮೇಲೆ ಬಂದವರೇ. ನಾಗನ್ನನ ಹಾಡುಗಳ ತುಂಬಾ ಈ ಕಥೆಗಳೇ. ಹಾಗೇ ಹಾಡುತ್ತಲೇ ಇದ್ದ ರಾತ್ರಿ ಅದೆಷ್ಟೋ ಗಂಟೆಗಳು ಕಳೆದು, ಬೆಳಕು ಹರಿಯುತ್ತಿದ್ದಾಗ ಕೋಳಿ ಕೂಗಿತು. 'ನಿದ್ದೆ ಬರ್ತಾ ಇದೆಯೋ ಕಂದಾ' ಅಂತ ಹೇಳಿ ಕಣ್ಣು ಮುಚ್ಚಿದ. ದಿನವೂ ಈ ಹೊತ್ತಿಗೆ ಏಳುತ್ತಿದ್ದ ನಾಗನ್ನ ಅವತ್ತು ಅದೇ ಹೊತ್ತಿಗೆ ನಿದ್ದೆ ಬರುತ್ತೆ ಅಂತ ಹೇಳಿ ಕಣ್ಣು ಮುಚ್ಚಿದವನು ಮತ್ತೆ ಕಣ್ಣು ತೆರೆಯಲೇ ಇಲ್ಲ. ಅವನ ನಿದ್ದೆ ಮುಗಿಯಲೇ ಇಲ್ಲ. ಗಂಗೆ ದಡವನ್ನ ಕೊಚ್ಚಿ ಯಾವ ಕಡೆ ಓಡಿತೋ ಗೊತ್ತಾಗಲೇ ಇಲ್ಲ. ತಮಟೆ ಶಬ್ದ ಯಾವ ದೂರ ತೀರಗಳನ್ನ ತಾಕಿ ಪ್ರಳಯವನ್ನ ಸೃಷ್ಟಿಸುತ್ತೋ ತಿಳಿಯೋದೇ ಇಲ್ಲ.

ಚಂದ್ರಪ್ಪನ ಪೌರಾಣಿಕ ಕಥೆಗಳಲ್ಲಿ ಹುದುಗಿರೋ ಸಾವಿನ ರಹಸ್ಯದ ಬಗ್ಗೆ ಏನೂ ಹೇಳದೇ ಕಣ್ಣು ಮುಚ್ಚಿದ್ದ ನಾಗನ್ನ. ಆದರೂ ಅವನದೇ ಒಂದು ಹಾಡಿತ್ತು. ಬೀಸೋಕಲ್ಲಿನ ಹಾಡು. ಸೌದೆಗಳೇ ಬಳಗ, ಚಟ್ಟ ಹತ್ತಿರದ ಬಂಧು, ಮಡಕೆಗಳು ಬಾವ ನಾದಿನಿಯರು. ಬೊಗಸೆ ಬೊಗಸೆ ಮಣ್ಣು ಎದೆಯಬಡಿತ. ಬಳಗ ಬಂಧು ಎಲ್ಲರೂ ಸುತ್ತುವರೆದು ಕೂತು ಕಣ್ಣೀರು ಸುರಿಸ್ತಾರೆ. ಆಮೇಲೆ! ಅವರ ದಾರಿ ಅವರಿಗೆ. ಅವರ ಕೆಲಸ ಅವರಿಗೆ. ಆದರೆ ನಾಗನ್ನನ ಹಿಂದೆ ಯಾರೂ ಹೋಗದೇ ಇದ್ದರೂ ನಾಗನ್ನ ಮಾತ್ರ ಎನ್ನೆಲದಿನ್ನೆಯಲ್ಲೇ ನಿಂತುಬಿಟ್ಟ.

ತಮಟೆ ಶಬ್ದದಿಂದ ಹುಟ್ಟಿದ ಪ್ರಳಯ

ನಾಗನ್ನನ ಎಲ್ಲ ಕಾರ್ಯಗಳನ್ನೂ ಎಲ್ಲನ್ನನೇ ಮಾಡಿದ. ಎಲ್ಲಾ ಮುಗಿಯೋವರೆಗೂ ಎದೆ ಗಟ್ಟಿಮಾಡಿಕೊಂಡಿದ್ದ. ಮುಗಿದ ಮೇಲೆ ತನಗಿನ್ನೇನೂ ಆಗಬೇಕಾದ್ದಿಲ್ಲ, ಇನ್ನುಮುಂದೆ ತನಗೆ ಜೀವನವೇ ಇಲ್ಲ ಅನ್ನೋ ಹಾಗೆ ಕುಳಿತುಬಿಟ್ಟ. ದಿಕ್ಕು ದಿಕ್ಕಿನಲ್ಲಿ ನಾಗನ್ನನನ್ನೇ ಹುಡುಕ್ತಾ ಇದ್ದ. ಅವನು ಸಾಯೋ ಮುಂಚೆ ಆಡಿದ ಒಂದೊಂದು ಮಾತೂ ಮತ್ತೆ ಮತ್ತೆ ನೆನಪಿಸಿಕೊಳ್ತಾ ಇದ್ದ. ಆ ರಾತ್ರಿಯ ಹೊಸ ಹಾಡುಗಳು, ಆಡಿದ ಮಾತುಗಳು, ಮುಖ್ಯವಾಗಿ ಗಂಗೆಯ ಹಾಡು ತನಗೇನೋ ಹೊಸ ವಿಷಯ ತಿಳಿಸ್ತಾ ಇವೆ ಅನ್ನಿಸಿತು. ಆದರೆ ಅದೇನು ಅನ್ನೋದೇ ಗೊತ್ತಾಗ್ತಿರಲಿಲ್ಲ.

ಆಟಕ್ಕೆ ಮುಂಗಡ ಕಟ್ಟೋರೆಲ್ಲಾ ಬಂದು ಬಂದು ಹೋಗ್ತಾ ಇದ್ದರು. ಆಟ ಆಡೋಕೇ ಮನಸಿಲ್ಲ, ಅವರ ಹಣ ವಾಪಸು ಮಾಡಿ ಕಳಿಸುತ್ತಿದ್ದ. ನಾಗನ್ನನಿಗೆ ತನ್ನ ಸೋಲನ್ನ ಸಹಿಸೋಕಾಗ್ಲಿಲ್ಲ. ಇಲ್ಲದಿದ್ದರೆ ಸಾಯುತ್ತಿರಲಿಲ್ಲ. ಸ್ವಾಭಿಮಾನ ಅನ್ನೋದು ಸಣ್ಣ ವಿಷಯ ಅಲ್ಲ. ಏನಾದರೂ ಆಗಲಿ ಅಂತ ದಿಬ್ಬಲ ಮಟ್ಟದಲ್ಲಿ ಆಟ ಆಡಬೇಕಾಗಿತ್ತು. ಆ ಹಟ್ಟಿಯ ಜನವೂ ಆಗಿದ್ದಾಗಲಿ ಅಂತ ರೆಡ್ಡಿಗಳನ್ನ ಎದುರಿಸಿ ನಿಂತುಬಿಡಬೇಕಾಗಿತ್ತು. ಅವರನ್ನೆಲ್ಲಾ ಮನಸ್ಸಿನಲ್ಲೇ ಹಳಿದುಕೊಂಡ. ಅದರ ಹಿಂದೇನೇ ನಾಗನ್ನನ ಮಾತುಗಳು ನೆನಪಾದವು. ಪ್ರೀತಿ, ದ್ವೇಷ ಎರಡನ್ನೂ ನಾಗನ್ನನಿಂದಲೇ ಕಲಿತದ್ದು. ನಾಗನ್ನ ಶ್ಯಾನುಭೋಗನನ್ನ, ಅಚ್ಚರೆಡ್ಡಿಯನ್ನು ದ್ವೇಷಿಸ್ತಾ ಇದ್ದ. ದಿಬ್ಬಲ ಮಟ್ಟದ ಹೊಲೆಮಾದಿಗರು ತನಗೆ ಕೈಕೊಟ್ಟರೂ ಅವರ ಬಗ್ಗೆ ಪ್ರೀತಿಯಿಂದಲೇ ಇದ್ದ. ಊರು ಹತ್ತಿರ ಬಂದಾಗ ಹೊಲೆಯರ ದಿಬ್ಬದ ಹತ್ತಿರದ ಜಮೀನನ್ನೂ ಸ್ಪಷ್ಟವಾಗಿ ತೋರಿಸಿ ಅದು ಅಚ್ಚರೆಡ್ಡಿಗೆ ಸೇರಿದ್ದಲ್ಲ ಅಂತಲೂ ಹೇಳಿದ್ದ. ಅದೂನೂ ಹೊಲೆಯರ ದಿಬ್ಬಕ್ಕೇ ಸೇರಬೇಕು ಅಂತ. ಎಲ್ಲಕ್ಕಿಂತಲೂ ಮಿಗಿಲಾಗಿ, ಅವನು ಆ ರಾತ್ರಿ ಹಾಡಿದ ಹಾಡುಗಳು, ಅವುಗಳ ಅರ್ಥ, ಅವನು ಆ ಹಾಡುಗಳನ್ನ ಹಾಡಿದ್ದಾದರೂ ಯಾಕೆ? ಹಸುವಿನ ಹಾಡು, ಗುಡಿಸಿಲ ಹಾಡು ಹಾಡಿದ. ಗಂಗೆಯ ಹಾಡಿನಲ್ಲಿನ ಬೆಂಕಿ, ನೀರು, ಅನ್ನ ಇವೆಲ್ಲಾ ಏನು? ಸ್ಪಷ್ಟವಾಗಿ ಅರ್ಥ ಆಗ್ತಿಲ್ಲ. ಆದರೂ ಏನೋ ಇದೆ. ಇದುವರೆಗೂ ತಾನು ಮಾಡದೇ ಇದ್ದದ್ದು ಮಾಡಬೇಕು ಅನ್ನೋ ಅರ್ಥ ಏನೋ ಇದೆ. ತನಗೆ ಸರಿಯಾಗಿ ತಿಳೀತಿಲ್ಲ ಅಷ್ಟೇ.

ತನ್ನ ಬಾಳಿನಲ್ಲಿ ಈಗ ಅರ್ಥವಾಗದ ... ಶೂನ್ಯ ಎಂದಿಗೂ ತೀರದ ದಾಹ. ಏನಾಯಿತು ತಾನು ಹಾಡುತ್ತಾ, ಆಡುತ್ತಾ ಇದ್ದಾಗಿನ ಆನಂದ? ಇದುವರೆಗೂ ತನ್ನ ಜೊತೆಯಲ್ಲೇ ಕುಣೀತಿದ್ದ, ತನ್ನ ಜೊತೆಯ ಕಲಾವಿದ ಈಗ ... ಹಾಡಿನ ಹಾಡು ... ಮಾಡಿ ಆಗ್ತಾ ಇದ್ದಾನೆ? ಹೀಗೆ ಮುಗಿದುಹೋಗ... ...?

ಎಲ್ಲನ್ನ ಪೂರ್ತಿ ಮೂಕನಂತೂ ಆಗಲಿಲ್ಲ. ಆದರೂ ಇದುವರೆಗಿನ ಜೀವನದ ನಿರಂತರ ... ಮೇಲೆ ಬೀಳ್ತಾಲೇ ಇತ್ತು. ತನಗೂ ಸುತ್ತಲಿನವರಿಗೂ ಇರೋ ಬಂಧ ನಿಧಾನವಾಗಿ ಕಳಚಿ ಹೋಗ್ತಾ ಇದೆಯೇನೋ ಅನ್ನಿಸಿತು. ಹೀಗೇ ಇದ್ದರೆ ಅದು ಪೂರ್ತಿಯಾಗಿ ಇಲ್ಲವಾಗುತ್ತೇನೋ ಅನ್ನೋ ಅನುಮಾನ, ಹೆದರಿಕೆ.

ನಾಗನ್ನನ ಜೊತೆ ತಾನೂ ಹಾಡಿದ್ದ. ಇದುವರೆಗೂ ತನ್ನ ಆನಂದಕ್ಕಾಗಿ, ಆತ್ಮತೃಪ್ತಿಗಾಗಿ, ಕೇಳುಗರ ಆನಂದಕ್ಕಾಗಿ ಹಾಡ್ತಿದ್ದ. ಆದರೆ ಅದಕ್ಕೆಲ್ಲಾ ಸ್ಫೂರ್ತಿ ಎಲ್ಲೋ, ಬೇರೆಲ್ಲೋ ಇದೆ. ಅದಕ್ಕಾಗಿಯೇ ಈ ಹುಡುಕಾಟ. ಮರ, ಹುತ್ತ, ಕಾಗೆ, ಕೋಗಿಲೆ, ಕಣ್ಣೀರು, ಪನ್ನೀರು, ಹಸಿವು, ಭೂಮಿ.... ಇನ್ನೂ ಹಾಗೇ ಯೋಚಿಸಿದರೆ.... ಮತ್ತೆ ಭೂಮಿ, ಹಸಿವು, ಸ್ವಾಭಿಮಾನ.... ಕೊನೆಗೂ ಅಲ್ಲಿಗೆ ಬಂದು ನಿಂತವು ಎಲ್ಲನ್ನನ ಮನದಾಳದ ಅಲೆಗಳು. ಮತ್ತೆ ನಾಗನ್ನನ ಮಾತುಗಳು. ನಮ್ಮ ಜಮೀನಿನ ಹದ್ದು ಇಲ್ಲಲ್ಲ, ಅಲ್ಲಿ, ಅಚ್ಚರೆಡ್ಡಿಯ ಜಮೀನಿನ ಹತ್ತಿರ, ಸರಿಯಾಗಿ ಅಲ್ಲಿ, ಅಲ್ಲಿ ಮಾತ್ರವೇ. ನಮ್ಮಲ್ಲಿನ ದೊಡ್ಡವರನ್ನ, ಮಾದಿಗರ, ಹೊಲೆಯರ ದೊಡ್ಡವರನ್ನ ನೋಡಿ ಆ ಶ್ಯಾನುಭೋಗ, ಅಚ್ಚರೆಡ್ಡಿ ಅಂಥವರೆಲ್ಲಾ ಹೊಟ್ಟೆ ಉರಿದುಕೊಂಡು ಸಾಯಬೇಕು. ಹಾಗೆ ಅವರನ್ನೆಲ್ಲಾ ಕರೆಯಬೇಕು. ಇವರನ್ನ ಕರೆದು, ಅವರನ್ನ ಸಾಯಿಸಬೇಕು. ಹಾಗೆ ಕರೆಯೋಕಾಗದಿದ್ರೆ ತನ್ನ ಕುಣಿತ, ಹಾಡು, ಮಾತು.... ಸ್ವಾಭಿಮಾನ ಇವೆಲ್ಲಾ ಬರೀ ಮಾತುಗಳು, ಉತ್ತರವಿಲ್ಲದ ಪ್ರಶ್ನೆಗಳು.

ಅವನು ಹೇಗೆ ಬಂದು ಹೇಗೆ ಮಾಯವಾದ? ಏನು ಮಾಡಿಹೋದ? ಉರುಮೆಯ ಹೊಲೆಯ, ಎನ್ನೆಲದಿನ್ನೆ ನಾಗನ್ನ, ನಾರಯ್ಯನ ಮಗ, ಮಹಾನ್ ಕಲಾವಿದ ಏನನ್ನೋ ಹುಡುಕುತ್ತಿದ್ದ. ಏನದು? ತಾನು ಹುಡುಕಿದ್ದು ಕೈಗೆ ಸಿಕ್ಕಿ ಇದ್ದಕ್ಕಿದ್ದ ಹಾಗೆ ಕೈಜಾರಿ ಹೋದಾಗ ಅದೆಷ್ಟು ಹಠಾತ್ತನೆ ನಡಿಗೇನೇ ಬರೋದಿಲ್ವೇನೋ ಅನ್ನೋ ಥರ ನಿಂತುಬಿಟ್ಟ! ಬಳಲಿಕೆಯಿಂದ ಮಲಗಿ ಕಣ್ಣು ಮುಚ್ಚಿದವನು ಮತ್ತೆ ಕಣ್ಣು ತೆಗೆಯಲೇ ಇಲ್ಲವಲ್ಲಾ! ಎಲ್ಲನ್ನನ ಕಣ್ಣು ತುಂಬಾ ನೀರು. ಅವನ ಮನಸ್ಸಿನಲ್ಲಿನ ಸಂಘರ್ಷ ನಿಲ್ಲುವಂಥದಲ್ಲ. ಅವನ ಎದೆಯಲ್ಲಿನ ಸಂಘರ್ಷ ಕಣ್ಣಿನಲ್ಲಿ ಪ್ರತಿಫಲಿಸುತ್ತೆ. ಮನಸಿನ ತುಂಬಾ ದುಗುಡ. ಬದುಕಿನಲ್ಲಿ ವ್ಯಥೆ. ಯಾವುದರ ಮೇಲೋ ತಿರುಗಿಬೀಳಬೇಕು ಅಂತ ಅನ್ನಿಸುತ್ತೆ. ಆದರೆ ಆ ಬಂಡಾಯದ ರೂಪುರೇಷೆಗಳೇ ಅರ್ಥವಾಗ್ತಾ ಇಲ್ಲ.

ಒಂದು ಕ್ಷಣ ಹೀಗೆ ಯೋಚಿಸೋಣ. ಅಶಾಂತಿ, ಆಂದೋಲನ, ದಂಗೆ ಅಥವಾ ಮಹಾ ಕ್ರಾಂತಿಗಳ ಸಂದರ್ಭಗಳಲ್ಲಿ ಸಮಾಜಕ್ಕೂ ಕಲಾವಿದನಿಗೂ ನಡುವಿನ ಸಂಬಂಧ ಎಂದಾದರೂ ಕಡಿದು ಹೋಗಿದ್ದಾಗಲೀ, ಕಡಿಮೆಯಾದದ್ದಾಗಲೀ ಆಗಿದೆಯೇನೋ ಅಂತ ನೋಡೋಣ. ಎಂದಿಗೂ ಹಾಗಾಗಲಿಲ್ಲ. ಅಂಥ ಎಲ್ಲ ಸನ್ನಿವೇಶಗಳಲ್ಲೂ ಶ್ರೇಷ್ಠವಾದ ಕಲೆಯೇ ಸೃಷ್ಟಿಯಾಗಿದೆ. ಜಗತ್ತಿನಲ್ಲಿನ ಎಲ್ಲ ಬದಲಾವಣೆಗಳೂ ಕಲೆಯನ್ನೂ ಬದಲಾಯಿಸುತ್ತಿದ್ದವು. ಎಲ್ಲಾ ಸಮಯದಲ್ಲೂ ವೈವಿಧ್ಯಗಳ ನಡುವಿನ ಘರ್ಷಣೆಯೇ ಇತಿಹಾಸವಾಗಿದೆ. 'ಮಾನಿಷಾದ'ದಿಂದ ಮೊದಲುಗೊಂಡು 'ಮಹಾಪ್ರಸ್ಥಾನ' ದವರೆಗೂ ಬಳಕೆಯಾದ ಪದಗಳನ್ನೆಲ್ಲಾ ರಾಶಿ ಹಾಕಿ ಹುಡುಕಿದರೆ ಅವುಗಳಲ್ಲಿ ಪ್ರಮುಖವಾಗಿ ಕಾಣುವ ಪದಗಳು ಮೂರು- ಅಶಾಂತಿ ಆಂದೋಲನ, ದಂಗೆ. ಆ ಅಶಾಂತಿ ಕಲೆಯಾಯಿತು ಆಂದೋಲನವೇ ಹಾಡಾಯಿತು ... ನಾಯಿತು.

(ಮುಂದುವರಿಯುವುದು)

ಸ್ವಜಾತಿ ಮದುವೆನೆ ಸಯಿಸದೋರು, ಇಂಟ್ರುಕ್ಯಾಸ್ಟು ಮಾಡ್ಯರೆ

ಕಟ್ಟೆಪುರಾಣ

ಬ. ಚಂದ್ರೇಗೌಡ

ಬಿರಬರನೆ ಅಂಗಿಬಿಚ್ಚಿದ ಸೀರ ಅದನ್ನು ಹೆಗಲ ಮೇಲೆ ಎಸೆದುಕೊಂಡು ಟವಲ್‌ನಿಂದ ಗಾಳಿ ಬೀಸಿಕೊಳ್ಳುತ್ತ,

"ಈಗ್ಲೆ ಹಿಂಗಲ್ಲಾ, ಮುಂದ್ಯಂಗೇ ಅಂತ" ಎಂದ.

"ಮುಂದೇನೂಯಿಲ್ಲ. ಯಾವಾಗ್ಲು ವಂಗೆ ಮರದ ನೆಳ್ಳಲ್ಲಿ ಸ್ಯಣೆತ ಬದ್ದಿರಬೇಕಾಯ್ತದೆ" ಎಂದ ಉಗ್ರಿ.

"ವಂಗೆ ಮರತಾನೆ ಎಲ್ಲಿದ್ದವುಲ? ತಾವೆ ಹುಟ್ಟಕ್ಕೂ ಬುಡದಿಲ್ಲ, ನೀವೂ ನೆಡದಿಲ್ಲ, ಹಿಂಗಾದ್ರೆ ಇನ್ನೂ ಅನುಭವುಸ್ಥಿರಿ ಇರಿ" ಎಂದ ಕಾಳಮಾವ.

"ಮನ್ನೆ ದಿನ ನಾಗಮಂಗಲಕ್ಕೋಗಿದ್ದೆ ಕಣಮಾವ, ಯಂತಾ ಬಿಸ್ಲು ಅಂತಿ. ತಲೆ ತಿರಿಗೋಯ್ತು" ಎಂದಳು ಜುಮ್ಮಿ.

"ನಾಗಮಂಗಲಕ್ಯಾಕೋಗಿದ್ದೆ?"

"ಅಂಬುರೀಸ ಬತ್ತನೆ ಅಂದ್ರು. ಮಾತಾಡಸನಾ ಅಂತ ಹೋಗಿದ್ದೆ ಕಣಮಾವ."

"ಈಗ್ಯಾಕ್ ಬಂದಿದ್ದ ಅವುನೂ?"

"ಏ ಮುನಿಸಿಪಾಲ್ಟಿ ಯಲಕ್ಷನ್ನಲೀ ಕಾಂಗ್ರೆಸಿನವು ಎಂಟು, ದಳದವು ಎಂಟು ಗೆದಿದ್ದವಂತೆ. ಅದ್ಯಕ್ಷಾಗಬೇಕಾದ್ರೆ ಒಂದೋಟು ಬೇಕಾಗಿತ್ತಂತೆ. ಅದ್ಕೆ ಹಾಕನಾ ಅಂತ ಬಂದಿದ್ದ."

"ಇಸಿಸಿ ಅವುನೋಟು ಇಲ್ಲಿ ನ್ಯಡಿತದೇನ್ಲೆ?"

"ನ್ಯಡಿತದಂತಪ್ಪ, ಈ ಉಗ್ರಿನು ಅಂಗೆ ಅಂತನೆ."

"ಊ ಕಣಮಾವ, ಮುನಿಸಿಪಾಲಿಟಿ, ನಗರಸಭೆ ಚುನಾವಣೆಲಿ ಲೋಕಸಭೆ ಮೆಂಬ್ರು ಓಟು ಮಾಡಬವುದು. ಅದ್ಕೆ ಅಂಬುರೀಸ್ ಬಂದಿದ್ದ."

"ಅಂಗರೆ ಕಾಂಗ್ರೆಸ್ಸಿನೋರ ಗೆಲ್ಸಿಬುಟ್ರೋದ ಅನ್ನೂ."

"ಏ, ದಳದವು ತಡವಾಗಿ ಬಂದಿದ್ರಿ, ನೀನೋಟು ಮಾಡಂಗಿಲ್ಲ ಅಂತ ತಡುದ್ರು. ಅವುನು ಓಟು ಮಾಡದೆ ಅಂಗೆ ಹೋದ."

"ಮತ್ತೆ ದಳದೋರು ಗೆದ್ರೆ?"

"ಇಲ್ಲ ಕಣಮಾವ. ಶಿವರಾಮೇಗೌಡ ದಳ ದ್ದೊಂದೆಂಗಸ ಖರೀದಿ ಮಾಡಿ ಎಲ್ಲೋ ಮಡಿಕಂಡಿದ್ದು ಓಟು ಮಾಡೋ ಟೇಮಿಗೆ ಕರಕಂಡು ಬಂದ. ಈ ದಳದವುಕೆ ಒಂದೀಟು ಆಂಕಾರ ಬಂದದಲವೇ? ಲಕ್ಷಾಂತ್ರಪಾಯಿ ಮಡಿಕಂಡು ಯಾರಾರ ಸಿಗತರೆ ಅಂತ ಕುಂತಿದ್ರು. ಆಟೊತ್ತಿಗೆ ಶಿವರಾಮ ಬುದ್ಧಿ ಓಡಿಸಿ ಮುನಿಸಿಪಾಲಿಟಿ ಕಾಂಗ್ರೆಸ್‌ನೋರ ಪಾಲಾಗಂಗೆ ಮಾಡಿದ."

"ಓ ಅಂಗಾಯ್ತು ಅನ್ನು?"

"ಊ ಕಣ ಮಾವ. ನಾವತ್ತಗೆ ಮಂಡೇವುಗುಂಟ ಹೋಗಿ ಅವ್ವ ಅಂತ ಸಿನುಮ ನೋಡಿಕಂಡು ಬಂದೊ."

"ಯಂಗಿದ್ದು ಅವ್ವ?"

"ಯಂಗಿದ್ದಳು ಅಂತ ನೋಡಕ್ಕೆ ತಿಕೀಟು ತಗಳಕ್ಕೋದ್ರೆ ತಿಕೀಟು ಕೊಡೊ ಮುಂಡೆ ಮಗ, ನೀವು ಹೆಂಗಸುರು ಬಂದಿದ್ದಿರಲ್ಲಮ್ಮ, ನೋಡಿ ಯೋಚನೆ ಮಾಡಿ ತಿಕೀಟು ತಗಳಿ ಅಂತನೆ. ಅದ್ಯಲ್ಲ ನಿನಿಗ್ಯಾಕೆ, ಮುಚಗಂಡು ತಿಕೀಟು ಕೊಡು ಅಂದಾಗ ಕೊಟ್ಟಕಣ ಮಾವ."

"ಆ ಮುಂಡೆಮಗ ಅದ್ಯಾಕಂಗಂದಾ?"


"ಆ ಸಿನುಮದಲ್ಲಿ ಬೋಗಳವೆ. ಈರೊ ಈರೋಯಿನ್ನಿಗೆ ಎಲ್ಲಿಗೆ ಅಂದ್ರಲ್ಲಿಗೆ ಮುತ್ತು ಕೊಡ್ತನೆ. ಅಂತ ಸಿನುಮ ನೋಡ್ತಿರಾ ಅಂತ ಅವುನ ಲೆಕ್ಕ ಕಣ ಮಾವ" ಎಂದ ಉಗ್ರಿ.

"ಅಂತಾ ಬೋಗಳಿದ್ದವೆ?"

"ಏ, ನಾವು ಬೋದಾಡೊ ಬೋಗಳದ ಕಾಲು ಭಾಗನೂ ಇಲ್ಲ, ಆದ್ರು ನೋಡಕ್ಕೋದೋರ ಯೋಚನೆ ಮಾಡಿ ಅಂತ ಕೇಳೋನ್ನ ತಿಕೀಟು ಕೊಡೊ ಜಾಗದಲ್ಲಿ ಕುಂಡ್ರಿಸಿದ್ರಲ್ಲಾ, ಸಿನುಮ ತಗದೋರು, ನೋಡೋರ ಕತಿಯೇನಾಗಬೇಕು ಹೇಳು?"

"ಅದೋಗ್ಲಿ, ಸಿನುಮ ಯಂಗಿತ್ಲೆ?"

"ಯಲ್ಲಾ ನಮ್ಮೂರ ರಂಗಿ ಮಗಳು ಪುಟ್ಟಿ ಕತೆ ಕಣಮಾವ. ಅವ್ವ ಮಗಳ ಕಾಯದು, ಅವಳು ಬೇಲಿ



ಸಂದಿ, ಕಲ್ಲುಬಾವಿ, ಎಲ್ಲಿ ಅಂದ್ರಲ್ಲಿ ಕಟಿಗಳೋನ ಜ್ವತೆ ತಿರಗ್ತಳೆ. ಕಡಿಗೆ ಊರೋರ ಕಣ್ಣಿಗೆ ಬೀಳ್ತರೆ. ಆಗ ಅವುರ್ಯಲ್ಲ ಅವುರವ್ವನ ಮನೆತಕ್ಕೆ ಯಳಕಂಡು ಬಂದಾಗ ಅವುರವ್ವ ಹುಡುಗನ ಕೈಲೆ ತಾಳಿ ಕಟ್ಟುಸ್ತಳೆ, ಅಷ್ಟೇಯಾ" ಎಂದಳು ಜುಮ್ಮಿ.

"ಏಟು ಸುಲಬಾಗಿ ಕತೆ ಹೇಳಿ ಮುಗುಸ್ತಿಯಲ್ಲೆ ನೀನೂ?"

"ಅದಂಗಲ್ಲ ಕಣಮಾವ, ಹುಡುಗಿ ಲಿಂಗಾಯಿತೊರ್ಳು, ಹುಡುಗ ಬ್ಯಾಡ್ರೋನು. ಅಂತದ್ರಲ್ಲಿ ಸುಲಭಾಗಿ ಮದಿವಾಗಕ್ಯಾದತೆ? ಮದಿವಾಗಬೇಕಾದ್ರ ಏನೇನು ನ್ಯಡಿಬೇಕೋ ಅದ್ಯಲ್ಲ ನ್ಯಡಿತದೆ, ಕಡಿಗೆ ಅಕ್ಕರ್ದ್ರ ನಾಯಿ ತಿಂದ ಮಡಕೆಯ ನಾಯಿಕೊಳ್ಳಿಗೇ ಕಟ್ಟದ್ರ ಅನ್ನಂಗೆ ಮಾಡ್ತಳೆ" ಎಂದ ಉಗ್ರಿ.

"ಅಂಗಾದ್ರೆ ಮ್ಯಾರೇಜಾಗೋಯ್ತೇನೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಯಾವ ಮ್ಯಾರೇಜೋ?"

"ಇದೇನೊ ಉಗ್ರಿ ಹಿಂಕೇಳ್ತಿ? ಇಡೀ ಸುತ್ತಲಳ್ಳಿಗೇ ಗೊತ್ತಿರೊ ಮ್ಯಾಟ್ರು."

"ಅದು ನೀನು ತಿಳದಷ್ಟು ಸುಲಭ ವೇನೊ ವಾಟಿಸ್ಸೆ? ರಾಜಕಾರಣಿಗಳು ಎಂಟ್ರಿಯಾಗ್ಯವುರೆ."

"ಅದ್ಯಾವ ಸುದ್ದಿನ್ಲ?" ಎಂದ ಕಾಳಮಾವ.

"ನೋಡು ದೊಡಪ್ಪ, ತುರುಬನ್ನ ದೊಂದುಡುಗಿ ನಾಗಮಂಗಲದ ಕಾಲೇಜಿಗೆ ಗೋಯ್ತಾಯಿತ್ತು. ಒಬ್ಬುಡುಗನ್ನ ಲವ್ ಮಾಡ್ತು. ಒಂದಿನ ಓಡ್ಯೋಗಿ ಮದಿವಾಗದ ಅಂತ ತೀರ್ಮಾನ ಮಾಡಿದ್ರು. ಅದೇ ತರ ಆದ್ರು. ಆ ಲವ್ವರ್ಸನ ಹಿಡಕಂಡು ಬಂದು ಈಗ ಬ್ಯಾರೆ ಮಾಡಿ, ಹುಡುಗಿಗ ಇನ್ನೊಂದುಡಗನ ಜ್ವತೆ ಮದುವೆ ಮಾಡಕ್ಕೆ ವಂಟವುರೆ."

"ಹುಡುಗ, ಹುಡುಗಿ ಬ್ಯಾರೆ ಜಾತಿನೆ?"

"ಸೇಮುಕ್ಯಾಸ್ಟು."

"ಯಂತೆದ್ಲಾ?"

"ಒಂದೇ ಜಾತಿ ದ್ವಡಪ್ಪಾ, ಆದ್ರು ಹಿಂಗ ಮಾಡ್ಯವುರೆ."

"ಅದೇ ಕಣೊ ವಾಟಿಸ್ಸೆ ನಾನೇಳತಾಯಿದ್ದಿದ್ದು ಒಂದೇ ಜಾತಿ ಲವ್ ಮ್ಯಾರೇಜಾ ತಡಿತಯಿರುವಾಗ ಅವ್ವ ಸಿನುಮದಲ್ಲಿ ಹೆತ್ತವ್ವ ಬ್ಯಾಡ್ರುಡಗನ ಜ್ವತೆ ಮಗಳ ಕೊಟ್ಟು ಮದುವೆ ಮಾಡ್ತಳೆ."

ಬಜಾರು, ಇದು ಮಾಯಾ ಬಜಾರು

ಅಣಕ

ಎಚ್.ಎಲ್. ಕೇಶವಮೂರ್ತಿ

'ಬಿಜಾರೆಷ್ಟದೆ ಸಾ'

-ಮಾತಿನ ನಡುವೆ ಕೇಳಿದ ಕ್ಯಾತ.

'ಯಾವ ಬಜಾರೋ' ಕೇಳಿದೆ.


'ನಿಮ್ಮ ಬಜಾರು ಸಾ' ಅಂದ.

ತಲೆಬುಡ ಅರ್ಥ ಆಗಲಿಲ್ಲ.

ನನಗೆ ಗೊತ್ತಿರುವುದು ಕೆಲವೇ ಕೆಲವು ಬಜಾರುಗಳು.

'ನಿನಗೆ ಯಾವ ಬಜಾರು ಬೇಕು' ಅಂದೆ.

'ನಿಮ್ಮ ಬಜಾರು ಸಾ'



'ಜೈ ಕರ್ನಾಟಕ'

ಮತ್ತೆ ಅದೇ ವರಸೆ. ನನಗೂ ರೇಗಿತು.

'ಸರಿಯಾಗಿ ಬೊಗಳೋ ಬಡ್ಡೆತ್ತುದೆ'

'ಅದ್ಯಾಕಿಂಗೆ ನೆಗ್ಯಾಡ್ತೀರಿ ಸಾ, ನಿಮ್ಮ ರೇಟು ಎಷ್ಟಿದೆ ಹೇಳಿ'

ಏನಿದರ ಅರ್ಥ? ನಾನೇನು ಮಾರಾಟಕ್ಕಿರುವ ವಸ್ತುವೆ? ಏನೋ ಹದಿಹರೆಯದಲ್ಲಿ ಕೆಲಸ ಅಂತ ಒಂದು ಇತ್ತಲ್ಲ, ಅದೂ ಸರ್ಕಾರಿ ಕೆಲಸ ಆ ಅಹಂನಲ್ಲಿ ಹೆಣ್ಣು ಕೊಡ್ತೀವಿ ಅಂತ ಹಲ್ಲು ಗಿಂಜಿದವರ ಎದುರು ಅಷ್ಟು ಕೊಡಬೇಕು, ಇಷ್ಟು ನೀಡಲೇಬೇಕು ಅಂತ ಮುಚ್ಚುಮರೆಲಿ ಹೇಳಿಕೊಂಡಿರಬಹುದು. ದುಡೀತಿದ್ದಾಗ ಇಂತಹ ಕೆಲಸಕ್ಕೆ ಇಂತಿಷ್ಟು ರೇಟು ಅಂತ ಮೇಜಿನ ಕೆಳಗೆ ವ್ಯವಹಾರ ಕುದುರಿಸಿರಬಹುದು. ರಿಟೈರ್ ಆಗಿ ಮೂಲೆ ಹಿಡಿದಿರುವಾಗ, ಕ್ಯಾರೇ ಅನ್ನೋರೇ ಗತಿ ಇಲ್ಲದಿರುವಾಗ ಈ ಪ್ರಶ್ನೆ ಕೇಳಿದರೆ...

ಹೌದು ಈಗ ನನ್ನ ರೇಟು ಎಷ್ಟಿರಬಹುದು?

ಮನೆಯವರಿಗೆ ದಂಡಪಿಂಡ!

ಸತ್ತರೆ.. ಒಪ್ಪ ಮಾಡಲು ಮಕ್ಕಳಿಗೆ ಸುತರಾಂ ಇಷ್ಟವಿಲ್ಲ! ಪಾಪ, ಅದೂ ಖರ್ಚಿನ ಬಾಬ್ತು!

ಅನಾಥ ಹೆಣ?

ಅದಕ್ಕೇನೋ ಅವರು ಸಿದ್ಧ, ಆದರೆ ಹಾಳಾದ ಜನಾಪವಾದ!

ಬದುಕಿದ್ದಾಗ ಕಾಲ ಕಸವಾಗಿ ಕಂಡಿರಲಿ. ಜನ ನಿಶ್ಚಿಂತೆ. ಆದರೆ ಸತ್ತ ಮೇಲೆ ಮರಣೋತ್ತರ ಕಾರ್ಯಗಳು ತೃಪ್ತಿಕರವಾಗಿ ನಡೆಯಲೇಬೇಕು. ಹೋಗಬೇಕಲ್ಲ ಆತ್ಮ ನೇರವಾಗಿ ಸ್ವರ್ಗಕ್ಕೆ!

ಹೆಣ ಸುಟ್ಟರೆ ಸಿಗುವುದೇನು?

ಬೂದಿ! ಯಾರಿಗೂ ಸುಖವಿಲ್ಲ.

ವೈದ್ಯಕೀಯ ಕಾಲೇಜಿಗೆ ನೀಡಿದರೆ?

ವ್ಯಾಸಂಗಕ್ಕೆ ಪೂರಕ! ಯಾರಿಗೆ ಗೊತ್ತು, ಹೆಣ ಡಿಸೆಕ್ಟ್ ಮಾಡಿ ವೈದ್ಯರಾದೋರು ಮುಂದೆ ಅದ್ಭುತ ಸಂಶೋಧನೆಗಳನ್ನ ಮಾಡಿ, ಹಲವಾರು ಮಾರಕ ರೋಗಗಳ ನಿವಾರಣೋಪಾಯಗಳನ್ನು ಕಂಡುಹಿಡಿಯಬಹುದು! ಸತ್ತ ಶರೀರದಿಂದಲೂ ಪರೋಪಕಾರ!

ಮಕ್ಕಳು ಈ ಯೋಜನೆ ಮುಂದಿಟ್ಟರು. 'ಅಪ್ಪಾ' ಅಂತ ಮುಂದುವರಿಸಿದರು 'ಮೆಡಿಕಲ್ ಕಾಲೇಜಿಗೆ ನಿನ್ನ ಹೆಣ ಕೊಟ್ಟರೆ ವೃಥಾ ಜನಾಪವಾದ'

'ಅದಕ್ಕೇನು ಮಾಡಲಿ?'

'ನೀನೇ ಹಿಂಗಿಂಗೆ ಅಂತ ವಿಲ್ ಬರೆದಿಟ್ಟುಡು!'

ಮಕ್ಕಳ ಮುಂದಾಲೋಚನೆಗೆ ತಲೆದೂಗಿದೆ!

ಅದೂ ಆಯಿತು.

ಇಂತಹ ಪರಿಸ್ಥಿತಿಯಲ್ಲಿರುವ ನನ್ನ ರೇಟು?

ಮುಖ ಸಣ್ಣದಾಗಿರಬೇಕು.

'ನಿಮ್ದಲ್ಲಿ ಸಾ, ಅನಂತಮೂರ್ತಿ ರೇಟೆಷ್ಟು ಸಾ' ಕೇಳಿದ ಕ್ಯಾತ.

'ಯಾವ ಅನಂತಮೂರ್ತಿ?'

'ಏನ್ಸಾ ಹಿಂಗ್ ಕೇಳ್ತೀರಿ? ಯು.ಆರ್. ಅನಂತಮೂರ್ತಿೀದು ಸಾ'

ಸಾಹಿತಿ, ಚಿಂತಕ, ಜ್ಞಾನಪೀಠ ಪ್ರಶಸ್ತಿ ವಿಜೇತರ ಬೆಲೆ ಇಷ್ಟು ಅಂತ ನಿರ್ಧರಿಸಲು ಸಾಧ್ಯನಾ. 'ಗೊತ್ತಿಲ್ಲ ಕಣೊ' ಅಂದೆ.

'ಒಂದು ಹುಚ್ಚುನಾಯಿ ಬೆಲೆ ಎಷ್ಟು ಸಾ?'

ಪೆಚಪೆ ಅಂದೆ.

'ಅನಂತಮೂರ್ತೀದೂ ಅಷ್ಟೇಯ ಸಾ' ಅಂದ!

ಸತ್ಯದ ಸಾಕ್ಷಾತ್ಕಾರ ಆಯಿತು.

ಅನಂತಮೂರ್ತಿ ಹೇಳಿದ್ದರು: 'ಭಾರತೀಯ ಜನತಾಪಕ್ಷ ರೇಬಿಸ್ ಇದ್ದಂತೆ'

ಉರಿದೆದ್ದಿತು ಭಾಜಪ ಚಿಂತಕ ಬಣ.

ರೇಬಿಸ್ ರೋಗ ಬರುವುದು ಯಾವುದರಿಂದ?

ಹುಚ್ಚುನಾಯಿ ಕಡಿತದಿಂದ!

ಸಾರಿತು ಭಾಜಪ ಬಣ: 'ಅನಂತಮೂರ್ತಿ ಹುಚ್ಚು ನಾಯಿ!'

ಇಂತಹ ಹುಚ್ಚುನಾಯಿಗಳ ಸಂಖ್ಯೆ ಹೆಚ್ಚಲಿ!

ಕ್ಯಾತನ ಬಜಾರಿನಲ್ಲಿ ಇಂತಹವಕ್ಕೆ ಬೆಲೆ ಇಲ್ಲ!

'ಅನಂತಮೂರ್ತಿ ಅಂಥೋರ್ನ ಕಟ್ಕೊಂಡ ಬದುಕಕ್ಕಾಯ್ತದ ಸಾ'

ಇನ್ನೆಂತಹವರನ್ನು ಕಟ್ಟಿಕೊಳ್ಳಬೇಕು?

'ಹಲ್ಲುಖಿ' ಗೌಡರಂತಹವರನ್ನ!

ಏನಿದೆ ಅವರ ಹತ್ತಿರ? ಜ್ಞಾನವೆ? ಸಹಬಾಳ್ವೆಯೆ? ಸೌಹಾರ್ದತೆಯೆ? ಪರೋಪಕಾರತೆಯೆ?

ಇದಾವುದೂ ಬೇಕಿಲ್ಲ, ಅವರ ಬಳಿ ಹಣ ಇದೆ.

'ದೋನಿ ರೇಟು ಎಷ್ಟು ಗೊತ್ತ ಸಾ?' ಕ್ಯಾತ ಕೇಳಿದ.

'ಯಾವ ದೋನಿ' ಎಂದೆ ಪೆದ್ದುಪೆದ್ದಾಗಿ.

'ಏನು ಮಪ್ಪು ಸಾ ನೀವು. ಕ್ರಿಕೆಟ್ ದೋನಿ ಸಾ. ಅವನ ರೇಟು ಎಷ್ಟು ಗೊತ್ತದ ಸಾ, ಆರು ಕೋಟಿ. ಆರು ಕೋಟಿ ಸಾ. ಕೋಟಿ ಅನಂತಮೂರ್ತಿ ಹಾಕಿದರೂ ಒಬ್ಬ ದೋನಿ ಆದಾನ ಸಾ'

ಗುಲಾಮರನ್ನ ಹರಾಜು ಹಾಕುತ್ತಿದ್ದರು ಅಂತ ಓದಿದ್ದೆ. ಪ್ರಾಣಿಗಳ ಹರಾಜನ್ನು ನೋಡಿದ್ದೆ. ಇಲ್ಲಿ ನೋಡಿದರೆ ಆಟಗಾರರ ಹರಾಜು ನಡೀತಾ ಇದೆ!

'ಅವರಂಗೆ ಇವರು ಆಗುವುದು ಬ್ಯಾಡ ಕಣೊ ಕ್ಯಾತ' ಅಂದೆ.

'ಅದ್ಕೆ ಮಪ್ಪು ಅನ್ನೋದು ನಿಮ್ಮ' ಅಂತ ನಿರ್ಧಾರದ ದನಿಯಲ್ಲಿ ಹೇಳಿದ!

* * * * *

ರಾಜಕೀಯಕ್ಕೆ ಬರಲು ಏನು ಮಾಡಬೇಕು?

ಸಿನಿಮಾ ನಟನಾಗಬೇಕು!

ಅಲ್ಲಿಯ ನಟನೆಯನ್ನೇ ನಿಜಜೀವನ ಶೈಲಿ ಅಂತ ನಂಬುವ ಅಮಾಯಕರಿರುವವರೆವಿಗೂ ಗೆಲುವು ಖಾತರಿ!

ಅಂಬರೀಸಣ್ಣಾರ ನೋಡಿ. ಸಂಸದ ಸ್ಥಾನಕ್ಕೆ

ಮು ಫಿಲಿ ಕಣೊ ಉಗ್ರಿ. ರಿಯಲ್ ಲೈಪೇ
ಅಮ್ಮ ನಮ್ಮ ಗುರು ಲಂಕೇಶ್‌ಗೆ ಈ ಜಾತಿ
ಅನಿಷ್ಟದ ಬಗ್ಗೆ ಅದೇನು ಸಿಟ್ಟಿತ್ತೊ ಏನೊ.
ಈ ಕಾಮಟಬರಿಲೆಲ್ಲಾ ಬ್ಯಾರೆಬ್ಯಾರೆ ಜಾತಿ ಜನವೇ
ಯ್ತಾರೆ. ಅವರಲ್ಲೂ ಹುಡುಗಿರ್‍ಲಿ ಮೇಲುಜಾತಿ.
ಗರ್‍ಲ್ಲಿ ಕೈಳಜಾತಿ."

ಐವೇನ್ನ?"

ಣ ಕಣಕ್ಕ. ಪರೆಗ್‌ಚಾಂಪಲ್ ಸಂಕ್ರಾಂತಿ ಹುಡುಗಿ
ಹುಡುಗ ಬಿ.ಎಸ್.ಪಿ. ಕ್ಯಾಂಡೇಟು."

ಈಗ ಮಾಯಾವತಿ ಮಾಡಕ್ಕೆ, ವಂಟರೊ
ರಣ ಅವೇ ಅಲವೇನೊ. ವ್ಯತ್ಯಾಸ ಏನಪ್ಪ
ಮಾಯಾವತಿ ಕೈ ಹಿಡಿಯಕ್ಕೆ ವಂಟರದೂ
ವಿ ಕೈಯ್ಯ."

ಬಿಲಿ ಬುಡೊ ಉಗ್ರಿ. ಈಗ ಮೊಟ್ಟಮೊದ್ಲು
ಕಾಗಿರದೇನು ಅಂದ್ರೆ ನಮ್ಮ ದೇಶದ ಬ್ಲಡ್ಡು
ಬೇಕಾಗ್ಯದೆ. ಅದು ಹನ್ನೆರಡನೇ ಶತಮಾನದ
ಣ್ಣನಿಗೆ ಗೊತ್ತಿದ್ದರಿಂದ ಬ್ರಾಂಬ್ರುನ್ನ, ಹರಿಜನ್ರುನ್ನ
ಕ್ಯಾಸ್ಟು ಮ್ಯಾರೇಜು ಮಾಡಿಸ್ತ. ಅಲ್ಲಿಂದ
ನವರಿಗೂ ಇಂಟರ್‌ಕ್ಯಾಸ್ಟು ಮ್ಯಾರೇಜು ನ್ಯಡಿತನೇ
. ಅದ್ಯಾರು ತಡಿಯಕ್ಯಾಗದಿಲ್ಲ. ಅಂತದ್ರಲ್ಲಿ ಈ
ಬನಳ್ಳಿ ತರ್‍ಲೆ ಪೊಲಿಟೀಷಿಯನ್‌ಗಳು ಸ್ವಜಾತಿ
ವೆನೆ ತಡದವುರಲ್ಲ, ಇವುರಿಗ್ಯಾತ್ರಲ್ಲಿ ವಡಿ
ು?"

ರಡಿಯದು ಬ್ಯಾಡ, ಹ್ಯಂಗಾರ ಮಾಡಿ ಆ
ಗಿ ಮದ್ದು ಮದಿವಾದೋನ ಜ್ವತೆ ಹೋಗಂಗೆ
."

ಮಾಡಬವುದು. ಅವುಳ ಮದಿವಾಗಕ್ಕೆ ಇನ್ನಬ್ಬ
ಾಗಿ ಕುಂತವುನಲ್ಲ, ಹೇಳು?"

ಅದಿನ್ಯಾಂತ ಗತಿಗ್ಯಟ್ಟುದ್ದ?"

ಅದ್ಕೆ ಲವ್ವುಗಿವ್ವು ಅಂತ ಏನೂ ಗೊತ್ತಿಲ್ಲ ಕಣಕ್ಕ.
ಷ್‌ಫೆಲೊ. ರಾಜಕಾರಣಿಗಳ ಕೈಗೆ ಸಿಕ್ಕಂಡು
ತ್ತ ಅದೆ."

ಮೂ, ಅದರ ಸೊಲ್ಲಡಗ."

■

ಾಮೆ ಬಸಾಕಿದೆ ಅನ್ನುತ್ತಲೇ ಇದ್ದಾರೆ. ಕೃಷ್ಣರಾಜ
ಪಟ್ಟಣ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷರ
ವಣೆಯಲ್ಲಿ ಮತ ಚಲಾಯಿಸುತ್ತಾರೆ! ಅರೆ ಯಾಕೆ
ಟೀಸಣ್ಣಾರೆ ಹಿಂಗೆ ಮಾಡಿದಿರಿ ಅಂದರೆ 'ನನ್ನ
ಾಮೆಯನ್ನ ಲೋಕಸಭೆಯ ಅಧ್ಯಕ್ಷರು ಇನ್ನೂ
ಕಾರ ಮಾಡಿಲ್ಲ, ಕರ್ತವ್ಯಲೋಪವೆಸಗಬಾರದು
ಬಂದು ಮತ ಚಲಾಯಿಸಿದೆ' ಅಂತಾರೆ! ಜನ
ರೀಸಣ್ಣಾ ಕೀ ಜೈ' ಅಂತ ಜಯಕಾರ ಹಾಕ್ತಾರೆ!
ಬೆಲೆ ಕುರಿತು ತಲೇನೆ ಕೆಡಿಸಿಕೊಂಡಿಲ್ಲ ನೀವು'
ಜನ ಕಿರಲಿ ಕೇಳಿದರೆ ಅವರ ಅಭಿಮಾನಿಗಳು
ಬೆಲೆ ನಿಗದಿ'ಗಾಗಿ ರಸ್ತೆತಡೆ ಮಾಡಿ ತಮ್ಮ
ಗಳ ಋಣ ತೀರುಸ್ತಾರೆ. ಜನ ಅದಕ್ಕೂ
ರೀಸಣ್ಣಾ ಜೈ' ಅಂತಾರೆ!

ದು ಒಂದು ರೀತಿ ಆಯಿತು.

ೀವನಪರ್ಯಂತ ಜನಪರವಾದ ಹೋರಾಟಗಳಲ್ಲಿ
ಹಿಸಿ ಮೆಚ್ಚುಗೆ ಗಳಿಸುವುದು ಕಷ್ಟ ಸಾಧ್ಯ.
ದ ಮಾರ್ಗ ಅಂದರೆ ಪ್ರಜಾಪೀಡಕನಾಗಿಯೋ,
ತಲೋಕದ ಪಾತಕಿಯಾಗಿಯೇ ಇದ್ದು ಹಣ
ವುದು. ಇದ್ದಕ್ಕಿದ್ದಂತೆ ಜ್ಞಾನೋದಯವಾಗಿ ತನ್ನ
ವೃತ್ತಾಂತದ ಬಗ್ಗೆ ಅಸಹ್ಯಪಡುವುದು; ತಾನು
ಬದಲಾದ ವ್ಯಕ್ತಿ ಎಂದು ಸಾರುವುದು. ಇಂತಹ
ಪರಿವರ್ತನೆ ಕುರಿತು ಪುಟಗಟ್ಟಲೆ ಬರೆಯುವ
ಗಳಿಗೆ, ಪತ್ರಿಕಾಕರ್ತರಿಗೆ ಕೊರತೆ ಏನೂ ಇಲ್ಲ!

ಮುತ್ತಪ್ಪರೈಗೆ ಇದರಲ್ಲಿ ನಂಬಿಕೆ. 'ಜೈ ಕರ್ನಾಟಕ'
ದ ಸ್ಥಾಪಕ ಅವರು. ಇದು ಸದ್ಯಕ್ಕೆ ಸಾಮಾಜಿಕ
ಯುಳ್ಳ ಸಂಸ್ಥೆ ಎಂದು ಅವರೇ ತಿಳಿಸಿದ್ದಾರೆ!

ದೆಲ್ಲ ಹಾಗಿರಲಿ. 'ಜೈ ಕರ್ನಾಟಕ'ದ ಲೆಟರ್‌ಹೆಡ್
ದೆ?

ಮಧ್ಯದಲ್ಲಿ ಮುತ್ತಪ್ಪ ರೈ ಚಿತ್ರ.

ಡಬಲದಲ್ಲಿ?

ಗೌತಮಬುದ್ಧ, ಬಸವಣ್ಣ, ಕುವೆಂಪು, ಡಾ.
ಕುಮಾರ್ ಚಿತ್ರಗಳು!

ಅವರಿಗೂ ಇವರಿಗೂ ಏನು ಸಂಬಂಧ?

ಾಜಕಾರಣರು ಬುದ್ಧ, ಬಸವಣ್ಣ, ಅಂಬೇಡ್ಕರ್,
ಪು ಮುಂತಾದವರನ್ನ ಯಾವ ಎಗ್ಗೂ ಇಲ್ಲದೆ
ಕೊಳ್ಳುತ್ತಿರುವಂತೆ ಇವರೂ ಬಳಸಿಕೊಂಡಿರ
ದು!

ದಕ್ಕೆ, ಅವರಾರೂ ಬದುಕಿಲ್ಲ, ಅದೇ ಪುಣ್ಯ!

ಮರೆಯುವ ಮುನ್ನ



ಪಿ. ಲಂಕೇಶ್

8, 1990

ಸಹವಾಸ ದೋಷ

ಸುತ್ತಣ ವಿಷಯಗಳು ನಮಗೆ ಹೇಗೆ ಅಂಟಿಕೊಳ್ಳುತ್ತವೆ? ನೀವು ಸೋಮಾರಿಗಳ ಜೊತೆಗೆ ಓಡಾಡುತ್ತಿದ್ದರೆ ನೀವು ಸೋಮಾರಿಯಾಗುವುದು ಖಂಡಿತ; ಜಾಗ, ವೇಳೆಯ ಪರಿವೆಯೇ ಇಲ್ಲದವರೊಂದಿಗಿದ್ದರೆ ಅವರಂತೆಯೇ ಆಗುತ್ತೀರಿ. ಇದೆಲ್ಲ ಇನ್ನೂ ಆಳಕ್ಕೆ ಹೋಗುವುದು ಸಾಧ್ಯವಿದೆ. ನನ್ನ ಗೆಳೆಯರೊಬ್ಬರು ಬ್ರಿಟಿಷ್ ಕೌನ್ಸಿಲ್ ಮತ್ತು ಸ್ವಪ್ರಯತ್ನದಿಂದ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿತರು; ಎಷ್ಟು ಚೆನ್ನಾಗಿ ಎಂದರೆ, ಇಂಗ್ಲಿಷ್‌ಮನ್ ರೀತಿಯಲ್ಲಿ ಮಾತಾಡುತ್ತಿದ್ದರು. ಅವರು ಇಂಗ್ಲಿಷ್ ಅಧ್ಯಾಪಕರಾಗಿ ಮಾತಾಡುತ್ತಿದ್ದರೆ ವಿದ್ಯಾರ್ಥಿಗಳಿಗೆ ಅವರ ಒಂದು ಮಾತೂ ಅರ್ಥವಾಗುತ್ತಿರಲಿಲ್ಲ. ಇದನ್ನರಿತ ಅವರ ಸ್ನೇಹಿತರು ಅವರ ಇಂಗ್ಲಿಷ್ ಮಾತಿನ ರೀತಿಯನ್ನು ಭಾರತೀಯರ ಇಂಗ್ಲಿಷ್‌ನ ಹತ್ತಿರಕ್ಕೆ ತರಲೆತ್ನಿಸಿದರು. ಆಗ ಅವರು ಹೇಳಿದ್ದು ವಿದ್ಯಾರ್ಥಿಗಳಿಗೆ ತಿಳಿಯತೊಡಗಿತು. ಹಾಗೆಯೇ ಅವರ ಇಂಗ್ಲಿಷ್ ಮುರಿದುಬೀಳತೊಡಗಿತು .... ಇದೆಲ್ಲ ಎಷ್ಟು ತಮಾಷೆ ನೋಡಿ. ಮೊನ್ನೆ ನನಗೊಂದು ಶುಭಾಶಯದ ಕಾರ್ಡ್ ಬಂತು. ಅದನ್ನು ಕಳಿಸಿದ್ದವರು 'ಯುವರ್ಸ್ ಸಿನ್ಸಿಯರ್‌ಲಿ' ಎಂದು ಬರೆಯಲೆತ್ನಿಸುತ್ತ sinciyerly ಎಂದು ಬರೆದಿದ್ದರು. ಅದನ್ನು ನೋಡಿ ನಗೆ ಬಂತು. ಹಾಗೆಯೇ ನನಗೆ ಹಠಾತ್ತನೆ ಸಿನ್ಸಿಯರ್‌ಲಿ ಪದದ ಕಾಗುಣಿತ ಮರೆತುಹೋಯಿತು! ನಾಲ್ಕಾರು ಸಲ ಕಾಗದದ ಮೇಲೆ ಬರೆದು ಸರಿಪಡಿಸಿದೆ: **sincerely.**



ಬಯಲು ಮತ್ತು ಸಂತ

ಈ ಬಗ್ಗೆ ಬಹಳ ದಿನ ಯೋಚಿಸಿದ್ದೆ; ಉತ್ತರ ಹೊಳೆದಿರಲಿಲ್ಲ, ಇಂಥದಕ್ಕೆ ಪೂರ್ತಿ ಸಮರ್ಪಕ ಉತ್ತರ ದೊರೆಯುವುದೂ ಸಾಧ್ಯವಿರಲಿಲ್ಲ. ಪ್ರಶ್ನೆ ಏನೆಂದರೆ, ಅದೇಕೆ ಶ್ರೇಷ್ಠ ಧರ್ಮಗುರುಗಳು, ಸಂತರೆಲ್ಲ ಬಟ್ಟಂಬಯಲು ಪ್ರದೇಶಗಳಲ್ಲಿ, ಮರುಭೂಮಿಯಲ್ಲಿ ಹುಟ್ಟಿದರು? ಕ್ರಿಸ್ತ, ಮಹಮದ್, ಯಹೂದ್ಯರ ಗುರು, ಬಸವಣ್ಣ ಮುಂತಾದವರೆಲ್ಲ ಹುಟ್ಟಿದ್ದು ಬಯಲು ಪ್ರದೇಶಗಳಲ್ಲಿ-ಹುರಿದು ಹಾಕುವ ಮರುಭೂಮಿಯ ಬಿಸಿಲಿಗೆ ಧ್ಯಾನಕ್ಕೆ ಹಚ್ಚುವ ಗುಣವಿದೆಯೆ?

ಅರಣ್ಯಪ್ರದೇಶದ ಮನುಷ್ಯ ಹಸಿರು ಹುಲ್ಲು, ಮರ, ನೀರು, ಭೂಮಿಯನ್ನು ನೋಡುತ್ತಾನೆ; ಭೂರಮೆಯ ಸೌಭಾಗ್ಯ ಆತನ ವ್ಯಕ್ತಿತ್ವವನ್ನು ಆವರಿಸುತ್ತದೆ. ಮನಸ್ಸು ಮುದಗೊಂಡು ಹಾಡು ರೂಪುಗೊಳ್ಳುತ್ತದೆ. ಆದರೆ ಮರುಭೂಮಿಯ ಮನುಷ್ಯ ಎತ್ತ ನೋಡಿದರೂ, ಕಣ್ಣು ಓಡುವವರೆಗೆ ಏಕರೀತಿಯ ಮರಳು, ಕುರುಚಲು ಗಿಡ, ಬಿಸಿಲುಗುದುರೆ ನೋಡುತ್ತಾನೆ. ಸ್ವಾಭಾವಿಕವಾಗಿಯೇ ಅವನ ದೃಷ್ಟಿ ಆಕಾಶಕ್ಕೆ, ತನ್ನ ಅಂತರ್ಯಕ್ಕೆ ತಿರುಗುತ್ತದೆ. ಕವಿಗೆ ಬದಲು ತಪಸ್ವಿ ಹುಟ್ಟುತ್ತಾನೆ.

ಇದು ಕೂಡ ಅರ್ಧಸತ್ಯವಾಗಿರುವ ಸಾಧ್ಯತೆಗಳಿವೆ. ಭೂಮಿ ಮತ್ತು ಬದುಕಿಲ್ಲದೆ ಆಕಾಶದ ಚಿಂತೆ ಪೊಳ್ಳಾಗಬಹುದು; ಆಕಾಶದ ವ್ಯಸನವಿಲ್ಲದ ಭೂಮಿಯ ಬದುಕಂತೂ ವ್ಯರ್ಥ.

ರಷ್ಯಾ ತಮಾಷೆ

ಎಪ್ಪತ್ತು ವರ್ಷ ಕಮ್ಯುನಿಸ್ಟ್ ಆಡಳಿತ ಅನುಭವಿಸಿದ ರಷ್ಯಾ ಈಗ ಬಿಡುಗಡೆ ಪಡೆದಿದೆ. ಜನ ಮನಸ್ಸು ಬಿಚ್ಚಿ ಮಾತಾಡುವ ಅವಕಾಶ ಪಡೆದಿದ್ದಾರೆ. ರಷ್ಯಾದ ಜನ ಎಂಥವರೆಂದು ನೀವು ಬಲ್ಲಿರಿ. ಚೆನ್ನಾಗಿ ತಿನ್ನುವ, ಕುಡಿಯುವ, ಪ್ರೀತಿಸುವ, ಟಾಲ್‌ಸ್ಟಾಯ್‌ನ ಹುಮ್ಮಸ್ಸು ಮತ್ತು ದೊಸ್ತೋವಾಸ್ಕಿಯ ದುಗುಡ ಎರಡನ್ನೂ ಪಡೆದುಬಂದ ಜನ; ಯೂರೋಪಿನ ಪೂರ್ಣ ಶಿಸ್ತನ್ನು ಒಪ್ಪದೆ, ಏಷ್ಯಾದ ಜೋಭದ್ರಗೇಡಿತನಕ್ಕೆ ಬಲಿಯಾಗದೆ ಒಂದು ರೀತಿಯಲ್ಲಿ ಸಾಮಾನ್ಯ ಯಶಸ್ಸು ಪಡೆದ ಜನ. ಈಗ ಇವರಿಗೆ ತಿನ್ನಲು ಸಾಕಷ್ಟು ಆಹಾರವಿಲ್ಲ; ಆದರೆ ಸಾಕಷ್ಟು ಮಾತಾಡುವ ಸ್ವಾತಂತ್ರ್ಯವಿದೆ. ಒಮ್ಮೆ ತಮ್ಮ ನಾಯಕನ ಬಗ್ಗೆ ರೋಮಾಂಚನ ಅನುಭವಿಸಿದ ರಷ್ಯನ್ನರೀಗ ಆತನನ್ನು ದ್ವೇಷಿಸುವ ಮಟ್ಟಕ್ಕೆ ಹೋಗಿ ತಮಾಷೆ, ಗೇಲಿ ಮಾಡುತ್ತಿದ್ದಾರೆ. ಗರ್‌ಬಚೇವ್ ಭರವಸೆ ನೀಡುವುದರಲ್ಲಿ ನಿಸ್ಸೀಮ ಎಂಬುದನ್ನು ಕುರಿತು ಒಂದು ಜೋಕ್.

"ನಾವೆಲ್ಲ ಇಂದಿನಿಂದ ಪ್ರಯತ್ನಿಸಿದರೆ ಇನ್ನು ಐದು ವರ್ಷಗಳಲ್ಲಿ ರಷ್ಯಾದ ಎಲ್ಲರಿಗೂ ಒಂದೊಂದು ಮನೆ ಸಿಗುತ್ತದೆ..." ಎಂದರು ಗರ್‌ಬಚೋವ್.

ಚಪ್ಪಾಳೆ, ಹರ್ಷೋದ್ಗಾರ, ಶಿಳ್ಳೆ, ಸಂತೋಷ.

"ಹಾಗೆಯೇ ಇನ್ನು ಹತ್ತು ವರ್ಷದಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಕಾರ್ ನೀಡಬಹುದು."

ಚಪ್ಪಾಳೆ, ಹರ್ಷೋದ್ಗಾರ.

"ಅಷ್ಟೇ ಅಲ್ಲ, ಇನ್ನು ಹದಿನೈದು ವರ್ಷದಲ್ಲಿ ಒಬ್ಬೊಬ್ಬರೂ ಒಂದೊಂದು ವಿಮಾನ ಪಡೆಯುವುದೂ ಸಾಧ್ಯ."

ಪ್ರೇಕ್ಷಕರು ಸುಮ್ಮನಿದ್ದರು, ಚಪ್ಪಾಳೆ, ಸಂತೋಷವಿಲ್ಲ, ಸಭಾಂಗಣದ ಒಬ್ಬ ಮೆಲ್ಲಗೆ ಎದ್ದು ಕೇಳಿದ, "ವಿಮಾನ ಯಾಕೆ?"

ಗರ್‌ಬಚೋವ್ ಉತ್ತರ:

"ಯಾಕೆಂದರೆ? ಲೆನಿನ್‌ಗ್ರಾಡ್‌ನಲ್ಲಿ ಸಾಂಡ್‌ವಿಚ್, ರೊಟ್ಟಿ ಸಿಗುತ್ತದೆಂದರೆ ವಿಮಾನದಲ್ಲಿ ಬೇಗ ಹೋಗಿ ಕ್ಯೂನಲ್ಲಿ ನಿಲ್ಲಬಹುದು."

ಇನ್ನೊಂದು ಜೋಕ್ ಇದಕ್ಕಿಂತ ಚೆನ್ನಾಗಿದೆ. ರಷ್ಯಾದಲ್ಲಿ ಎಲ್ಲದಕ್ಕೂ ಲಂಚ. ಬಟ್ಟೆ ಕೊಳ್ಳುವುದಕ್ಕೆ, ಆಹಾರಕ್ಕೆ, ಬಾಡಿಗೆ ಮನೆಗೆ; ಹಾಗೆಯೇ ಸತ್ತಾಗ ಹೂಳುವ ಜಾಗಕ್ಕೆ ಕೂಡ. ಒಬ್ಬ ಭ್ರಷ್ಟನಿಗೆ ತನ್ನ ದೇಹ ಅತ್ಯುತ್ತಮ ಜಾಗದಲ್ಲಿ ಹೂಳಲ್ಪಡಬೇಕೆಂದು ಆಶೆಯಾಯಿತು. ಸರಿ, ಅದಕ್ಕಾಗಿ ಸಂಬಂಧಪಟ್ಟವರನ್ನು ಸಂಪರ್ಕಿಸಲು ಹೇಳಿದ. ಬಹಳ ಕಷ್ಟಪಟ್ಟು ಅವನಿಗಾಗಿ ಜಾಗ ಹಿಡಿದವನು ಹೇಳಿದ: "ಜಾಗ ಸಿಕ್ಕಿತು."

"ತುಂಬ ಸಂತೋಷ, ಎಷ್ಟು ಲಂಚವನ್ನಾದರೂ ಕೊಡಬಲ್ಲೆ, ತುಂಬ ಒಳ್ಳೆಯ ಜಾಗ ತಾನೆ?"

"ಶ್ರೇಷ್ಠ ಜಾಗ, ಆದರೆ ಒಂದೇ ತೊಂದರೆ..."

"ಏನು ತೊಂದರೆ"

"ನಾಳೆಯೇ ನೀನು ಸಾಯಬೇಕಾಗುತ್ತೆ."



ಜೇನಿನ ಪ್ರತಿಭಟನೆ

ಇಲ್ಲಿ ಒಂದು ನೋವಿನ ಸಂಗತಿ ಹೇಳಬೇಕು. ಅದು ನಮ್ಮ ಜೇನಿಗೆ ಸಂಬಂಧಿಸಿದ್ದು. ನಮ್ಮ ತೋಟದಲ್ಲಿ ದೊಡ್ಡದೊಡ್ಡ ಮಾವಿನ, ಹೊಂಗೆಯ, ಪೇರಲ, ಅಳಲೆಕಾಯಿಯ ಮರಗಳಿರುವುದರಿಂದ ಜೇನು ಸಾಕುವ ಆಶೆಯಾಗಿ ಎರಡು ಜೇನಿನ ಪೆಟ್ಟಿಗೆ ತಂದು ಒಂದಕ್ಕೆ ಬಾವಿಯೊಂದರಲ್ಲಿದ್ದ ಜೇನು ತಂದುಬಿಟ್ಟೆವು; ರಾಣಿ ಜೇನು ಸಕತ್ತಾಗಿತ್ತು. ಜೇನು ಸಾಕುವುದು ಎಷ್ಟು ಸುಲಭ ಎಂದು ಅನೇಕರಿಗೆ ಗೊತ್ತಿಲ್ಲ. ಸಣ್ಣ ಕೈಗಾರಿಕೆ ಇಲಾಖೆಯಲ್ಲಿ ಪೆಟ್ಟಿಗೆಗಳು ದೊರೆಯುತ್ತವೆ, ಜೇನು ಸಾಕಣೆಗಾರರ ಸಂಘದಲ್ಲಿ ಜೇನು ದೊರೆಯುತ್ತವೆ. ತಂದು ಇಟ್ಟರಾಯಿತು. ಮತ್ತೆ ಏನನ್ನೂ ಮಾಡಬೇಕಾದ್ದಿಲ್ಲ. ನಮ್ಮ ಜೇನು ಚೆನ್ನಾಗಿತ್ತು; ಒಂದೇ ವರ್ಷದಲ್ಲಿ ಎರಡನೇ ಪೆಟ್ಟಿಗೆಗೂ ರಾಣಿಜೇನು, ಕಾರ್ಮಿಕ ಜೇನುಗಳು ಆವರಿಸಿದವು. ತೋಟದಲ್ಲಿ ಹೂವು ಇಲ್ಲದಿದ್ದಾಗ ಸುತ್ತಣ ಹೊಲಗಳ ಹುಚ್ಚೆಳ್ಳು ಹೂಗಳಿಗೆ ಮುತ್ತುತ್ತಿದ್ದವು.



ಎರಡು ವರ್ಷ ಸರಿಯಾಗಿತ್ತು. ಈ ವರ್ಷ ಜೇನಿಟ್ಟಿದ್ದ ದೊಡ್ಡ ಮರ ಹೂ ಬಿಟ್ಟಿತ್ತು; ಅದು ರಸಪೂರಿ ಮಾವಿನಮರ. ಅದಕ್ಕೆ ಕ್ರಿಮಿನಾಶಕ ಸಿಂಪಡಿಸಬೇಕಿತ್ತು. ನಾನು ಎರಡು ವರ್ಷ 'ಏನಾದರಾಗಲಿ, ಸಿಂಪಡಿಸುವುದು ಬೇಡ, ಜೇನಿಗೆ ತೊಂದರೆಯಾಗಬಹುದು' ಅಂದಿದ್ದೆ. ಈ ವರ್ಷ ಯಾವುದೋ ದುರ್ಬಲ ಗಳಿಗೆಯಲ್ಲಿ ಸುಮ್ಮನಾದೆ. ಅಲ್ಲದೆ ಕೆಲವರು " ತಜ್ಞರು" 'ಏನೂ ಆಗುವುದಿಲ್ಲ, ಮಾವಿನಮರದ ಕ್ರಿಮಿಗಳಿಗಿಂತ ಜೇನುನೊಣ ಸ್ಟ್ರಾಂಗ್' ಅಂದರು. ಮರಕ್ಕೆ ಔಷಧಿ ಸಿಂಪಡಿಸಿದರು. ಮರುದಿನ ನೋಡಿದಾಗ ಎರಡೂ ಪೆಟ್ಟಿಯ ಜೇನುಗಳೂ ಹಾರಿಹೋಗಿದ್ದವು.

ಪೆಟ್ಟಿಗೆಯ ಜೇನುನೊಣಗಳ ಗುಂಪಿನಲ್ಲಿ ಏನಾಗಿರಬಹುದು? ಅವು ಏನು ಚರ್ಚಿಸಿರಬಹುದು? ನಮ್ಮನ್ನು ಎಷ್ಟು ಟೀಕಿಸಿರಬಹುದು? ಸಾವಿರಾರು ಜೇನುನೊಣಗಳು ಮಧುವನ್ನ ತಂದು, ರಾಣಿ ಅವುಗಳನ್ನು ಕೆಲಸಕ್ಕೆ ಹಚ್ಚಿ ಎಲ್ಲವೂ ಜೇನು ಉತ್ಪಾದಿಸಿ... ವರ್ಷದಲ್ಲಿ ಕನಿಷ್ಠ ಒಂದು ಕೆ.ಜಿ. ಜೇನು ಕೊಡುತ್ತಿದ್ದ ಈ ಮುಗ್ಧ ಆದರೆ ಸೂಕ್ಷ್ಮ ಮತ್ತು ಪ್ರತಿಭಟನೆಯ ಗುಣದ ಜೇನು.... ಇಡೀ ದಿನ ಬೇಸರದಿಂದ ಕೂತುಕೊಂಡೆ. ಮುಂದಿನ ಸಲ ನಾಟಿ ಮಾವಿನ ಮರದ ಕೆಳಗಿಟ್ಟು ಅವುಗಳ ತಂಟೆಗೇ ಹೋಗಕೂಡದೆಂದು ತೀರ್ಮಾನಿಸಿದೆ.

ಪೊಲೀಸ್ ಅಧಿಕಾರಿಯ ಕಣ್ಣಲ್ಲಿ ಕೋಮುವಾದ

ಕೆಲವು ವಾರಗಳ ಹಿಂದೆ 'ಜೀ' ಟಿವಿಯ 'ಆಖಾಡಾ' ಎಂಬ ಕಾರ್ಯಕ್ರಮವೊಂದು ಮಂಗಳೂರಿನ ಪುರಭವನದಲ್ಲಿ ನಡೆದದ್ದು ಎಲ್ಲರಿಗೂ ನೆನಪಿರಬಹುದು. ಈ ಕಾರ್ಯಕ್ರಮಕ್ಕೆ ನನಗೂ ಆಮಂತ್ರಣವಿದ್ದುದರಿಂದ ಇದನ್ನು ವೀಕ್ಷಿಸಲು ನಾನೂ ಹೋಗಿದ್ದೆ. ಕಾರ್ಯಕ್ರಮ ಪ್ರಾರಂಭವಾದೊಡನೆ ಪಟ್ಟಾಭಿರಾಮ ಸೋಮಯಾಜಿಯವರನ್ನು ಚರ್ಚೆಯನ್ನಾರಂಭಿಸಲು ಕೇಳಿಕೊಳ್ಳಲಾಯಿತು. ಸೋಮಯಾಜಿಯವರು ಕಳೆದ ವರ್ಷದ ಕೋಮು ಗಲಭೆಯ ಕುರಿತು ಮಾತು ಪ್ರಾರಂಭಿಸಿ, ಈ ಕೋಮು ಘರ್ಷಣೆಗೆ ಬಿಜೆಪಿ ಸಚಿವ ನಾಗರಾಜ ಶೆಟ್ಟಿಯವರು ಕಾರಣ ಎನ್ನುತ್ತಿದ್ದಂತೆ ಸಭೆಯಲ್ಲಿದ್ದ ಈ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು ಒಕ್ಕೊರಲಿನಿಂದ ಈ ಮಾತನ್ನು ಖಂಡಿಸುತ್ತಾ ಚರ್ಚೆಯನ್ನು ಮುಂದುವರಿಸಲು ಅವಕಾಶ ನೀಡಲಿಲ್ಲ. ತಮ್ಮ ಪಕ್ಷದ ಸಚಿವರ ವಿರುದ್ಧ ಏನನ್ನೂ ಹೇಳಬಾರದು ಎಂಬುದು ಇವರ ವಾದವಾಗಿತ್ತು. ಈ ಕಾರ್ಯಕ್ರಮ ಪ್ರಸಾರವಾದಾಗ, ಕರ್ನಾಟಕದಾದ್ಯಂತ ಕನ್ನಡಿಗರು ಇದನ್ನು ನೋಡಿ ತಮ್ಮ ಸಚಿವರ ನಿಜ ಬಣ್ಣ ಬಯಲಾಗಬಹುದೆಂಬ ಕಳಕಳಿಯನ್ನು ಇವರು ತೋರ್ಪಡಿಸಿದರು. ಬಳಿಕ ಕೋಮುಗಲಭೆಯ ವಿಷಯವನ್ನು ಬದಿಗಿಟ್ಟು ಚರ್ಚೆಯನ್ನು ಮುಂದುವರಿಸಲಾಯಿತು. ಮಾಜಿ ವಿಧಾನಸಭಾ ಸದಸ್ಯ ಯೋಗೀಶ್ ಭಟ್, ತುಂಬೆಯಲ್ಲಿ ನೇತ್ರಾವತಿ ನದಿಯ ವೆಂಟೆಡ್ ಡ್ಯಾಂಗೆ ತಮ್ಮ ಸರ್ಕಾರದಿಂದ 40 ಕೋಟಿ ರೂಪಾಯಿ ಬಂದಿದೆಯೆಂದಾಗ, ಮಂಗಳೂರಿನ ನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರೆಲ್ಲರೂ ಒಕ್ಕೊರಲಿನಿಂದ, ಈ ಹಣ ಯಾವಾಗ, ಯಾರಿಗೆ ಬಂದಿದೆಯೆಂದು ಕೇಳಿ ಅವರನ್ನು ತರಾಟೆಗೆ ತೆಗೆದುಕೊಂಡರು. ಕಳೆದ ವರ್ಷದ ಕೋಮು ಗಲಭೆಯನ್ನು ನಿಲ್ಲಿಸಿದವರು ತಮ್ಮ ಸಚಿವ ನಾಗರಾಜ ಶೆಟ್ಟಿಯವರೆಂದೂ ಇವರು ವಾದಿಸಿದರು. ಸುಳ್ಳುಗಳೇ ಈ ಜನರ ಭಂಡವಾಳವೆಂದು ಅಂದು ಎಲ್ಲರಿಗೂ ತಿಳಿದಂತಾಯಿತು. ಅಂದಿನ ಕೋಮು ಗಲಭೆಯನ್ನು ಕರ್ಫ್ಯೂ ಮೂಲಕ ತಹಬಂದಿಗೆ ತಂದವರು ಅಂದಿನ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಸತ್ಯನಾರಾಯಣ ರಾವ್ ಅವರು. ಇವರ ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಪಶ್ಚಿಮ ವಲಯ ಪೊಲೀಸ್ ವರಿಷ್ಠಾಧಿಕಾರಿ ಸತ್ಯನಾರಾಯಣ ರಾವ್ ಅವರಿಗೆ ಕಳೆದ ವರ್ಷ ಯಾವುದೇ ಮುನ್ಸೂಚನೆ ಇಲ್ಲದೆ ದಾವಣಗೆರೆಗೆ ವರ್ಗಾವಣೆಯಾಯಿತು. ಇವರು ಓರ್ವ ಪೊಲೀಸ್ ಅಧಿಕಾರಿಯಾಗಿ ಜನಮೆಚ್ಚುಗೆ ಪಡೆದವರಾಗಿದ್ದರು. ಮಂಗಳೂರಿನ ಕೋಮು ಗಲಭೆಯನ್ನು ನಾಲ್ಕೇ ದಿನಗಳಲ್ಲಿ ನಿಲ್ಲಿಸಿದ್ದರು. ಅದಕ್ಕೂ ಹಿಂದೆ ಸುರತ್ಕಲ್ಲಿನಲ್ಲಿ ಪ್ರಾರಂಭವಾದ ಗಲಭೆ ಹತ್ತು ದಿನಗಳಿಗಿಂತ ಹೆಚ್ಚು ದಿನ ನಡೆದಿತ್ತು; ಸಾವು ನೋವುಗಳೂ ಹೆಚ್ಚಾಗಿದ್ದವು. ಅವರ ಈ ವರ್ಗಾವಣೆಯ ಸಂದರ್ಭದಲ್ಲಿ ನನ್ನ ಮನೆಗೆ ಒಂದು ಸೌಹಾರ್ದ ಭೇಟಿ ನೀಡಿದ ಇವರೊಡನೆ ನಾನು ಕೆಲವು ವಿಷಯಗಳನ್ನು ಕೇಳಿದಾಗ ಅವರು ತಮ್ಮ ಕೆಲವು ಅಭಿಪ್ರಾಯಗಳನ್ನು ನನ್ನೊಡನೆ ಹಂಚಿಕೊಂಡರು.

ಎಂಭತ್ತರ ದಶಕದ ಆರಂಭದಲ್ಲಿ ಇವರು ಮಂಗಳೂರಿನ ಮೀನುಗಾರಿಕಾ ಕಾಲೇಜಿನಲ್ಲಿ ನನ್ನ ಮಗನ ಸಹಪಾಠಿಯಾಗಿದ್ದರು. ಈಗ ಎರಡು ವರ್ಷಗಳ ಹಿಂದೆ ಡಿಐಜಿಯಾಗಿ ಮಂಗಳೂರಿಗೆ ಬಂದರು. ಈಗ ಈ ವರ್ಗಾವಣೆ ಸಂದರ್ಭದಲ್ಲಿ ಅವರು ತಮ್ಮ ನೆನಪುಗಳನ್ನು ಬಿಚ್ಚಿಟ್ಟರು.

"25 ವರ್ಷಗಳ ಹಿಂದೆ ನಾನು ಇಲ್ಲಿ ವಿದ್ಯಾರ್ಥಿಯಾಗಿದ್ದ ನೆನಪು ನನ್ನ ಮನದಲ್ಲಿ ಇನ್ನೂ ಹಸಿರಾಗಿದೆ. ಆಗ ಈ ಊರು ಬಹಳ ಶಾಂತವಾಗಿತ್ತು. ಯಾವುದೇ ಗಲಭೆಗಳು ಇಲ್ಲಿ ನಡೆಯುತ್ತಿರಲಿಲ್ಲ. ಹಿಂದೂ ಮುಸ್ಲಿಮರು ಸಹೋದರರಂತೆ ಬದುಕುತ್ತಿದ್ದರು. ಕನ್ನಡ, ತುಳು, ಕೊಂಕಣಿ, ಬ್ಯಾರಿ ಎಂದು ಹಲವು ಭಾಷೆಗಳನ್ನಾಡುವವರು ಇಲ್ಲಿದ್ದರೂ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲದೆ ಎಲ್ಲರೂ ಪರಸ್ಪರ ಸಹಕರಿಸುತ್ತಾ ಬದುಕುತ್ತಿದ್ದರು. ಈಗ ಇಪ್ಪತ್ತು ವರ್ಷಗಳ ಬಳಿಕ ನಾನು ಈ ಊರಿಗೆ ಬಂದಾಗ ಆ ವಾತಾವರಣ ಸಂಪೂರ್ಣ ಬದಲಾಗಿದೆ. ಹಿಂದೂ ಮುಸ್ಲಿಮರು ಪರಸ್ಪರ ವಿಶ್ವಾಸ ಕಳೆದುಕೊಂಡು ಒಬ್ಬರನ್ನೊಬ್ಬರು ಸಂದೇಹದಿಂದ ನೋಡುತ್ತಿದ್ದಾರೆ. ಅಲ್ಪಸಂಖ್ಯಾತರು ಬಹುಸಂಖ್ಯಾತರಿಂದ ದೂರ ಸರಿದು ಮತ್ತಷ್ಟು ದ್ವೀಪವಾಗುತ್ತಿದ್ದಾರೆ. ಈ ಊರು ದಿನದಿಂದ ದಿನಕ್ಕೆ ಹದಗೆಡುತ್ತಾ ಇದೆ."

"ಇದಕ್ಕೆ ವಿಶೇಷವಾದ ಕಾರಣವೇನಾದರೂ ಇದೆಯೇ?" ನಾನು ಕೇಳಿದೆ.

"ರಾಜಕಾರಣಿಗಳ ಅಧಿಕಾರ ದಾಹವೆಂದಷ್ಟೇ ಹೇಳಬೇಕಾಗಿದೆ."

"ಮಂಗಳೂರಿನ ಗಲಭೆಯನ್ನು ಎರಡೇ ದಿನಗಳಲ್ಲಿ ನಿಯಂತ್ರಿಸಿದಿರಿ?" ನಾನಂದೆ.

"ಹೌದು. ನಾನು ಮತ್ತು ಜಿಲ್ಲಾಧಿಕಾರಿಗಳು ಕೋಣಾಜೆ ಸಮೀಪ ಇದ್ದೆವು. ಇಲ್ಲಿಂದ ವರದಿ ಬರುತ್ತಲೇ ಇತ್ತು. ನಾನು ಕೂಡಲೇ ಜಿಲ್ಲಾಧಿಕಾರಿಗೆ, ಕರ್ಫ್ಯೂ ಹಾಕಲು ಆಜ್ಞೆ ನೀಡಲು ಹೇಳಿದೆ. ಇಲ್ಲವಾದರೆ ನಮ್ಮಿಂದ ಇದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಕರ್ಫ್ಯೂ ವಿಧಿಸಿದ ಎರಡೇ ದಿನಗಳಲ್ಲಿ ಗಲಭೆ ನಿಯಂತ್ರಣಕ್ಕೆ ಬಂತು. ಜನರಿಗೆ ತೊಂದರೆಯಾಯಿತು. ಆದರೆ ನಮಗೆ ಬೇರೆ ದಾರಿ ಇರಲಿಲ್ಲ."

"ಹೌದು. ಕರ್ಫ್ಯೂ ಕೊಂಚ ಸಡಿಲಿಸಿದಾಗ ಎಲ್ಲರೂ ಒಟ್ಟಾಗಿ ಅಂಗಡಿಗಳಿಗೆ ನುಗ್ಗತೊಡಗಿದರು. ಕೋಮು ಭಾವನೆ ಮಾಯವಾಗಿ ಕೋಮು ಸೌಹಾರ್ದ ಮೂಡಿತು. ಹೊಟ್ಟೆಯ ಪ್ರಶ್ನೆ ಎದುರಾದಾಗ ಜಾತಿ, ಧರ್ಮದ ಪ್ರಶ್ನೆ ತಾತ್ಕಾಲಿಕವಾಗಿ ಮೂಲೆ ಸೇರಿತು" ನಾನಂದೆ. "ಉಳ್ಳಾಲದಲ್ಲಿ ಪೊಲೀಸ್ ದೌರ್ಜನ್ಯ ಮೇರೆ ಮೀರಿತು."



"ನಮ್ಮಲ್ಲಿ ಸಾಕಷ್ಟು ಪೊಲೀಸ್ ಫೋರ್ಸ್ ಇರಲಿಲ್ಲ. ನಾವು ಗುಲ್ಬರ್ಗಾ ಕಡೆಯಿಂದಲೂ ಪೊಲೀಸರನ್ನು ಕರೆಸಬೇಕಾಯಿತು. ಅಲ್ಲಿಂದ ಬಂದವರು ಅಂತಹ ಕೆಲಸ ಮಾಡಿದ್ದಾರೆ ಮತ್ತು ಅದು ಎಲ್ಲವೂ ಸತ್ಯವಲ್ಲ, ಕೆಲವೆಡೆಗಳಲ್ಲಿ ಜನರು ತಾವೇ ಆ ರೀತಿ ಮಾಡಿರುವ ಸಾಧ್ಯತೆಯೂ ಇದೆ."

"ಇಂತಹ ಕಲುಷಿತ ವಾತಾವರಣವನ್ನು ತಿಳಿಗೊಳಿಸುವ ಹಾದಿಯೇನಾದರೂ ಇದೆಯೇ?"

"ಇಂದು ಮೂರು ಮತ್ತು ನಾಲ್ಕನೇ ದರ್ಜೆಯ ಪೊಲೀಸರಲ್ಲಿ ಕೆಲವರು ಕೋಮುವಾದಿಗಳು ಹಾಗೂ ಅವರ ಬೆಂಬಲಿಗರಿದ್ದಾರೆ. ಇಂತಹ ಸಂದರ್ಭ ದೊರೆತರೆ ಅವರು ಅದನ್ನು ಚೆನ್ನಾಗಿಯೇ ಉಪಯೋಗಿಸಿಕೊಳ್ಳುತ್ತಾರೆ. ಇಲ್ಲಿ ಒಂದು ಬಹಳ ಮುಖ್ಯವಾದ ವಿಷಯವಿದೆ. ಪೊಲೀಸ್ ಇಲಾಖೆಯಲ್ಲಿ ಮುಸ್ಲಿಮರು ಬಹಳ ಕಮ್ಮಿ ಸಂಖ್ಯೆಯಲ್ಲಿದ್ದಾರೆ. ಎಸ್.ಐ. ಹುದ್ದೆಗೆ ಅರ್ಜಿ ಕರೆದರೆ ಬರುವ ಅರ್ಜಿಗಳು ಬಹಳ ಕಮ್ಮಿ. ಬಂದವರೂ ಕೂಡಾ ಪರೀಕ್ಷೆಗೆ ಸಮನಾಗಿ ಸಿದ್ಧತೆ ಮಾಡಿಕೊಂಡು ಬರುವುದಿಲ್ಲ. ಅವರ ದೃಷ್ಟಿ, ಗುರಿ ಎಲ್ಲವೂ ಕೊಲ್ಲಿ ರಾಷ್ಟ್ರವೊಂದರಲ್ಲಿ ಉದ್ಯೋಗ ಪಡೆಯುವುದೇ ಆಗಿದೆ. ಎಸ್‌ಎಸ್‌ಎಲ್‌ಸಿ ಕೂಡಾ ಮುಗಿಸದೆ ಹೇಗಾದರೂ ಮಾಡಿ ಕೊಲ್ಲಿಗೆ ಹಾರಲು ಪ್ರಯತ್ನಿಸುತ್ತಾರೆ. ಅವರ ಜನಸಂಖ್ಯೆಗೆ ಸಮನಾಗಿ ಅವರು ಪೊಲೀಸ್ ಇಲಾಖೆಯಲ್ಲಿದ್ದರೆ ಈ ಪರಿಸ್ಥಿತಿ ಕೊಂಚ ಸುಧಾರಿಸಬಹುದೇನೋ. ಮೇಲಧಿಕಾರಿಗಳಿಗೆ ಜಿಲ್ಲೆಯ ಮೂಲೆ ಮೂಲೆಗೆ ಹೋಗಿ ಗಲಭೆ ನಿಯಂತ್ರಿಸಲು ಸಾಧ್ಯವೇ? ಬಜ್ಪೆ ಮಸೀದಿಯಲ್ಲಿನ ಮೌಲವಿಗಳ ಕೊಲೆಯಾಗದಂತೆ ತಡೆಯಬಹುದಾಗಿತ್ತು. ಒಬ್ಬ ಪಿ.ಸಿ.ಯನ್ನು ಅಲ್ಲಿ ನಿಲ್ಲಿಸಿದ್ದರೂ ಆ ದುರಂತ ನಡೆಯುತ್ತಿರಲಿಲ್ಲ. ನಾನು ಸಬ್‌ಇನ್‌ಸ್ಪೆಕ್ಟರೊಡನೆ ಹಾಗೆಯೇ ಕೇಳಿದೆ. ಅವನೇನು ಹೇಳುತ್ತಾನೆ? ಯುದ್ಧ ಪ್ರಾರಂಭವಾದ ಮೇಲೆ ಯಾರೇನು ಮಾಡಲು ಸಾಧ್ಯ? ಆ ಮೂಲೆಯಲ್ಲಿ ಅಂತಹದೊಂದು ಚಿಕ್ಕ ಮಸೀದಿ ಇದೆಯೆಂದು ನನ್ನ ಗಮನಕ್ಕೆ ಬಂದಿರಲಿಲ್ಲ. ಆದರೆ ಎಸ್.ಐ.ಗಳಿಗೆ ಗೊತ್ತಿರುತ್ತದೆ."

"ಕೆಎಫ್‌ಡಿ ಎಂಬ ಸಂಘಟನೆಗೆ ಸಿಮಿ (SIMI) ಸಂಘಟನೆಯೊಡನೆ ಸಂಬಂಧವಿದೆಯೆ?" ನಾನು ಕೊನೆಯದಾಗಿ ಕೇಳಿದೆ.

"ನನಗೆ ತಿಳಿದಂತೆ ಇರಲಾರದು. ಅದು ಭಜರಂಗದ ಮತ್ತು ಅಂತಹ ಸಂಘಟನೆಗಳ ದೌರ್ಜನ್ಯ ಸಹಿಸಲಾರದೆ ಅವರ ಉಪಟಳದಿಂದ ಪಾರಾಗಲು ಪ್ರಾರಂಭವಾದ ಸಂಘಟನೆ. ಅದು ನೆಲೆಯೂರಿದ ಬಳಿಕ ಅದನ್ನು ತಮ್ಮೊಳಗೆ ಎಳೆದುಕೊಳ್ಳಲು ಮುಸ್ಲಿಂ ಕೋಮುವಾದಿ ಸಂಘಟನೆಗಳು ಪ್ರಯತ್ನಿಸುತ್ತಿವೆ."

ಸತ್ಯನಾರಾಯಣ ರಾವ್ ಕೋಮುವಾದಿಗಳೊಡನೆ ಸಂಪರ್ಕವಿಟ್ಟುಕೊಂಡಿಲ್ಲವೆನ್ನಿಸಿತು. ಕೋಮುಗಲಭೆಯ ಸಂದರ್ಭದಲ್ಲಿ ಸುರತ್ಕಲಿನ ಮೂಲೆಯಲ್ಲೊಂದೆಡೆ ಗಲಭೆ ಪ್ರಾರಂಭವಾದುದು ನನಗೆ ತಿಳಿದಾಗ ನಾನು ಇವರಿಗೆ ತಿಳಿಸಿದ್ದೆ. ಕೂಡಲೇ ಅವರು ಅಲ್ಲಿಗೆ ಪೊಲೀಸರನ್ನು ಕಳುಹಿಸಿ ಅನಾಹುತವಾಗದಂತೆ ನೋಡಿಕೊಂಡದ್ದು ನನ್ನ ನೆನಪಿನಲ್ಲಿದೆ. ಮುಸ್ಲಿಮರಿಗೆ, ರಕ್ಷಣೆ ಬೇಕೆಂದಾಗ ರಕ್ಷಣೆ ನೀಡಿದ್ದಕ್ಕಾಗಿ ಕೋಮುವಾದಿಗಳ ಕೆಂಗಣ್ಣಿಗೂ ಗುರಿಯಾಗಿದ್ದಾರೆ. 'ಅವರಿಗೆ ರಕ್ಷಣೆ ಕೊಟ್ಟಂತೆ ನಮಗೂ ರಕ್ಷಣೆ ಕೊಡಿ' ಎಂದು ಕೋಮುವಾದಿಗಳು ಇವರಿಗೆ ಕಿರುಕುಳ ಕೊಟ್ಟದ್ದೂ ಇದೆ.

ಇವರು ಮಂಗಳೂರಿನಲ್ಲಿದ್ದಾಗ ಮೀನುಗಾರಿಕಾ ಕಾಲೇಜಿನ ಹಳೆ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಿ ಕಾಲೇಜಿನ ಆವರಣದಲ್ಲಿ ಅತಿಥಿಗೃಹ ನಿರ್ಮಿಸಲು ಶ್ರಮಿಸಿದ್ದಾರೆ. ಈ ಸಮಿತಿಯ ಕಾರ್ಯದರ್ಶಿಯಾಗಿ ನನ್ನ ಮಗ ನಾಸಿರ್ ದುಡಿಯುತ್ತಿದ್ದಾನೆ. ಇನ್ನೊಂದೆರಡು ತಿಂಗಳಲ್ಲಿ ಅದರ ಉದ್ಘಾಟನೆಯೂ ಆಗಬಹುದು.

-ಸಾರಾ ಅಬೂಬಕ್ಕರ್

ಒಂದು ಪತ್ರ

ಸಂಘ ಪರಿವಾರದ ವಿಕೃತ ಮನಸ್ಥಿತಿಯಲ್ಲಿ ಕಳೆದುಹೋಗುತ್ತಿರುವ ಭಾರತ

ವಿವಿಧತೆಯ ತವರೂರಾದ ಭಾರತ ಸಂಘ ಪರಿವಾರದ ಏಕಮುಖ ಚಿಂತನೆ ಮತ್ತು ಕ್ರಿಯೆಯಲ್ಲಿ ಮೌಲಿಕವಾಗಿ ಕುಸಿಯುತ್ತಿರುವುದು ನಮ್ಮೆಲ್ಲರ ದುರದೃಷ್ಟವೇ ಸರಿ. ರಾಷ್ಟ್ರಭಕ್ತರು, ಹಿಂದೂ ಸಂಸ್ಕೃತಿಯ ರಕ್ಷಕರು ಮತ್ತು ಧರ್ಮಸಂಸ್ಥಾಪಕರು ಎಂಬಿತ್ಯಾದಿ ಲೇಬಲ್‌ಗಳೊಂದಿಗೆ ತಮ್ಮನ್ನು ಸ್ವಯಂ ಘೋಷಿಸಿಕೊಳ್ಳುವ ಭಾರತಮಾತೆಯ ವೀರಪುತ್ರರು ಇವರು!

ಮೊದಲನೆಯದಾಗಿ ರಾಷ್ಟ್ರ ಎಂಬ ಕಲ್ಪನೆಯು ಐಕ್ಯತಾ ಮನೋಭಾವನೆಯ ಸೃಷ್ಟಿ. ಅಂದರೆ ರಾಷ್ಟ್ರ ಎನ್ನುವುದು ಒಂದು ಅಮೂರ್ತ (abstract) ಕಲ್ಪನೆ. ಒಂದು ಗೊತ್ತಾದ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ನೆಲೆಸಿರುವ ಜನಸಮುದಾಯಗಳ ಕೊಡು-ಕೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ನಾವೆಲ್ಲರೂ ಈ ಪ್ರದೇಶಕ್ಕೆ ಸೇರಿದವರು ಎಂಬ ಭಾವನಾತ್ಮಕ ಸನ್ನಿವೇಶವೇ ರಾಷ್ಟ್ರಕಲ್ಪನೆಯ ಮೂಲ ತಳಹದಿ. ಭಾರತ ಒಂದು ರಾಷ್ಟ್ರ ಎಂಬ ಕಲ್ಪನೆ ಬಂದಿರುವುದೇ ವಸಾಹತುಶಾಹಿ ಪ್ರಭುತ್ವದಿಂದ ಮತ್ತು Nation ಎಂಬ ಕಲ್ಪನೆಯೇ ಪಶ್ಚಿಮದ ಉತ್ಪನ್ನ. ಭಾರತ ಒಂದು ಬಹುಧರ್ಮೀಯ, ಬಹುಸಂಸ್ಕೃತಿಯ ಸಮುದಾಯಗಳನ್ನು ಹೊಂದಿರುವ ದೇಶ. ಈ ದೇಶದಲ್ಲಿ ವಿವಿಧ ರಾಷ್ಟ್ರೀಯತೆಗಳಿವೆ ಮತ್ತು ಅವುಗಳ ನಡುವೆ ಒಂದು ಮಾನವೀಯ ಮತ್ತು ಭಾವನಾತ್ಮಕ ಸಂಬಂಧಗಳಿವೆ. ಚಾರಿತ್ರಿಕ ಹಿನ್ನೆಲೆಗಳಿವೆ. ಸಂಘ ಪರಿವಾರವು 'ನಾವೆಲ್ಲ ಒಂದು ನಾವೆಲ್ಲ ಹಿಂದೂ' ಎಂಬ ಘೋಷಣೆಯಲ್ಲಿ ಭಾರತ ಹಿಂದೂ ರಾಷ್ಟ್ರ ಎಂಬುವುದಾಗಿ ಚಿತ್ರಿಸುತ್ತದೆ. ಇಲ್ಲಿ ಪ್ರಶ್ನೆ ಎಂದರೆ ಹಿಂದೂ ಎನ್ನುವುದು ಸಂಘಪರಿವಾರ ಪ್ರತಿಪಾದಿಸುವ ಏಕಘನಾಕೃತಿಯ ಸಂರಚನೆಯೇ? ಹಿಂದೂಗಳೆಂದು ಸಂಘ ಪರಿವಾರ brand ಮಾಡುವ ಎಲ್ಲ ಸಮುದಾಯಗಳು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಇತರ ನೆಲೆಗಳಲ್ಲಿ ಸಮಾನತೆಯನ್ನು ಹೊಂದಿರುವರೇ? ಭಾರತ ಹಿಂದೂ ಪ್ರಜಾತಾಂತ್ರಿಕ ಗಣರಾಜ್ಯವಾಗಿ ರೂಪುಗೊಂಡ ನಂತರ ಈ ದೇಶವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಿಕೊಳ್ಳುವುದು ಈ ದೇಶದ ಮೂಲಭೂತ ಕಾನೂನಾದ ಸಂವಿಧಾನವನ್ನೇ ಪ್ರಶ್ನಿಸಿದಂತಲ್ಲವೇ?

ದ್ವಿತೀಯವಾಗಿ ದೇಶಭಕ್ತರು ಯಾರು? ದೇಶಭಕ್ತಿ ಎಂದರೇನು? ದೇಶದ್ರೋಹಿಗಳು ಯಾರು?

ನನ್ನ ಅಭಿಪ್ರಾಯದಲ್ಲಿ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ನಿರ್ವಹಿಸುವುದು, ಜನಪರ ಕಾಳಜಿಯನ್ನು ಹೊಂದಿರುವುದು, ಪ್ರಾಮಾಣಿಕವಾಗಿ ತೆರಿಗೆ ಪಾವತಿಸುವುದು, ದೇಶದ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಂಡು ಅನುಸರಿಸುವುದು, ಸರ್ವರನ್ನೂ ಭ್ರಾತೃತ್ವದಿಂದ ನೋಡುವ ಮನೋಭಾವನೆ ಹೊಂದಿರುವುದು, ನಾಗರಿಕ ಜವಾಬ್ದಾರಿಗಳನ್ನು ಓರ್ವ ನಾಗರಿಕನಾಗಿ ನಿಷ್ಠೆಯಿಂದ ನಿರ್ವಹಿಸುವುದು, ಅನ್ಯಾಯಗಳನ್ನು ಪ್ರಶ್ನಿಸುವುದು, ಮುಖ್ಯವಾಗಿ ಒಬ್ಬ ಮನುಷ್ಯನಾಗಿ ಮನುಷ್ಯರಂತೆ ನಡೆದುಕೊಳ್ಳುವುದು ಮತ್ತು ಸದಾ ಮಾನವೀಯ ಅಂತಃಕರಣವನ್ನು ಹೊಂದಿರುವುದು ಇವೇ ದೇಶಭಕ್ತಿ ಮತ್ತು ದೇಶಭಕ್ತರಲ್ಲಿರಬೇಕಾದ ಗುಣಧರ್ಮಗಳು.

ಪ್ರತಿಯೊಬ್ಬನಿಗೂ ಒಂದು ವ್ಯವಸ್ಥೆಯಲ್ಲಿ ಮಾನವೀಯ ನೆಮ್ಮದಿಯ ನಾಗರಿಕ ಬದುಕನ್ನು ಕಟ್ಟಿಕೊಳ್ಳುವ ಸನ್ನಿವೇಶ ಸೃಷ್ಟಿಯಾದಾಗ ಆ ವ್ಯವಸ್ಥೆಯ ಬಗ್ಗೆ ಅಂತರಾಳದಲ್ಲಿ ಭಕ್ತಿ, ಪ್ರೇಮ ಸಹಜವಾಗಿ ಮೂಡುತ್ತದೆ. ಅದನ್ನು impose ಮಾಡುವ ಅಗತ್ಯತೆಯಿಲ್ಲ ಮತ್ತು ಅದಕ್ಕೆ ಯಾವುದೇ ಧರ್ಮ, ಸಂಸ್ಕೃತಿ ಅಥವಾ ಆಚಾರವಿಚಾರ ಅಡಚಣೆಯಾಗುವುದಿಲ್ಲ.

ಮತಾಂತರದಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿ ನಶಿಸುತ್ತಿದೆ. ಇದು ನಮ್ಮ ದೇಶಕ್ಕೆ ಗಂಭೀರವಾದ ಅಪಾಯ ತಂದೊಡ್ಡಿದೆ ಎಂದು ಸಂಘ ಪರಿವಾರದವರು ಕೋಮು ದ್ವೇಷವನ್ನು ಸ್ಥಿರೀಕರಿಸಲು ಮತಾಂತರದ ಅಸ್ತ್ರವನ್ನು ಬಳಸುತ್ತಾರೆ. ಆದರೆ ಹಿಂದೂ ಧರ್ಮದ ಆಂತರ್ಯದಲ್ಲಿನ ಕೆಡುಕುಗಳು ಮತ್ತು ಅಮಾನವೀಯ ಮುಖಗಳನ್ನು ಆತ್ಮಾವಲೋಕನ ಮಾಡದೆ ಮುಚ್ಚಿಡುವ ಸಂಘಟಿತ ಪ್ರಯತ್ನಕ್ಕೆ ಇದೊಂದು ಸಾಧನವನ್ನಾಗಿ ಪರಿವರ್ತನೆಯಾಗಿರುವುದು ವಿಪರ್ಯಾಸ. ಅಷ್ಟಕ್ಕೂ ಮತ ಎಂದರೆ ಅಭಿಪ್ರಾಯ ಒಬ್ಬ ವ್ಯಕ್ತಿಗೆ ಒಪ್ಪುವ ಅಭಿಪ್ರಾಯವನ್ನು ಸ್ವೀಕರಿಸುವ ಮಾನವ ಸಹಜ ಹಕ್ಕಿದೆ. ನಮ್ಮ ದೇಶದ ಸಂವಿಧಾನ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಮತಾಂತರಕ್ಕೆ ಕಾರಣಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳದೆ ಒಂದು ಧರ್ಮವನ್ನು ಮತಾಂತರಿಗಳೆಂದು ಅವರುಗಳ ವಿರುದ್ಧ ದ್ವೇಷ ಭಾವನೆ ಬಿತ್ತುವುದು ಅತ್ಯಂತ ಅಪಾಯಕಾರಿ ಭಾವನೆ.

ಭಾರತೀಯ ಸಂಸ್ಕೃತಿ ಎಂದರೇನು? ಎಂಬ ಪ್ರಶ್ನೆಗೆ ಏಕ ಅರ್ಥವನ್ನು ನೀಡಲು ಸಾಧ್ಯವಿಲ್ಲ. ಆದರೆ ಸಂಘ ಪರಿವಾರದ ಪ್ರಕಾರ ಮೇಲ್ವರ್ಗದ ಅದರಲ್ಲೂ ಪ್ರಮುಖವಾಗಿ ಬ್ರಾಹ್ಮಣಶಾಹಿಯು ಅನುಸರಿಸುವ ಆಚಾರ, ಆಹಾರಪದ್ಧತಿ, ಕಲೆ, ಸಾಹಿತ್ಯ, ಸಂಗೀತ ಇವೇ ಭಾರತೀಯ ಸಂಸ್ಕೃತಿ! ಉಳಿದ ಬುಡಕಟ್ಟು ಸಂಸ್ಕೃತಿ, ದಲಿತ ಸಂಸ್ಕೃತಿ, ಶೂದ್ರ ಸಂಸ್ಕೃತಿ ಮತ್ತು ಅಲ್ಪಸಂಖ್ಯಾತ ಸಮುದಾಯದ ಸಂಸ್ಕೃತಿಗಳೆಲ್ಲವೂ ಕೀಳುಮಟ್ಟದ ಸಂಸ್ಕೃತಿ ಅಥವಾ ಅನ್ಯಸಂಸ್ಕೃತಿಗಳು. ದಲಿತರನ್ನು ಜೀವಂತವಾಗಿ ದಹನಗೊಳಿಸುವುದು ಸಂಸ್ಕೃತಿಯೇ? ಮತಾಂತರಿಗಳೆಂದು ಲೇಬಲ್ ಮಾಡಿ ಬೆಂಕಿ ಹಚ್ಚುವುದು ಸಂಸ್ಕೃತಿಯೇ? ಜಾತಿಯ ಹೆಸರಿನಲ್ಲಿ ವ್ಯಕ್ತಿ ವಿಕಸನದ ಮಾರ್ಗಗಳನ್ನು ಮುಚ್ಚುವುದು ಸಂಸ್ಕೃತಿಯೇ? ಮಠಮಾನ್ಯಗಳು ಪ್ರಚಾರಪಡಿಸುವ ತತ್ವಗಳು ಮಾತ್ರ ಸಂಸ್ಕೃತಿಯ ಪ್ರತೀಕವೇ? ಧರ್ಮದ ವ್ಯಾಖ್ಯಾನವನ್ನು ನೀಡುವ ಬದಲು ಎಲ್ಲರಿಗೂ ಒಳ್ಳೆಯ ಬದುಕಿನ ಸನ್ನಿವೇಶದ ಆದರ್ಶ ಪರಿಸರದ ನಿರ್ಮಾಣದ ಆಶಯವೇ ಧರ್ಮದ ಆಂತರ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಧರ್ಮದ ಆಚರಣೆಯನ್ನು ವೈಯಕ್ತಿಕ ವಿಷಯಕ್ಕೆ ಸೀಮಿತಗೊಳಿಸಿ ಮಾನವಧರ್ಮವನ್ನು ಸಾರ್ವತ್ರಿಕಗೊಳಿಸುವುದು ಮನುಕುಲದ ಆದ್ಯಕರ್ತವ್ಯವಾದಾಗ ಜಗತ್ತು ಸುಂದರ ಬದುಕಿಗೆ ಸೋಪಾನವಾಗುತ್ತದೆ.

ಈ ದೇಶದ ಉಳಿವು ಇಲ್ಲಿನ ಸಮಸ್ತ ಜನಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ನೆಲೆಗೊಂಡಿದೆ. ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ, ಸಮಾನತೆ, ನ್ಯಾಯದ ಚೌಕಟ್ಟಿನಲ್ಲಿ ನಾಗರಿಕ ಬದುಕಿಗೆ ಬೇಕಾದ ಸವಲತ್ತುಗಳು ಲಭ್ಯವಾದಾಗ ದೇಶ ಸಹಜವಾಗಿ ಬಲಗೊಳ್ಳುತ್ತದೆ. ನಮ್ಮಲ್ಲಿನ ವಿವಿಧತೆ ನಮ್ಮ ಬೆಳವಣಿಗೆಯ, ಕ್ರಿಯಾಶೀಲತೆಯ ಮತ್ತು ಸೃಜನಶೀಲತೆಯ ಬಹು ಅಮೂಲ್ಯ ಆಸ್ತಿ. ನಮಗೆ ಬೇಕಾಗಿರುವುದು ಮಾನವೀಯ ಸ್ಪರ್ಶವಿರುವ ಅಂತಃಕರಣವಿರುವ ಸಂಸ್ಕೃತಿ.

ರಾಷ್ಟ್ರ ನಿರ್ಮಾಣವೆಂದರೆ ಒಳ್ಳೆಯ ಬದುಕಿಗೆ ಬೇಕಾದ ಸನ್ನಿವೇಶದ ನಿರ್ಮಾಣ ಎಂಬುದನ್ನು ಅರ್ಥೈಸಿಕೊಳ್ಳಬೇಕು. ಒಳ್ಳೆಯ ಮನುಷ್ಯನಾದಾಗ ಒಳ್ಳೆಯ ಭಾರತೀಯನಾಗಬಹುದು, ವಿಶ್ವಮಾನವನೂ ಆಗಬಹುದು. ಜಾತಿಪದ್ಧತಿ, ಅಸ್ಪೃಶ್ಯತೆ, ಸ್ವಜನಪಕ್ಷಪಾತ, ಸ್ತ್ರೀಶೋಷಣೆ, ಭ್ರಷ್ಟಾಚಾರ, ಬಂಡವಾಳಶಾಹಿಯ ಕರಾಳಶೋಷಣೆ ಇವೆಲ್ಲವನ್ನೂ ಪ್ರಬಲವಾಗಿ ವಿರೋಧಿಸಬೇಕು. ಸಂಘ ಪರಿವಾರದ ಬಣ್ಣದ ಮಾತಿಗೆ, ಗಿಮಿಕ್‌ಗಳಿಗೆ, ಸ್ವಾರ್ಥಕ್ಕೆ ಬಲಿಯಾದರೆ ಈ ದೇಶವೂ ಕಳೆದುಹೋಗುತ್ತದೆ ಮತ್ತು ನಾವೂ ಕಳೆದುಹೋಗುತ್ತೇವೆ.

-ಎಂ. ಆರ್. ವಿದ್ಯಾಧರ ರೈ, ಮಡಿಕೇರಿ

ಸಾಮಾನ್ಯವಾಗಿ ಗಾಂಧಿನಗರದ ಸಿನಿಮಾ ಮಂದಿ ಭಯಂಕರವಾದ ಭ್ರಮೆಗೆ ಒಳಗಾಗಿ ಸದಾ ವಾಸ್ತವದಿಂದ ದೂರವಿರುತ್ತಾರೆ. ಇಂಥವರ ಮಧ್ಯೆ ಯಾವುದೋ ಕೆಲಸಕ್ಕೆ ಬಾರದ ಕಲ್ಪನೆಯಲ್ಲಿ ಮುಳುಗದೇ ಬದುಕಿಗೆ ಹತ್ತಿರವಾಗಿರುವ ಸೂರಿ ನಿಜಕ್ಕೂ ಚುರುಕು ಮತ್ತು ಭಾವುಕ ವ್ಯಕ್ತಿತ್ವದ ಮನುಷ್ಯ...



ಇಂತಿ ನಿಮ್ಮ ಪ್ರೀತಿಯ ಸೂರಿ

ಕುಳ್ಳಗೆ, ಕಪ್ಪಗೆ, ಅಂತರ್ಮುಖಿಯಂತಿರುವ ನಿರ್ದೇಶಕ ಸೂರಿ ಮೊದಲ ನೋಟಕ್ಕೆ ಮಹಾ ಮೌನಿಯಂತೆ ಕಾಣಿಸುತ್ತಾರೆ. ಆದರೆ ಮಾತಿಗೆ ಕುಳಿತರೆ ಮನುಷ್ಯ ಫೇಟ್ 'ದುನಿಯಾ' ಚಿತ್ರದ ಸತ್ಯಗ್ಳನ ಪ್ರತಿರೂಪ ಎಂಬುದು ಗೊತ್ತಾಗುತ್ತದೆ.

ಸಾಮಾನ್ಯವಾಗಿ ಗಾಂಧಿನಗರದ ಸಿನಿಮಾ ಮಂದಿ ಭಯಂಕರವಾದ ಭ್ರಮೆಗೆ ಒಳಗಾಗಿ ಸದಾ ವಾಸ್ತವದಿಂದ ದೂರವಿರುತ್ತಾರೆ. ಇಂಥವರ ಮಧ್ಯೆ ಯಾವುದೋ ಕೆಲಸಕ್ಕೆ ಬಾರದ ಕಲ್ಪನೆಯಲ್ಲಿ ಮುಳುಗದೇ ಬದುಕಿಗೆ ಹತ್ತಿರವಾಗಿರುವ ಸೂರಿ ನಿಜಕ್ಕೂ ಚುರುಕು ಮತ್ತು ಭಾವುಕ ವ್ಯಕ್ತಿತ್ವದ ಮನುಷ್ಯ.

ಸೂರಿ ಬೆಳೆದದ್ದು ಕಡುಬಡತನದಲ್ಲಿ. ಬೆಂಗಳೂರಿನ ಜೆಪಿ ನಗರದ ಸಾರಕ್ಕಿ ಸ್ಲಂನಲ್ಲೇ ಬೆಳೆದವರು ಸೂರಿ. ಅವರ ತಂದೆ ಬದುಕಿಗಾಗಿ ತರಕಾರಿ ವ್ಯಾಪಾರ ಮಾಡಿಕೊಂಡಿದ್ದವರು. ತಂದೆ ಹಠಾತ್ತನೆ ತೀರಿಕೊಂಡಾಗ ಕಷ್ಟಕ್ಕೆ ಬಿದ್ದ ಸೂರಿ ಜೀವನೋಪಾಯಕ್ಕಾಗಿ ಅವಲಂಬಿಸಿದ್ದು ಆಟೋಗಳ ನಂಬರ್ ಪ್ಲೇಟ್ ಬರೆಯುವ ಕಾಯಕವನ್ನು. ಅದರೊಂದಿಗೆ ಸೈನ್ ಬೋರ್ಡ್, ಬ್ಯಾನರ್‌ಗಳನ್ನು ಬರೆಯುವ ಕೆಲಸ. ಹೀಗೆ ಬೋರ್ಡ್‌ಗಳನ್ನು ಬರೆಯುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಸಮಯದಲ್ಲೂ ಸೂರಿ ಕುವೆಂಪುರವರ ಸಾಹಿತ್ಯವನ್ನು ಲಂಕೇಶರ ಬರಹಗಳನ್ನು, ಅದರಲ್ಲೂ ಲಂಕೇಶರು ಅನುವಾದಿಸಿರುವ ಬೋದಿಲೇರ್‌ನ 'ಪಾಪದ ಹೂಗಳು' ಪುಸ್ತಕವನ್ನು ಅರಗಿಸಿಕೊಂಡಿದವರು. ಇಂತಹ ಸೂರಿಗೆ ಸಹಜವಾಗಿಯೇ ಸಿನಿಮಾ ಲೋಕದ ಬಗ್ಗೆ ವಿಸ್ಮಯ, ಆಶೆ, ಕುತೂಹಲ. ತಾನು ಚಿತ್ರರಂಗದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಹಂಬಲ.

ಆ ನಿಟ್ಟಿನಲ್ಲಿ ಅವರು ಹನುಮಂತನಗರದಲ್ಲಿರುವ ಅ.ನಾ. ಸುಬ್ಬರಾವ್ (ಹಿರಿಯ ಪತ್ರಕರ್ತ ಎ.ಎಸ್. ಮೂರ್ತಿ ಅವರ ತಂದೆ) ಕಲಾಮಂದಿರವನ್ನು ಸೇರಿ ಎರಡು ವರ್ಷಗಳ ಡಿಪ್ಲೊಮಾ ಮುಗಿಸಿದರು. ಅಲ್ಲಿ ಓದುತ್ತಿದ್ದಾಗಲೇ ಬಿ. ಸುರೇಶ್ ಮತ್ತು ಯೋಗರಾಜ್ ಭಟ್‌ರಂತಹ ಸೂಕ್ಷ್ಮ ಮನಸ್ಸಿನ 'ಸಿನಿಮಾ ಮಂದಿ'ಯ ಪರಿಚಯವಾಯಿತು. ಆನಂತರ ಬಿ. ಸುರೇಶ್



ನಿರ್ದೇಶಿಸಿದ್ದ 'ಸಾಧನೆ' ಧಾರಾವಾಹಿಗಾಗಿ ಸತತ ಎರಡು ವರ್ಷಗಳ ಕಾಲ ಕೆಲಸ ಮಾಡಿದರು. ಹಾಗೆಯೇ ಸುರೇಶ್ ಮೊಟ್ಟಮೊದಲ ಬಾರಿಗೆ ನಿರ್ದೇಶಿಸಿದ 'ಠಪೋರಿ' ಚಿತ್ರಕ್ಕೆ ಕ್ಯಾಮೆರಾಮೆನ್ ಅಶೋಕ್ ಕಶ್ಯಪ್‌ರ ಸಹಾಯಕರಾಗಿ ದುಡಿದರು.

ಆದರೆ ಕ್ಯಾಮೆರಾ ಕೆಲಸಕ್ಕಿಂತ ಸೂರಿಗೆ ಇಷ್ಟವಿದ್ದದ್ದು ಸಿನಿಮಾಗಾಗಿ ಬರೆಯಬೇಕು ಎಂಬ ತುಡಿತ. ಇದಕ್ಕೋಸ್ಕರ ಯೋಗರಾಜ್ ಭಟ್ಟರ ಬೆನ್ನತ್ತಿದರು ಸೂರಿ. ಕೊನೆಗೂ ಸೂರಿಯ ಕಾಟವನ್ನು ತಡೆಯಲಾರದೆ ಭಟ್ಟರು 'ಮಣಿ' ಚಿತ್ರಕ್ಕೆ ಚಿತ್ರಕತೆ ಬರೆಯುವ ಜವಾಬ್ದಾರಿ ನೀಡಿದರು. ಈ ಚಿತ್ರ ವಿಮರ್ಶಕರಿಂದ ಸೈ ಎನಿಸಿಕೊಂಡಿತಾದರೂ ಬಾಕ್ಸ್ ಆಫೀಸಿನಲ್ಲಿ ಗೆಲ್ಲಲಿಲ್ಲ. ನಂತರ ಅದೇ ಭಟ್ಟರೊಂದಿಗೆ 'ರಂಗ ಎಸ್ಸೆಸ್ಸೆಲ್ಸಿ' ಚಿತ್ರಕ್ಕಾಗಿ ಕೆಲಸ ಮಾಡಿದರು. ಈ ಚಿತ್ರವೂ ಗೆಲ್ಲಲಿಲ್ಲ. ಆನಂತರ ಸೂರಿ ಪಾಲಿಗೆ ಸಿಕ್ಕಿದ್ದು ಎರಡು ವರ್ಷಗಳ ನಿರುದ್ಯೋಗ.

ಆಗ ಬಂದಿದ್ದೇ 'ದುನಿಯಾ'ದ ಆಲೋಚನೆ. ತನ್ನ ಸುತ್ತಲ ಬದುಕನ್ನೇ ಆಧರಿಸಿ, ತನ್ನ ಸುತ್ತಲಿದ್ದ ಜನರ ಮಾತನ್ನೇ ಬಳಸಿ ಸೂರಿ ಕತೆ ಹೆಣೆದಿದ್ದರು. ಅದಕ್ಕೆ ಸರಿಯಾಗಿ ನಾಯಕ ನಟ ವಿಜಯ್ ಸ್ಪಂದಿಸಿದನಲ್ಲದೆ, ನಿರ್ಮಾಪಕ ಸಿದ್ದರಾಜು ಕೂಡ ಕಷ್ಟಪಟ್ಟು ಎಲ್ಲೆಲ್ಲಿಂದಲೋ ಹಣ ತಂದು ಚಿತ್ರ ನಿರ್ಮಿಸಿದರು. ಚಿತ್ರದ ಪ್ರತಿ ಫ್ರೇಮಿನಲ್ಲೂ ಸೂರಿಯವರ ಪ್ರತಿಭೆ ಮತ್ತು ಶ್ರಮ ಕಾಣಿಸುತ್ತಿತ್ತು. ಜನ 'ದುನಿಯಾ' ಚಿತ್ರವನ್ನು ಗೆಲ್ಲಿಸಿದರು. ಅದರ ಯಶಸ್ಸಿನಿಂದಾಗಿ ಸೂರಿಯ ದುನಿಯಾ ಕೂಡ ಸುಧಾರಿಸಿತು.

ಇತ್ತೀಚೆಗೆ ಸೂರಿ ಹೆಸರುಘಟ್ಟ ಬಳಿ ಒಂದು ಮನೆಯನ್ನು ಖರೀದಿಸಿದ್ದಾರೆ. ಆದರೆ ಆ ಮನೆಯಲ್ಲಿ ಅವರ ಅಣ್ಣ ಅತ್ತಿಗೆ ಮತ್ತು ಅವರ ಮಕ್ಕಳು ವಾಸ ಮಾಡುತ್ತಿದ್ದಾರೆ. ಸೂರಿ ಮಾತ್ರ ಇಲ್ಲೇ ಪದ್ಮನಾಭನಗರದ ದೇವೇಗೌಡ ಆಸ್ಪತ್ರೆ ಬಳಿ ಮನೆಯೊಂದನ್ನು ಬಾಡಿಗೆ ಹಿಡಿದು ತಮ್ಮ ಹುಡುಗರೊಂದಿಗೆ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ.

ಸಾಮಾನ್ಯವಾಗಿ ಸಿನಿಮಾದಲ್ಲಿ ಯಶಸ್ವಿಯಾದವರು ತಮ್ಮ ಮನೆಯವರನ್ನೂ ಚಿತ್ರರಂಗದಲ್ಲಿ ತೊಡಗಿಸಿಕೊಂಡು ತಮ್ಮ ಅಣ್ಣತಮ್ಮಂದಿರನ್ನೇ ವ್ಯವಹಾರಕ್ಕೆ ಬಿಡುವುದು ವಾಡಿಕೆ. ಆದರೆ ಸೂರಿಯ ಅಣ್ಣ ಗಾರ್ಮೆಂಟ್ ಒಂದರಲ್ಲಿ ಸೂಪರ್‌ವೈಸರ್ ಆಗಿಯೇ ಮುಂದುವರೆದಿದ್ದಾರೆ. ಸೂರಿಯ ತಾಯಿ ಇವತ್ತಿಗೂ ಜೆಎಸ್‌ಎಸ್ ಶಾಲೆಯಲ್ಲಿ ಆಯಾ ಕೆಲಸ ಮಾಡುತ್ತಿದ್ದಾರೆ. ಮಾಯಾಲೋಕವೆಂಬ ಚಿತ್ರರಂಗವನ್ನು ನಂಬಿಕೊಂಡು ಅವರ ಕೆಲಸ ಯಾಕೆ ಹಾಳುಮಾಡುವುದು ಎಂಬ ಪ್ರಾಮಾಣಿಕ ಚಿಂತೆ ಸೂರಿಯದ್ದು.

ಸೂರಿ ಇನ್ನೂ ಬ್ಯಾಚುಲರ್. "ಒಂದಷ್ಟು ಜನ ಗೆಳತಿಯರಿದ್ದಾರೆ. ಆದರೆ ಯಾರ ಬಳಿಯೂ 'ಮದುವೆಯಾಗು' ಎಂದು ಹೇಳುವ ಧೈರ್ಯ ಮಾಡಿಲ್ಲ. ಹಾಗೇನಾದರೂ ಮದುವೆಯಾದರೂ ಅದು ಸಿಂಪಲ್ ಮ್ಯಾರೇಜ್" ಅಂತ ಸಿಂಪಲ್ಲಾಗಿ ಹೇಳ್ತಾರೆ.

ತಮಿಳಿನ ಬಾಲ, ಗೌತಮ್‌ರಂಥ ನಿರ್ದೇಶಕರ ಕಾರ್ಯಶೈಲಿಯನ್ನು ಮೆಚ್ಚುವ ಸೂರಿ ತಾವು ಮಾತ್ರ ಪರಭಾಷೆಗೆ ಹೋಗಲ್ಲ ಎನ್ನುತ್ತಾರೆ. "ಯಾಕೆಂದರೆ ಅಲ್ಲಿನ ಮಣ್ಣಿನ ವಾಸನೆ ನಮಗೆ ಅಷ್ಟೊಂದು ತಿಳಿದಿರೊರಲ್ಲ, ಅಲ್ಲಿನ ನೇಟಿವಿಟಿಗೆ ನಾವು ಅಡ್ಜಸ್ಟ್ ಆಗೋದು ಕಷ್ಟ. ಆದ್ದರಿಂದ ಅಂತ ಯಾವ ಯೋಚನೆಯೂ ಸದ್ಯಕ್ಕಿಲ್ಲ" ಅನ್ನೋದು ಸೂರಿಯ ಮಾತು.

ಇಂಥ ಸೂರಿ 'ಇಂತಿ ನಿನ್ನ ಪ್ರೀತಿಯ' ಚಿತ್ರವನ್ನು ಪ್ರೀತಿಯಿಂದ ನಿರ್ದೇಶಿಸಿ, ತಮ್ಮ 'ಸೂರಿ ಟಾಕೀಸ್' ನಿಂದ ನಿರ್ಮಿಸಿ ಇದೇ ಶುಕ್ರವಾರ ಬಿಡುಗಡೆ ಮಾಡುತ್ತಿದ್ದಾರೆ.

ಸಾಮಾನ್ಯವಾಗಿ ಪ್ರತಿಯೊಬ್ಬರ ಜೀವನದಲ್ಲೂ ನಡೆಯುವ ಪ್ರೀತಿಯ ಎಳೆಯೊಂದನ್ನು ಇಟ್ಟುಕೊಂಡು ವಿಭಿನ್ನವಾದ ಕ್ಯಾನ್‌ವಾಸ್‌ನಲ್ಲಿ 'ಇಂತಿ ನಿನ್ನ ಪ್ರೀತಿಯ' ಎಂಬ ದೃಶ್ಯ ಕಾವ್ಯವನ್ನು ಹೆಣೆದಿದ್ದೇನೆ ಎನ್ನುತ್ತಾರೆ ಸೂರಿ.

ಸೂರಿಯ ಮೊದಲ ಚಿತ್ರವಾದ 'ದುನಿಯಾ'ಕ್ಕೂ 'ಇಂತಿ ನಿನ್ನ ಪ್ರೀತಿಯ' ಚಿತ್ರಕ್ಕೂ ಯಾವುದೇ ಸಾಮ್ಯತೆಯಿಲ್ಲವಂತೆ. 'ದುನಿಯಾ'ದಲ್ಲಿ ಭೂಗತ ಜಗತ್ತಿನ ಕ್ರೌರ್ಯ ಮತ್ತು ಭೀಭತ್ಸತೆಯನ್ನು ತೆರೆದಿಡಲಾಗಿತ್ತು. 'ಇಂತಿ ನಿನ್ನ....' ಚಿತ್ರದಲ್ಲೂ ಕ್ರೌರ್ಯವಿದೆ ಆದರೆ ದುನಿಯಾದಲ್ಲಿದ್ದಂತೆ ಅದಕ್ಕೆ ರೌಡಿಸಂನ ಮಜಲುಗಳಿಲ್ಲ ಎಂದೂ ಹೇಳುತ್ತಾರೆ.

ಚಿತ್ರೀಕರಣದ ನೆಪದಲ್ಲಿ ಯಾವ ಫಾರಿನ್‌ಗೂ ಹೋಗಿಲ್ಲ, ಕದೇ ಪಕ್ಷ ಕೊಡಚಾದ್ರಿ, ಜೋಗ್‌ನಂತಹ ರಮಣೀಯ ಸ್ಥಳಗಳಿಗೂ ಹೋಗಿಲ್ಲ. ಬೆಂಗಳೂರಿನಿಂದ 11 ಕಿಲೋಮೀಟರುಗಳ ಅಂತರದಲ್ಲೇ ಇಡೀ ಸಿನಿಮಾದ ಚಿತ್ರೀಕರಣ ಮುಗಿಸಿದ್ದಾರೆ.

ಈಗಾಗಲೇ ಟೀವಿಗಳಲ್ಲಿ ಪ್ರಸಾರವಾಗುತ್ತಿರುವ ಚಿತ್ರದ ಟ್ರಯಲರ್‌ಗಳು ಈ ಚಿತ್ರ ಡಿಫರೆಂಟ್ ಆಗಿದೆ ಎನಿಸುವಂತಿದೆ. 'ಇಂತಿ ನಿನ್ನ ಪ್ರೀತಿಯ' ಚಿತ್ರ ಗೆಲ್ಲುತ್ತದೆ ಎಂಬ ಮಾತೂ ಗಾಂಧಿನಗರದಿಂದ ಕೇಳಿಬರುತ್ತಿದೆ.

'ಇಂತಿ ನಿನ್ನ ಪ್ರೀತಿಯ' ಚಿತ್ರವನ್ನು ಜನ ಪ್ರೀತಿಸುತ್ತಾರೋ ಇಲ್ಲವೋ ಎಂಬುದು ಇನ್ನು ಕೆಲವೇ ದಿನಗಳಲ್ಲಿ ಗೊತ್ತಾಗಲಿದೆ.

■ ಅರುಣ್.ಜಿ

ಸತ್ಯನ ಸಾಥ್



ಸೂರಿಯ ಗೆಲುವಿಗೆ ಬಹುಮುಖ್ಯ ಕಾರಣ ಅವರೊಂದಿಗಿರುವ ಹುಡುಗರು. ಅದರಲ್ಲೂ ಛಾಯಾಗ್ರಾಹಕ ಸತ್ಯ ಹೆಗಡೆಯಂತೂ ಸೂರಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾರೆ. ಚಿತ್ರೀಕರಣದ ಕೆಲಸಗಳು ಇಲ್ಲದ ಸಮಯದಲ್ಲಿ ಸಿಕ್ಕ ಸಿಕ್ಕ ಸಿನಿಮಾಗಳನ್ನೆಲ್ಲಾ ನೋಡುತ್ತಾ ಅಲ್ಲೀ ಇಲ್ಲಿ ಅಡ್ಡಾಡುವ ಈ ಸತ್ಯ ಬರೀ ಹಣ ಸಂಪಾದನೆಗೋಸ್ಕರ ಬೇರೆ ಯಾವ ಸಿನಿಮಾವನ್ನು ಒಪ್ಪಿಕೊಳ್ಳುತ್ತಿಲ್ಲವಂತೆ.

'ಸುಮ್ಮನೇ ಯಾಕೆ ತಿರುಗಾಡಿ ಟೈಂ ವೇಸ್ಟ್ ಮಾಡ್ತೀಯ ಬೇರೆ ಯಾವುದಾದೂ ಪ್ರಾಜೆಕ್ಟ್ ಒಪ್ಕೋ' ಎಂದು ಸ್ವತಃ ಸೂರಿಯೇ ಹೇಳಿದರೂ ಒಪ್ಪುತ್ತಿಲ್ಲವಂತೆ ಈತ. 'ಕಾಸು ಕೊಡ್ತಾರೆ ಅಂತ ಅವ್ರು ಹೇಳಿದಂಗೆಲ್ಲಾ ಕ್ಯಾಮೆರಾ ತಿರುಗಿಸಲು ನನಗಿಷ್ಟವಿಲ್ಲ' ಎಂಬ ಹಠ ಈ ಹುಡುಗನದ್ದು.

ಒಟ್ಟಾರೆ ಹಣಕ್ಕಿಂತ ಆತ್ಮತೃಪ್ತಿ ಮುಖ್ಯ ಎಂಬ ಪಾಲಿಸಿಯನ್ನು ನಂಬಿರುವ ಈ ಕ್ರಿಯಾಶೀಲ ಹುಡುಗರ ಗುಣ ಮೆಚ್ಚಬೇಕಾದ್ದು.


ಗಾಯಕರ ಗಲಾಟೆ

ರಾಕ್‌ಲೈನ್ ತರಾಟೆ


'ಅನಿಸುತಿದೆ ಯಾಕೋ ಇಂದು' ಎಂಬ ಹಾಡಿನ ಮುಖಾಂತರ ಕನ್ನಡದ ಕೋಟ್ಯಂತರ ಪ್ರೇಕ್ಷಕರ ಹೃದಯಕ್ಕೆ ಕೊಳ್ಳಿ ಇಟ್ಟ ಹಿನ್ನೆಲೆ ಗಾಯಕ ಸೋನು ನಿಗಮ್ ಈಗ ಚಿತ್ರರಂಗದ ನಿರ್ಮಾಪಕರ ಪಾಲಿಗೆ ದುಃಸ್ವಪ್ನವಾಗಿದ್ದಾರೆ.



ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ, ಮನೋ ಮೂರ್ತಿ ಸಂಗೀತ ನಿರ್ದೇಶನದ 'ಬೊಂಬಾಟ್' ಚಿತ್ರದ ಹಾಡೊಂದಕ್ಕೆ ಸೋನು ನಿಗಮ್ ಕೇಳಿದ ಸಂಭಾವನೆ ಎಷ್ಟು ಗೊತ್ತೆ? ಕೇವಲ ಎರಡೂವರೆ ಲಕ್ಷ ರೂಪಾಯಿಗಳು! ಬರೀ ಅಷ್ಟೇ ಆಗಿದ್ದರೆ ಪರವಾಗಿಲ್ಲ ಎಂದು ಹೇಳಬಹುದಿತ್ತೇನೋ? ಆದರೆ ಸಂಭಾವನೆಯ ಜೊತೆ ಜೊತೆಗೇ ಆ ಚಿತ್ರದ ರಿಂಗ್ ಟೋನ್ ಹಕ್ಕುಗಳನ್ನೂ ತನಗೇ ನೀಡಬೇಕೆಂದು ಸೋನು ನಿಗಮ್ ಷರತ್ತು ಹಾಕಿದರಂತೆ.



ಸೋನುವಿನ ಇಂತಹ ಷರತ್ತುಗಳನ್ನು ಕೇಳಿದಾಕ್ಷಣ ಕೆಂಡಾಮಂಡಲವಾದ ರಾಕ್‌ಲೈನ್ ವೆಂಕಟೇಶ್ "ಇಡೀ ಚಿತ್ರದ ಕ್ಯಾಸೆಟ್ ಹಕ್ಕುಗಳನ್ನು ಆತನಿಗೇ ಖರೀದಿಸಲು ಹೇಳಿ" ಎಂದು ಗುಡುಗಿದರಂತೆ. ಅಷ್ಟೇ ಅಲ್ಲ "ಸೋನು ನಿಗಮ್ ಸ್ಥಾನಕ್ಕೆ ಕನ್ನಡದ ಪ್ರತಿಭಾವಂತ ಗಾಯಕನನ್ನು ಆರಿಸಿಕೊಳ್ಳಿ; ಸೋನು ನಿಗಮ್ ಹೆಸರಿನಲ್ಲಿ ಇಲ್ಲಿ ಚಿತ್ರ ಓಡುತ್ತಿಲ್ಲ ಅಥವಾ ವ್ಯಾಪಾರವನ್ನೂ ಮಾಡುತ್ತಿಲ್ಲ" ಎಂದು ಖಡಕ್ಕಾಗಿ ಹೇಳಿದರಂತೆ.



ಇಂತಹದ್ದೇ ಮತ್ತೊಂದು ಘಟನೆ ಗಾಂಧಿನಗರದಲ್ಲಿ ನಡೆದಿದೆ. 'ಸತ್ಯ ಇನ್ ಲವ್' ಚಿತ್ರಕ್ಕಾಗಿ ಅದ್ನಾನ್ ಸಾಮಿಯಿಂದ ಹಾಡೊಂದನ್ನು ಹಾಡಿಸಬೇಕೆಂದು ಸಂಗೀತ ನಿರ್ದೇಶಕ ಗುರುಕಿರಣ್ ಆಸೆ ಪಟ್ಟಿದ್ದರು. ಆದರೆ ಇಂದು ಬಾ, ನಾಳೆ ಬಾ ಎನ್ನುತ್ತಾ ಅದ್ನಾನ್ ಸಾಮಿ ಹಲವಾರು ಬಾರಿ ಗುರುವನ್ನು ಅಡ್ಡಾಡಿಸಿದರಂತೆ. ಆತ ಎಷ್ಟೊಂದು ಬಾರಿ ಗುರುಕಿರಣ್‌ರನ್ನು ತಿರುಗಿಸಿದನೆಂದರೆ, ಗುರುಕಿರಣ್ ಕೂಡ ಅದ್ನಾನ್ ಸಾಮಿಯಂತೆ ಸ್ಲಿಂ ಆದರಂತೆ. ಇದೆಲ್ಲದರಿಂದ ಕೊನೆಗೂ ಬೇಸರಗೊಂಡ ಗುರುಕಿರಣ್ ಅದ್ನಾನ್ ಕೈಲಿ ಹಾಡಿಸುವ ಆಸೆಯನ್ನು ಕೈಬಿಟ್ಟು, ತಾನೇ ಸ್ವತಃ ಅದ್ನಾನ್ ಶೈಲಿಯಲ್ಲಿ ಹಾಡಿ ಮುಗಿಸಿದರಂತೆ. ಅದ್ನಾನ್ ಸಾಮಿಯನ್ನು ಗುರು



ಎಷ್ಟು ಚೆನ್ನಾಗಿ ಕಾಪಿ ಮಾಡಿದ್ದಾರೆಂದರೆ ಬಹುತೇಕ ಜನ ಸ್ವತಃ ಅದ್ನಾನ್ ಸಾಮಿ ಹಾಡಿದ್ದಾರೆಂದೇ ನಂಬಿದರಂತೆ.

ಅದೆಲ್ಲ ಬಿಡಿಗಿರಲಿ. ಪರಭಾಷಾ ಗಾಯಕರು ಕನ್ನಡ ಚಿತ್ರರಂಗದ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯಕ್ಕೆ ಸರಿಯಾಗಿ ನಮ್ಮವರು ಅವರ ಬೆನ್ನು ಹತ್ತುತ್ತಿರುವುದೂ ಹೆಚ್ಚಾಗುತ್ತಿದೆ. ಪರಭಾಷಾ ಗಾಯಕ-ಗಾಯಕಿಯರಿಂದಲೇ ಹಾಡಿಸಬೇಕೆಂಬ ಬಯಕೆ ಅದ್ಯಾಕೆ ನಮ್ಮವರದ್ದೋ ಗೊತ್ತಿಲ್ಲ. ಇಂತಹ ಕಹಿ ಅನುಭವಗಳ ನಂತರವಾದರೂ ಇವರೆಲ್ಲ ಪರಭಾಷಾ ವ್ಯಾಮೋಹವನ್ನು ತೊರೆದು ಕನ್ನಡಿಗ ಹಾಡುಗಾರರಿಗೇ ಅವಕಾಶ ಕೊಡುತ್ತಾರೆಯೋ ನೋಡಬೇಕು.

R B P LANKESH, Kannada Weekly Price Rs. 12/- 5-3-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಹಾಗೇ ಸುಮ್ಮನೆ....



ಮುಂಗಾರು ಮಳೆ ಚಿತ್ರದಲ್ಲಿ ಜಯಂತ್ ಕಾಯ್ಕಿಣಿ ಬರೆದ 'ಹಾಗೇ ಸುಮ್ಮನೆ....' ಹಾಡಿನ ಸಾಲು ಈಗ ಸಿನಿಮಾ ಒಂದರ ಟೈಟಲ್ ಆಗುತ್ತಿದೆ.

'ಮುಂಗಾರು ಮಳೆ' ಕಥೆ ಬರೆದ ಪ್ರೀತಂ ಗುಬ್ಬಿ ಈ ಚಿತ್ರದ ಮುಖಾಂತರ ಚೊಚ್ಚಲ ನಿರ್ದೇಶಕರಾಗಲಿದ್ದಾರೆ. ಹಾಗೆಯೇ ಮಳೆ ತಂಡದ ಮನೋಮೂರ್ತಿ, ಜಯಂತ್ ಕಾಯ್ಕಿಣಿ, ಛಾಯಾಗ್ರಾಹಕ ಕೃಷ್ಣ ಮೊದಲಾದವರು ಗುಬ್ಬಿಯ ಬೆನ್ನೆಲುಬಾಗಿ ಕೆಲಸ ಮಾಡಲಿದ್ದಾರೆ.

ಅಂದಹಾಗೆ 'ಮುಂಗಾರು ಮಳೆ ಭಾಗ-೨' ಚಿತ್ರವನ್ನು ಪ್ರೀತಂ ಗುಬ್ಬಿ ನಿರ್ದೇಶಿಸಲಿದ್ದಾರೆ ಎಂದೂ, ಅದರಲ್ಲಿ ಗಣೇಶ್ ಮತ್ತು ರಮ್ಯ ನಟಿಸಲಿದ್ದಾರೆಂದೂ ಘೋಷಿಸಲಾಗಿತ್ತು. ಆದರೆ ಆ ಚಿತ್ರ ಸೆಟ್ಟೇರುವ ಮುನ್ನವೇ ಆ ಯೋಜನೆ ಬಿದ್ದು ಹೋಯಿತು. ಅದಕ್ಕೆ ಕಾರಣ ಗಣೇಶ್ ಹಲವಾರು ಅಡಚಣೆಗಳನ್ನು ತಂದಿದ್ದು ಎಂಬ ಮಾತು ಕೂಡ ಗಾಂಧಿನಗರದಲ್ಲಿ ಕೇಳಿಬಂದಿತ್ತು.

ಈಗ ಗಣೇಶ್ ಬದಲಾಗಿ ಹೊಸ ಕಲಾವಿದರನ್ನು ಹಾಕಿಕೊಂಡು ಪ್ರೀತಂ 'ಹಾಗೇ ಸುಮ್ಮನೆ' ಎನ್ನಲು ಹೊರಟಿದ್ದಾರೆ. ಹಲವಾರು ತೊಂದರೆಗಳ ನಂತರ ಪ್ರಾರಂಭವಾಗುತ್ತಿರುವ ಈ ಚಿತ್ರ 'ಹೀಗೇ ಸುಮ್ಮನೆ'ಯಂತೂ ಆಗುತ್ತಿಲ್ಲ ಎಂಬುದು ವಾಸ್ತವ!



'ನೋ ಹ್ಯಾಪಿ, ಒನ್ಲಿ ಬೀಪಿ'

'ಬೀ ಹ್ಯಾಪಿ, ನೋ ಬೀಪಿ' ಇದು ಪುನೀತ್ ರಾಜ್‌ಕುಮಾರ್ ನಟಿಸಿರುವ 'ಬಿಂದಾಸ್' ಚಿತ್ರದ ಕಿಕ್ಕರ್ ಲೈನ್. ಆದರೆ ಚಿತ್ರ ನೋಡಿ ಪ್ರೇಕ್ಷಕರಂತೂ ಹ್ಯಾಪಿಯಾಗಿಲ್ಲ. ಅದಕ್ಕಿಂತ ವಿಶೇಷವೆಂದರೆ ಬಾಕ್ಸ್ ಆಫೀಸಿನಲ್ಲಿ ಇದರ ಗಳಿಕೆ ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಹಂಚಿಕೆದಾರರ ಬಿಪಿಯಂತೂ ಒಂದೇ ಸಮನೆ ಏರುತ್ತಿದೆಯಂತೆ.

ಹೀಗಾಗಿ ಈ ಚಿತ್ರದ ಕಿಕ್ಕರ್ ಲೈನ್‌ಅನ್ನು 'ನೋ ಹ್ಯಾಪಿ, ಒನ್ಲಿ ಬೀಪಿ' ಎಂದರೆ ಬದಲಾಯಿಸಿದರೆ ಸರಿಹೋಗುತ್ತದೆ ಎಂದು ಕುಹಕವಾಡುತ್ತಿದ್ದಾರೆ ಕೆಲ ಗಾಂಧಿನಗರಿಗರು.

ಕೊಠಾರಿ ಸಹೋದರರ ಖಾನಾ-ಗಾನಾ

ಖಾನಾ, ಗಾನಾ, ಪೀನಾ.... ಇದು ಯುವ ಜನಾಂಗದಲ್ಲಿ ತುಂಬಾ ಚಾಲ್ತಿಯಲ್ಲಿರುವ ಮಾತು. ಈ ಮಾತನ್ನು ನಿಜ ಮಾಡಲು ಹೊರಟಿದ್ದಾರೆ ಬೆಂಗಳೂರಿನ ಸಾಗರ್ ಕ್ಯಾಟರರ್ಸ್‌ನ ಮಾಲೀಕ ಪಂಕಜ್ ಕೊಠಾರಿ. ಮುಂಬೈನಲ್ಲಿರುವ ಅವರ ಸಹೋದರ ಕೌಶಿಕ್ ಕೊಠಾರಿ ಜೊತೆ ಸೇರಿಕೊಂಡು ಅರಮನೆ ಆವರಣದಲ್ಲಿ ಮಾರ್ಚ್ 20, 21, 22ರಂದು 'ರಂಗ್ ದೇ ಬಸಂತಿ' ಎಂಬ ಕಾರ್ಯಕ್ರಮದ ಮೂಲಕ ಹಳೇ ಹಿಂದಿ ಚಿತ್ರ ಗೀತೆಗಳ ರಸದೌತಣ ನೀಡಲಿದ್ದಾರೆ. ಮೊದಲ ದಿನ ರಫಿ, ಎರಡನೇ ದಿನ ರಾಜ್‌ಕಪೂರ್ ಮತ್ತು ಕೊನೇ ದಿನ ನೌಷಾದ್ ಹಾಡುಗಳ ಕಾರ್ಯಕ್ರಮವಿದೆ. ವಿಶೇಷವೆಂದರೆ, ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮಹ್ಮದ್ ರಫಿ ಮಗ ರಫೀನ್ ಷಾದ್ ಬರಲಿದ್ದಾರೆ.

ಇದಕ್ಕಿಂತಲೂ ಮುಖ್ಯವಾದ ಆಕರ್ಷಣೆಯೆಂದರೆ, ಇನ್ನೂರು ರೂಪಾಯಿ ಟಿಕೇಟು ಕೊಂಡವರಿಗೆ ಅಲ್ಲಿ ಸಾಗರ್ ಕ್ಯಾಟರರ್ಸ್‌ನವರು ಸುಮಾರು ಮುನ್ನೂರು ಬಗೆಯ ವಿವಿಧ ತಿಂಡಿತಿನಿಸುಗಳನ್ನು ನೀಡಲಿದ್ದಾರೆ. ಒಬ್ಬ ಸಹೋದರ ಖಾನಾ ಬಗ್ಗೆ ಮತ್ತೊಬ್ಬ ಸಹೋದರ ಗಾನಾ ಬಗ್ಗೆ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಸುಮಾರು ನಾಲ್ಕು ಸಾವಿರ ಜನ ಪ್ರೇಕ್ಷಕರಿಗೆ ಮಾತ್ರ ಅಲ್ಲಿ ಅವಕಾಶವಿರುವುದರಿಂದ ಈ ಖಾನಾ, ಗಾನಾ ಕಾರ್ಯಕ್ರಮ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಕನಿಷ್ಠ ಗಾನಾಕ್ಕಾಗಲ್ಲದಿದ್ದರೂ ಸಾಗರ್ ಅವರ ಖಾನಕ್ಕಾದರೂ ಜನ ಮುಗಿಬಿದ್ದರೆ ಅಲ್ಲಿ ಆಶ್ಚರ್ಯವಿಲ್ಲ.

ನಿರ್ದೇಶಕನಾದ ಆನಂದ

ಬಾಲನಟನಾಗಿ ಚಿತ್ರರಂಗಕ್ಕೆ ಕಾಲಿಟ್ಟು 'ಮುತ್ತಿನಹಾರ', 'ಗೌರಿಗಣೇಶ'ದಂತಹ ಚಿತ್ರಗಳಲ್ಲಿ ನಟಿಸಿ ತನ್ನ ಪ್ರತಿಭೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದವನು ಮಾ. ಆನಂದ್. ಈ ಹುಡುಗ ಬೆಳೆದುನಿಂತ ಮೇಲೆಯೂ ಚಿತ್ರಗಳಲ್ಲಿ ಅಭಿನಯಿಸಿದ್ದಾನೆ. ಆದರೆ ಈ ಯಾವ ಸಿನಿಮಾಗಳೂ ಈತನಿಗೆ ಹೆಸರು ತಂದಿತ್ತಿಲ್ಲ. 'ಫ್ರೆಂಡ್ಸ್' ಮತ್ತು ಅದರ ನಂತರ ಬಂದ ಚಿತ್ರಗಳಲ್ಲಿ ಆನಂದ್‌ಗೆ ದೊರೆತಿದ್ದು ಬರೀ ಸೈಡ್ ರೋಲ್‌ಗಳೇ.

ಇನ್ನು ಹೀರೋ ಆಗಲು ಬೇಕಾದ ಎತ್ತರ, ಫಿಸಿಕ್ ಯಾವುದೂ ಈತನಿಗಿಲ್ಲ. ಇದನ್ನರಿತ ಆನಂದ್ ನಾಯಕನಾಗುವ ದುಸ್ಸಾಹಸವನ್ನು ಮಾಡದೇ, ಸುಮ್ಮನೇ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡು ಸಮಯ ವ್ಯರ್ಥ ಮಾಡಿಕೊಳ್ಳುವ ಬದಲು ತಾನೇ ಒಂದು ಚಿತ್ರವನ್ನು ನಿರ್ದೇಶಿಸುವ ಸಿದ್ಧತೆಯಲ್ಲಿದ್ದಾನೆ.

ಈ ಚಿತ್ರಕ್ಕೆ ಹಸಿರಿನ ಸುಂದರ ಹೊರಾಂಗಣ ಬೇಕಾಗಿರುವುದರಿಂದ ಈ ಬೇಸಿಗೆ ಕಳೆದ ತಕ್ಷಣ ಶೂಟಿಂಗ್ ಆರಂಭಿಸುತ್ತಾರಂತೆ. ಅದೂಅಲ್ಲದೆ ಆನಂದ್ ನಿರ್ದೇಶನದ ಈ ಚಿತ್ರದಲ್ಲಿ ಈಗಾಗಲೇ ಜನಪ್ರಿಯವಾಗಿರುವ ನಾಯಕನಟನೇ ಅಭಿನಯಿಸುತ್ತಿರುವುದು ಮತ್ತೊಂದು ವಿಶೇಷ. ಆದರೆ ಆ ನಟ ಯಾರು ಎಂಬುದನ್ನು ಮಾತ್ರ ಆನಂದ್ ಇನ್ನೂ ಘೋಷಿಸಿಲ್ಲ.



'ನೀನೇ ನೀನೇ' ಎಂದ ಶಿವಧ್ವಜ್

ಶಿವಧ್ವಜ್ ನಟನಾಗಿ ಎಂದೂ ಸುದ್ದಿ ಮಾಡಲಿಲ್ಲ. ಅದರ ಮುಂದುವರಿದ ಭಾಗದಂತೆ ಅವರು ಸುದ್ದಿ ಮಾಡದೆ ನಿರ್ದೇಶಕರಾಗಿದ್ದಾರೆ. ಇವರ ಚೊಚ್ಚಲ ನಿರ್ದೇಶನದ ಚಿತ್ರದ ಹೆಸರು 'ನೀನೇ ನೀನೇ'. ಧ್ಯಾನ್ ಮತ್ತು ಐಶ್ವರ್ಯ ನಾಗ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಶಿವಧ್ವಜ್ ಈ ಚಿತ್ರದಲ್ಲಿ ನಟನೆಯ ಸಾಹಸಕ್ಕೆ ಕೈಹಾಕಿಲ್ಲವಂತೆ. ಚಿತ್ರರಂಗ ಮತ್ತು ಕಿರುತೆರೆಯಲ್ಲಿ ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಕಾಣಿಸಿಕೊಂಡ ಶಿವಧ್ವಜ್ ಈಗ ನಿರ್ದೇಶಕರಾಗಿಯಾದರೂ ಇಲ್ಲೇ ಠಿಕಾಣಿ ಹೂಡುವ ಯತ್ನದಲ್ಲಿದ್ದಾರೆ. ಏನಾದರೂ ಮಾಡುತಿರು ತಮ್ಮಾ... ಎಂಬ ಕವಿವಾಣಿಯನ್ನು ಶಿವಧ್ವಜ್ ಚಾಚೂತಪ್ಪದೆ ಪಾಲಿಸುತ್ತಿದ್ದಾರೆ ಎಂದಷ್ಟೇ ಹೇಳಬಹುದು.

ಕಾಡಿಗೆ ಹೋದವರ 'ಭಯ'



'ಕಾಡಿಗೆ ಹೋದವರು', 'ತುಳಸೀದಳ', 'ಕಂಪನ' ಎಂಬ ಹಾರರ್ ಮತ್ತು ಸಸ್ಪೆನ್ಸ್ ಚಿತ್ರಗಳನ್ನು ನಿರ್ದೇಶಿಸಿದ್ದ ವೇಮಗಲ್ ಜಗನ್ನಾಥ್ ರಾವ್ ಎಂಬ ವ್ಯಕ್ತಿ ಕಳೆದ ಹನ್ನೆರಡು ವರ್ಷಗಳಿಂದ ಕಾಣೆಯಾಗಿದ್ದರು.

ಆದರೆ ಈಗ ಮತ್ತೆ ಕಾಣಿಸಿಕೊಂಡಿರುವ ಇವರು 'www.ಭಯ.com' ಎಂಬ ವಿಲಕ್ಷಣ ಹೆಸರಿನ ಸಸ್ಪೆನ್ಸ್ ಸಿನಿಮಾವನ್ನು ಸೈಲೆಂಟಾಗಿ ಮಾಡಿ ಮುಗಿಸಿದ್ದಾರೆ.

ಕನ್ನಡ ಚಿತ್ರಗಳೆಂದರೆ ಬೆಚ್ಚಿ ಭಯ ಪಡುತ್ತಿರುವ ಪ್ರೇಕ್ಷಕನನ್ನು ಈ ಡಾಟ್ ಕಾಂನ ಭಯ ಚಳಿ ಜ್ವರ ಬರುವಂತೆ ಮಾಡದಿದ್ದರೆ ಸಾಕು.

'ನಿಷೇಧಾಜ್ಞೆ'ಯಲ್ಲಿ ಅಜೀಂ



ಮಾಜಿ ಪೊಲೀಸ್ ಅಧಿಕಾರಿ ಸಾಂಗ್ಲಿಯಾನರಂತೆ ಮತ್ತೊಬ್ಬ ಮಾಜಿ ಪೊಲೀಸಪ್ಪ ಅಬ್ದುಲ್ ಅಜೀಂ ಕೂಡ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಪೊಲೀಸ್ ಕೆಲಸದಲ್ಲಿ ಕೊಂಚ ಒಳ್ಳೆಯ ಹೆಸರೇ ಮಾಡಿದ್ದ ಅಜೀಂ ದೇವೇಗೌಡರ ಸಹವಾಸಕ್ಕೆ ಬಿದ್ದು ರಾಜಕೀಯಕ್ಕೆ ಎಂಟ್ರಿ ನೀಡಿದ್ದರು. ಜೊತೆಗೆ ಕಳೆದ ಬಾರಿ ಚುನಾವಣೆಯಲ್ಲಿ ಬಿನ್ನಿಪೇಟೆಯಿಂದ ಸೋಮಣ್ಣನ ವಿರುದ್ಧ ಸ್ಪರ್ಧಿಸಿ ಸೋತ ಅಜೀಂ ಈಗ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ.

ಆದಿ ಲೋಕೇಶ್ ನಾಯಕನಾಗಿ ನಟಿಸುತ್ತಿರುವ 'ನಿಷೇಧಾಜ್ಞೆ' ಎಂಬ ಚಿತ್ರದಲ್ಲಿ ಅಜೀಂ ಕಳಚಿಟ್ಟಿದ್ದ ಪೊಲೀಸ್ ಬಟ್ಟೆಯನ್ನು ಮತ್ತೆ ತಗುಲಿಸಿಕೊಂಡಿದ್ದಾರೆ. ಅರ್ಥಾತ್ ಈ ಚಿತ್ರದಲ್ಲಿ ಕೂಡ ಪೊಲೀಸ್ ಅಧಿಕಾರಿಯ ಪಾತ್ರವನ್ನೇ ಮಾಡುತ್ತಿದ್ದಾರೆ. ಸಿನಿಮಾದಲ್ಲಿ ನಟಿಸಿ ಜನಪ್ರಿಯತೆ ಗಳಿಸಿದರೆ ಮುಂದಿನ ಎಲೆಕ್ಷನ್ನಿನಲ್ಲಿ ಗೆಲ್ಲಬಹುದು ಎಂಬ ಲೆಕ್ಕಾಚಾರ ಅಜೀಂರದ್ದಿರಬೇಕು.



ಮೆರವಣಿಗೆ ಚಿತ್ರದಲ್ಲಿ ಅಂದಿತಾ ರೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44